ಸೋಮವಾರ, ಜನವರಿ 29, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೃತ್ಯ

ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪಾಲ್ಗೊಂಡಿದ್ದ ಕಲಾವಿದೆಯರು ರಾಷ್ಟ್ರಪತಿ ಭವನದಲ್ಲಿ ಭಾನುವಾರ ನೃತ್ಯ ಪ್ರದರ್ಶಿಸಿದರು



II ಪ್ರಜಾವಾಣಿ
ಸೋಮವಾರ • ಜನವರಿ 29, 2024

ಪ್ರಜಾ ಮತ

ಜನತಂತ್ರದ ಹಬ್ಬ 2024

ಚಾಮರಾಜನಗರ ಮೀಸಲು ಕ್ಷೇತ್ರ: ಎರಡೂ ಪಕ್ಷಗಳಲ್ಲಿ ಈ ಬಾರಿ ಹೊಸ ಮುಖಗಳ ಸ್ಪರ್ಧೆ ಸಾಧ್ಯತೆ

ಸ್ಥಳೀಯರಿಗೆ ಟಿಕೆಟ್: ಬಿಜೆಪಿಯಲ್ಲಿ ಕೂಗು

• ಸೂರ್ಯನಾರಾಯಣ ವಿ.

ಚಾಮರಾಜನಗರ: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ನಲ್ಲಿ ಟಿಕೆಟ್ ಆಕಾಂಕ್ಷಿಗಳ ಪಟ್ಟಿ ದೊಡ್ಡದಾಗಿದ್ದು, ಸ್ಥಳೀಯರಿಗೇ ಟಿಕೆಟ್ ನೀಡಬೇಕು ಎಂಬ ಕೂಗು ಬಿಜೆಪಿಯಲ್ಲಿ ಕೇಳುತ್ತಿದೆ.

ಚಾಮರಾಜನಗರ ಜಿಲ್ಲೆಯ ನಾಲ್ಕು (ಚಾಮರಾಜನಗರ, ಕೊಳ್ಳೇಗಾಲ (ಎಸ್‌ಸಿ ಮೀಸಲು), ಗುಂಡ್ಲುಪೇಟೆ ಮತ್ತು ಹನೂರು) ಮತ್ತು ಮೈಸೂರು ಜಿಲ್ಲೆಯ ನಾಲ್ಕು (ನಂಜನಗೂಡು (ಎಸ್‌ಸಿ ಮೀಸಲು), ತಿ.ನರಸೀಪುರ (ಎಸ್‌ಸಿ ಮೀಸಲು), ಎಚ್‌.ಡಿ.ಕೋಟೆ (ಎಸ್‌ಟಿ ಮೀಸಲು) ಹಾಗೂ ವರುಣ) ಸೇರಿದಂತೆ ಎಂಟು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಈ ಕ್ಷೇತ್ರದಲ್ಲಿ ಈ ಬಾರಿ ಎರಡೂ ಪಕ್ಷಗಳು ಹೊಸ ಮುಖಗಳನ್ನು ಕಣಕ್ಕಿಳಿಸುವ ಸಾಧ್ಯತೆ ಹೆಚ್ಚಿದೆ.

ಸ್ಥಳೀಯರಿಗೆ ಟಿಕೆಟ್ ಕೊಡಿ ಎಂದು ಮುಖಂಡರು ಹೇಳುತ್ತಿರುವುದು ನಿಜ. ಅವರ ಅಭಿಪ್ರಾಯವನ್ನು ವರಿಷ್ಠರ ಗಮನಕ್ಕೆ ತರುವೆ
ಸಿ.ಎಸ್.ನಿರಂಜನಕುಮಾರ್, ಬಿಜೆಪಿ ಚಾಮರಾಜನಗರ ಜಿಲ್ಲಾ ಘಟಕದ ಅಧ್ಯಕ್ಷ

'ಇನ್ನು ಮುಂದೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ; ರಾಜಕೀಯದಿಂದ ನಿವೃತ್ತಿ ಪಡೆಯುತ್ತೇನೆ' ಎಂದು ಬಿಜೆಪಿಯ ಹಾಲಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರು ಈಗಾಗಲೇ ಘೋಷಿಸಿದ್ದಾರೆ. 2009 ಮತ್ತು 2014ರಲ್ಲಿ ಕಾಂಗ್ರೆಸ್‌ನಿಂದ ಸಂಸದರಾಗಿದ್ದ, ಕಳೆದ ಚುನಾವಣೆಯಲ್ಲಿ ಸೋಲು ಕಂಡಿದ್ದ ಆರ್.ಧ್ರುವನಾರಾಯಣ ನಿಧನರಾಗಿದ್ದಾರೆ. ಹೀಗಾಗಿ ಈ ಬಾರಿ ಚುನಾವಣಾ ಕಣದ ಹುರಿಯಾಳುಗಳು ಯಾರಾಗಬಹುದು ಎಂಬ ಕುತೂಹಲ ಮೂಡಿದೆ.

ಕಳೆದ ಬಾರಿ ಗೆದ್ದು ಕ್ಷೇತ್ರದಲ್ಲಿ ಖಾತೆ ತೆರೆದಿರುವ ಬಿಜೆಪಿಯಲ್ಲಿ ಆಕಾಂಕ್ಷಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಶ್ರೀನಿವಾಸ ಪ್ರಸಾದ್ ಕಣದಿಂದ ಹಿಂದೆ ಸರಿದಿರುವುದರಿಂದ ಕ್ಷೇತ್ರದವರು ಮಾತ್ರವಲ್ಲದೆ, ಹೊರ ಜಿಲ್ಲೆಗಳ ಮುಖಂಡರು ಕೂಡ ಕ್ಷೇತ್ರದ ಮೇಲೆ ಕಣ್ಣಿಟ್ಟಿದ್ದಾರೆ.

ಮಾಜಿ ಸಚಿವ ಕೋಟೆ ಶಿವಣ್ಣ, ಕೊಳ್ಳೇಗಾಲದ ಮಾಜಿ ಶಾಸಕ ಎಸ್. ಬಾಲರಾಜ್, ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂ, ನಿವೃತ್ತ ಐಎಫ್‌ಎಸ್ ಅಧಿಕಾರಿ ಆರ್. ರಾಜು, ಶ್ರೀನಿವಾಸ ಪ್ರಸಾದ್ ಅವರ ಕಿರಿಯ ಅಳಿಯ ಡಾ.ಎನ್.ಎಸ್. ಮೋಹನ್, ಮತ್ತೊಬ್ಬ ಅಳಿಯ ಹರ್ಷವರ್ಧನ್, ವಿಧಾನಪರಿಷತ್‌ನ ಮಾಜಿ ಸದಸ್ಯ ಸಿ.ರಮೇಶ್, ಅವರ ಮಗ ಅಬುನ್ ರಮೇಶ್, ದಲಿತ ಮುಖಂಡ ವೆಂಕಟರಮಣಸ್ವಾಮಿ (ಪಾಪು), ಚಿತ್ರ ನಿರ್ದೇಶಕ ಎಸ್.ಮಹೇಂದರ್, ಬೆಂಗಳೂರಿನ ಮುಖಂಡ ರವಿಪ್ರಕಾಶ್ ಹೆಸರು ಚಾಲ್ತಿಯಲ್ಲಿದೆ.

ಕೊಳ್ಳೇಗಾಲದ ಮಾಜಿ ಶಾಸಕ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಎನ್.ಮಹೇಶ್, ತಾವು ಆಕಾಂಕ್ಷಿ ಎಂದು ಹೇಳಿಕೊಂಡಿಲ್ಲ. ಆದರೆ, ಅವರ ಹೆಸರೂ ಚರ್ಚೆಯಲ್ಲಿದೆ.

ಡಾ.ಎ.ಎಸ್.ಮೋಹನ್, ಕೆ.ಶಿವರಾಂ, ಆರ್.ರಾಜು, ರವಿಪ್ರಕಾಶ್ ಹೊರ ಜಿಲ್ಲೆಯವರಾಗಿದ್ದಾರೆ. 'ಇದು ಸ್ಥಳೀಯ ಆಕಾಂಕ್ಷಿಗಳಿಗೆ ಪಥ್ಯವಾಗಿಲ್ಲ. ಯಾರಿಗಾದರೂ ಟಿಕೆಟ್ ಕೊಡಿ ಆದರೆ, ಸ್ಥಳೀಯರಿಗೇ ಕೊಡಿ' ಎಂದು ಕೆಲವರು ಪಕ್ಷದ ನಾಯಕರ ಮೇಲೆ ಒತ್ತಡ ಹಾಕಲು ಆರಂಭಿಸಿದ್ದಾರೆ.

'ಇತ್ತೀಚೆಗೆ ವೆಂಕಟರಮಣಸ್ವಾಮಿ ಅವರ ಅಭಿಮಾನಿ ಬಳಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಮತ್ತು ಜಿಲ್ಲಾ ಘಟಕದ ನೂತನ ಅಧ್ಯಕ್ಷ ಸಿ.ಎಸ್.ನಿರಂಜನಕುಮಾರ್ ಅವರ ಸಮ್ಮುಖದಲ್ಲೇ ಸ್ಥಳೀಯರಿಗೇ ಟಿಕೆಟ್ ಕೊಡಬೇಕು ಎಂಬ ಕೂಗು ಎದ್ದಿದೆ. ಮಹದೇವಯ್ಯ ಅವರು ಈ ವಿಚಾರವನ್ನು ಪ್ರಸ್ತಾಪಿಸಿದ್ದರು, ಇತರರು ಇದನ್ನು ಅನುಮೋದಿಸಿದ್ದಾರೆ. ಕೋಟೆ ಶಿವಣ್ಣ ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಷ್ಟೇ ಅಲ್ಲದೆ, ಈ ಬಾರಿ ಎಡಗೈ ಸಮುದಾಯಕ್ಕೆ ಟಿಕೆಟ್ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಕೆ.ಶಿವರಾಂ ಅವರು ಹಲವು ಚುನಾವಣೆಗಳಿಂದ ಇಲ್ಲಿ ಸ್ಪರ್ಧಿಸಲು ಪ್ರಯತ್ನಿಸುತ್ತಿದ್ದಾರೆ. ಮೋಹನ್ ಅವರ ಹೆಸರು ಕಳೆದ ಲೋಕಸಭಾ ಚುನಾವಣೆಯಲ್ಲೂ ಕೇಳಿ ಬಂದಿತ್ತು. ಈ ಬಾರಿ ಅವರು ಸರ್ಕಾರಿ ಉದ್ಯೋಗವನ್ನು ತೊರೆದು ಪೂರ್ಣ ಪ್ರಮಾಣದಲ್ಲಿ ರಾಜಕೀಯಕ್ಕೆ ಬಂದಿದ್ದಾರೆ.

ಕಾಂಗ್ರೆಸ್‌ನಲ್ಲೂ ಇದೆ ಪೈಪೋಟಿ

ಕಾಂಗ್ರೆಸ್‌ನಲ್ಲಿ ಎಂಟು ಮಂದಿಯ ಹೆಸರು ಆಕಾಂಕ್ಷಿಗಳ ಪಟ್ಟಿಯಲ್ಲಿದೆ. ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್, ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ ಅವರ ಮಗ ಸುನೀಲ್ ಬೋಸ್, ಕೊಳ್ಳೇಗಾಲದ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಮಾಜಿ ಸಚಿವ ಬಿ.ಸೋಮಶೇಖರ್, ಮುಖಂಡರಾದ ಜೆ.ಸಿ.ಕಿರಣ್, ಡಿ.ಎನ್.ನಟರಾಜ್, ಪ್ರೊ.ಮಹದೇವು ಅವರ ಹೆಸರು ಕೇಳಿಬರುತ್ತಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ಪರ್ಧಿಸಲಿದ್ದಾರೆ ಎಂಬ ವದಂತಿ ಇತ್ತೀಚೆಗೆ ಹಬ್ಬಿತ್ತು. ಸಚಿವ ಡಾ.ಎಚ್‌.ಸಿ.ಮಹದೇವಪ್ಪ ಅವರ ಹೆಸರು ಕೇಳಿ ಬರುತ್ತಿದೆಯಾದರೂ, ಅವರು ಒಲವು ಹೊಂದಿಲ್ಲ. ಮಗನಿಗೆ ಟಿಕೆಟ್ ಕೊಡಿಸಲು ಕಸರತ್ತು ನಡೆಸುತ್ತಿದ್ದಾರೆ ಎನ್ನಲಾಗಿದೆ.

ಧ್ರುವನಾರಾಯಣ ಅವರ ಮಗ, ನಂಜನಗೂಡು ಶಾಸಕ ದರ್ಶನ್ ಅವರ ಹೆಸರೂ ಚರ್ಚೆಯಲ್ಲಿದೆ.

ಸುದ್ದಿ 2 ನಿಮಿಷ

ಕೊಡಗಿಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರಕ್ಕಾಗಿ ಧ್ವನಿ ಎತ್ತುವೆ: ಪ್ರತಾಪ

ಮಡಿಕೇರಿ: 'ಕೊಡಗು ಜಿಲ್ಲೆ ಪ್ರತ್ಯೇಕ ಲೋಕಸಭಾ ಕ್ಷೇತ್ರವನ್ನು ಹೊಂದುವಂತಾಗಲು ನಾನು ಪ್ರಬಲವಾದ ಧ್ವನಿ ಎತ್ತುತ್ತೇನೆ' ಎಂದು ಸಂಸದ ಪ್ರತಾಪ ಸಿಂಹ ತಿಳಿಸಿದರು.

'ವಿಶೇಷ ಸಂಸ್ಕೃತಿ, ಭಾಷೆ, ಆಚಾರ–ವಿಚಾರಗಳನ್ನು ಹೊಂದಿರುವ ಪ್ರದೇಶ ಕೊಡಗು. ಜನಸಂಖ್ಯೆ ಕಡಿಮೆ ಇದೆ ಎಂಬ ಕಾರಣಕ್ಕೆ ಪ್ರತ್ಯೇಕ ಕ್ಷೇತ್ರವಾಗಿಲ್ಲ. ಲಕ್ಷದ್ವೀಪದ ಮಾದರಿಯಲ್ಲಿ ಪ್ರತ್ಯೇಕ ಕ್ಷೇತ್ರ ಮಾಡಬೇಕು' ಎಂದು ಇಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರತಿಪಾದಿಸಿದರು.



'2026ರ ವೇಳೆಗೆ ಕ್ಷೇತ್ರ ಮರುವಿಂಗಡಣೆ ಆಗುವ ಸಾಧ್ಯತೆ ಇದೆ. ಆಗ ಕೊಡಗಿಗೆ ಪ್ರತ್ಯೇಕ ಕ್ಷೇತ್ರ ಮಾಡುವಂತೆ ಧ್ವನಿ ಎತ್ತುತ್ತೇನೆ' ಎಂದರು.

'ಶಾಮನೂರು ಶಿವಶಂಕರಪ್ಪ ಸೇರಿದಂತೆ ಇನ್ನೂ ಹಲವು ಕಾಂಗ್ರೆಸ್ ನಾಯಕರಿಗೆ ದೇಶದ ವಿಚಾರ ಬಂದಾಗ ನರೇಂದ್ರ ಮೋದಿ ಅವರೇ ಪ್ರಧಾನಿ ಆಗಬೇಕು ಎಂಬ ಇಚ್ಛೆ ಇದೆ' ಎಂದು ಪ್ರತಿಕ್ರಿಯಿಸಿದರು.

20 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು

ಚಿತ್ರದುರ್ಗ: 'ಮುಂಬರುವ ಲೋಕಸಭೆ ಚುನಾವಣೆಯಲ್ಲಿ ರಾಜ್ಯದ 15ರಿಂದ 20 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸುವ ವಿಶ್ವಾಸವಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

'28 ಕ್ಷೇತ್ರಗಳಲ್ಲೂ ಗೆಲ್ಲುವುದಾಗಿ ಬಿಜೆಪಿಯಂತೆ ಸುಳ್ಳು ಹೇಳುವುದಿಲ್ಲ. ಚುನಾವಣೆ ಬಗ್ಗೆ ಸಮೀಕ್ಷೆ ನಡೆಸಲಾಗಿದೆ. ಅದರ ಆಧಾರದ ಮೇರೆಗೆ ಮಾತನಾಡುತ್ತಿದ್ದೇನೆ' ಎಂದು ಭಾನುವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದರು.

'ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ವ್ಯವಸ್ಥೆ ಜಾರಿಗೊಳಿಸುವ ನಿಟ್ಟಿನಲ್ಲಿ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಹೇಳಿದರು.

'ಎಚ್‌ಡಿಕೆ ಯಾರ ಕಾಲನ್ನಾದರೂ ಹಿಡಿಯುತ್ತಾರೆ'

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: 'ಯಾರ ಕಾಲು ಹಿಡಿದರೂ ಪರವಾಗಿಲ್ಲ. ಮತ್ತೆ ಮುಖ್ಯಮಂತ್ರಿ ಆಗಬೇಕು ಇಲ್ಲವೇ ಕೇಂದ್ರ ಸಚಿವನಾಗಬೇಕು ಎನ್ನುವುದು ಎಚ್‌. ಡಿ.ಕುಮಾರಸ್ವಾಮಿ ಅವರ ಮನಸ್ಥಿತಿ' ಎಂದು ಕಾಂಗ್ರೆಸ್ ನಾಯಕ ಎಂ.ವೀರಪ್ಪ ಮೊಯಿಲಿ ಟೀಕಿಸಿದ್ದಾರೆ.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಅವರಿಗೆ ನಾಯಕತ್ವದ ಗುಣ ಇತ್ತು. ಆದರೆ ಅವರ ನಿಲುವುಗಳು ಅವರ ವ್ಯಕ್ತಿತ್ವ ಮತ್ತು ವರ್ಚಸ್ಸು ಕಳೆಯುತ್ತಿವೆ ಎಂದು ವಿಶ್ಲೇಷಿಸಿದರು.

ಕಾಂಗ್ರೆಸ್ ಹಾಗೂ ಮೈತ್ರಿಕೂಟವು ನಿತೀಶ್ ಕುಮಾರ್ ಅವರನ್ನು ನಂಬಿಕೊಂಡೇ ಇಲ್ಲ. ಅವರನ್ನು ನಂಬಿಕೊಂಡಿದ್ದರೆ ತಿಕ್ಕಾಟ ಆಗುತ್ತಿತ್ತು. ಮಮತಾ ಬ್ಯಾನರ್ಜಿ ಯಾವತ್ತೂ ಬಿಜೆಪಿ ಪರವಾಗಿ ಇಲ್ಲ. ಸದಾ ಬಿಜೆಪಿ ಪರವಾಗಿ ಇದ್ದ ನಿತೀಶ್ ಅವರದ್ದು ಅತಂತ್ರ ಮನಸ್ಥಿತಿ ಎಂದು ಮೊಯಿಲಿ ಟೀಕಿಸಿದರು.

ಜೆಡಿಎಸ್ – ಬಿಜೆಪಿ ಮೈತ್ರಿ ನಂತರ ಸಂಘ ಪರಿವಾರದ ಚಟುವಟಿಕೆ ಮುನ್ನೆಲೆಗೆ

ಮಂಡ್ಯ: ಹಳ್ಳಿಗಳಲ್ಲೂ ಕೇಸರಿ ಪಡೆ ಸಜ್ಜು

• ಎಂ.ಎನ್.ಯೋಗೇಶ್

ಮಂಡ್ಯ: ಕುವೆಂಪು ಪ್ರೇರಿತ ಪ್ರಗತಿಪರ ಚಿಂತನೆ, ರೈತ ಹೋರಾಟಕ್ಕೆ ಪ್ರಸಿದ್ಧಿ ಪಡೆದಿದ್ದ ಸಕ್ಕರೆ ಜಿಲ್ಲೆ ಮಂಡ್ಯ ಇತ್ತೀಚೆಗೆ ಧರ್ಮ ಪ್ರೇರಿತ ವಿಚಾರಗಳತ್ತ ಹೊರಳುತ್ತಿದೆ. ಜಿಲ್ಲೆಯ ಹಳ್ಳಿಗಳಲ್ಲೂ ಕೇಸರಿ ಪಡೆ ಹೆಚ್ಚುತ್ತಿದ್ದು ಯುವಜನರು ಹಸಿರು ಶಾಲು ಬದಲಾಗಿ ಕೇಸರಿ ಟವೆಲ್ ಧರಿಸಿ ಓಡಾಡುತ್ತಿದ್ದಾರೆ. ಈ ಚಟುವಟಿಕೆಗಳಿಗೆ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಯ ನಂತರ ಬಲ ಬಂದಿದೆ ಎಂದು ಚರ್ಚೆಯಾಗುತ್ತಿದೆ.

ಜಿಲ್ಲೆಯ ವಿವಿಧೆಡೆ ಮೊದಲಿನಿಂದಲೂ ಆರ್‌ಎಸ್‌ಎಸ್, ಬಜರಂಗ ದಳ, ವಿಎಚ್‌ಪಿ ಚಟುವಟಿಕೆಗಳು ನಡೆಯುತ್ತಿವೆ. ಆದರೆ, ಇವುಗಳಿಗೆ ಬಲ ಇರಲಿಲ್ಲವಾದ್ದರಿಂದ ಮುನ್ನೆಲೆಗೆ ಬಂದಿರಲಿಲ್ಲ. ಆದರೆ ಜೆಡಿಎಸ್ ಈಗ ಬಿಜೆಪಿಯ ಮಿತ್ರಪಕ್ಷವಾದ್ದರಿಂದ ಸಂಘ ಪರಿವಾರದ ಚಟುವಟಿಕೆಗಳು ರಾಜಕೀಯ ರೂಪ ಪಡೆಯುತ್ತಿದ್ದು ಚರ್ಚೆಗೆ ಗ್ರಾಸವಾಗುತ್ತಿದೆ.

ರಾಜಕೀಯವಾಗಿ ಅಸಮರ್ಥರಾದ ಬಿಜೆಪಿ ನಾಯಕರು ಭಾವನಾತ್ಮಕ ವಿಚಾರಗಳನ್ನಿಟ್ಟುಕೊಂಡು ಹೃದಯವಂತರಾದ ಮಂಡ್ಯ ಜನರನ್ನು ಖೆಡ್ಡಾಗೆ ಕೆಡವಲು ಯತ್ನಿಸುತ್ತಿದ್ದಾರೆ
ದೇವನೂರ ಮಹಾದೇವ, ಸಾಹಿತಿ



ಪಾಂಡವಪುರದಲ್ಲಿ ಉದ್ಘಾಟನೆಗೊಂಡ ಆರ್‌ಎಸ್‌ಎಸ್ ಕಚೇರಿ ಕಟ್ಟಡ

'ಯುವ ಜನರ ದಾರಿ ತಪ್ಪಿಸುವ ಸಾಧ್ಯತೆ'

'ಮುಂಬರುವ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣದ ಮೂಡಲಬಾಗಿಲು ಹನುಮಾನ್ ದೇವಾಲಯ ಸೇರಿ ಹಲವು ಧರ್ಮಪ್ರೇರಿತ ವಿಚಾರಗಳು ಮುನ್ನೆಲೆಗೆ ಬರಲಿದ್ದು ಕಾನೂನು– ಸುವ್ಯವಸ್ಥೆಗೆ ಧಕ್ಕೆಯಾಗಲಿದೆ. ಜೆಡಿಎಸ್ ಬೆಂಬಲದೊಂದಿಗೆ ಬಿಜೆಪಿ ಹಾಗೂ ಸಂಘ ಪರಿವಾರದ ನಾಯಕರು ಯುವಜನರನ್ನು ಹಾದಿ ತಪ್ಪಿಸುವ ಸಾಧ್ಯತೆ ಇದೆ. ಪೊಲೀಸರು ಇದನ್ನು ತಡೆಯಬೇಕು' ಎಂದು ಅಖಿಲ ಭಾರತ ವಕೀಲರ ಒಕ್ಕೂಟ ಜಿಲ್ಲಾ ಘಟಕದ ಅಧ್ಯಕ್ಷ ಬಿ.ಟಿ.ವಿಶ್ವನಾಥ್ ಹೇಳಿದರು.

ಇದರ ಪರಿಣಾಮ ದಿಂದಾಗಿಯೇ ಪಾಂಡವಪುರ ಪಟ್ಟಣದಲ್ಲಿ ಆರ್‌ಎಸ್‌ಎಸ್‌ನ ದೊಡ್ಡ ಕಚೇರಿ ತಲೆ ಎತ್ತಿದೆ. ಜೆಡಿಎಸ್ ಮುಖಂಡರೇ ಸ್ವಂತ ಖರ್ಚಿನಿಂದ ಕಟ್ಟಡ ನಿರ್ಮಿಸಿಕೊಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ. ತಾಲ್ಲೂಕಿನ ಕೆರಗೋಡು ಗ್ರಾಮದಲ್ಲಿ 108 ಅಡಿ ಎತ್ತರದ ಧ್ವಜಸ್ಥಂಭ ನಿರ್ಮಾಣ, ಬೃಹತ್ ಹನುಮ ಧ್ವಜಾರೋಹಣ ಮುಂತಾದ ಘಟನೆಗಳು ಬಿಜೆಪಿ-ಜೆಡಿಎಸ್ ಹಾಗೂ ಕಾಂಗ್ರೆಸ್ ನಡುವಿನ ತಿಕ್ಕಾಟಕ್ಕೆ ಕಾರಣವಾಗಿದೆ. ಸದ್ಯ ಕೆರಗೋಡು ಗ್ರಾಮದಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿದೆ.

ಜಿಲ್ಲೆಯ ಹಲವು ಹಳ್ಳಿಗಳಲ್ಲಿ ಸರಣಿ ರಾಮಮಂದಿರಗಳು ಉದ್ಘಾಟನೆಯಾಗುತ್ತಿವೆ. ಜೆಡಿಎಸ್ ಮುಖಂಡರ ನೇತೃತ್ವದಲ್ಲೇ ಪ್ರಾಣ ಪ್ರತಿಷ್ಠಾಪನೆಯೂ ನಡೆಯುತ್ತಿದೆ. ಜ.22ರಂದು ಅಯೋಧ್ಯೆ ರಾಮಮಂದಿರ ಉದ್ಘಾಟನೆಗೊಂಡ ದಿನವೇ ಹಲವು ರಾಮಮಂದಿರಗಳು ಲೋಕಾರ್ಪಣೆಗೊಂಡಿವೆ.

ಕಾರ್ಯಕರ್ತರ ಬೆಂಬಲ: ಪ್ರತಿ ಚುನಾವಣೆಯಲ್ಲಿ ಜಿಲ್ಲೆಯಾದ್ಯಂತ ಕಾಂಗ್ರೆಸ್–ಜೆಡಿಎಸ್ ಪಕ್ಷಗಳು ತೊಡೆತಟ್ಟಿ ನಿಲ್ಲುತ್ತಿದ್ದವು. ಬಿಜೆಪಿ ಅಭ್ಯರ್ಥಿಗಳು ಠೇವಣಿ ಕಳೆದುಕೊಳ್ಳುತ್ತಿದ್ದರು. 2019ರ ವಿಧಾನಸಭೆ ಉಪ ಚುನಾವಣೆ ಹೊರತುಪಡಿಸಿ ಜಿಲ್ಲೆಯಲ್ಲಿ ಬಿಜೆಪಿ ಗೆದ್ದಿಲ್ಲ. ಜೆಡಿಎಸ್‌ಗೆ ಹಳ್ಳಿಹಳ್ಳಿಗಳಲ್ಲಿ ಕಾರ್ಯಕರ್ತರಿದ್ದು ಸಂಘಟನೆ ಬಲವಾಗಿದೆ. ಮೈತ್ರಿಯಿಂದಾಗಿ ಈ ಬಲ ಬಿಜೆಪಿಗೂ ಸಿಕ್ಕಿದ್ದು ಸಂಘ ಪರಿವಾರದ ಮುಖಂಡರು ತಮ್ಮ ಚಟುವಟಿಕೆ ವಿಸ್ತರಿಸುತ್ತಿದ್ದಾರೆ ಎಂದು ಪ್ರಗತಿಪರ ಸಂಘಟನೆಗಳ ಮುಖಂಡರು ಹೇಳುತ್ತಾರೆ.

'ಮಂಡ್ಯ ಜಿಲ್ಲೆಯಲ್ಲಿ ಎಲ್ಲಾ ಸಮುದಾಯಗಳ ಜನರು ಅಣ್ಣ–ತಮ್ಮಂದಿರ ರೀತಿಯಲ್ಲಿ ಬದುಕುತ್ತಿದ್ದೇವೆ. ನಮ್ಮ ಜಿಲ್ಲೆಗೆ ಪೆರಿಯಾರ್ ಅವರಂತಹ ಪ್ರಗತಿಪರರು ಬಂದು ಹೋಗಿದ್ದಾರೆ. ಆದರೆ ಇತ್ತೀಚೆಗೆ ಯುವಜನರ ದಾರಿ ತಪ್ಪಿಸುವ ಚಟುವಟಿಕೆಗಳು ಮುನ್ನೆಲೆಗೆ ಬಂದಿರುವುದು ನೋವಿನ ಸಂಗತಿ' ಎಂದು ದಸಂಸ ಮುಖಂಡ ಗುರುಪ್ರಸಾದ್ ಕೆರಗೋಡು ಹೇಳಿದರು.

'ಶಾಮನೂರು ಹೇಳಿಕೆ: ಒಳ್ಳೆಯ ಬೆಳವಣಿಗೆ'

ಪ್ರಜಾವಾಣಿ ವಾರ್ತೆ

ದಾವಣಗೆರೆ: ಶಿವಮೊಗ್ಗದ ಬಿಜೆಪಿ ಸಂಸದ ಬಿ.ವೈ. ರಾಘವೇಂದ್ರ ಅವರನ್ನು ಮತ್ತೆ ಗೆಲ್ಲಿಸುವಂತೆ ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಹೇಳಿರುವುದು ಉತ್ತಮ ಬೆಳವಣಿಗೆ ಎಂದು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅಭಿಪ್ರಾಯಪಟ್ಟರು.

'ಶಾಮನೂರು ಶಿವಶಂಕರಪ್ಪ ಅವರು ಬಿಜೆಪಿಯವರು ಗೆಲ್ಲಲಿ ಎಂದು ಹಾರೈಸಿರುವುದು ಒಳ್ಳೆಯದೇ ಆಯಿತು.



ಜಗದೀಶ ಶೆಟ್ಟರ್

ನಾನು ಕೆಲವು ಘಟನೆಗಳಿಂದ ಬೇಸರಗೊಂಡು ಹಿಂದೆ ಬಿಜೆಪಿ ತೊರೆದಿದ್ದೆ. ಕಾಂಗ್ರೆಸ್‌ಗೆ ಸೇರಿದಾಗ ಆಗಲಿ, ಹೊರಬಂದಿರುವುದರಿಂದಾಗಲಿ ಯಾವುದೇ ಪಾಪಪ್ರಜ್ಞೆ ಅಥವಾ ಪಶ್ಚಾತ್ತಾಪ ಇಲ್ಲ' ಎಂದು ಅವರು ಹೇಳಿದರು.

'ಮೋದಿಗೆ ಮಾತ್ರ ದೇಶ ಆಳುವ ಶಕ್ತಿ'

ಬಿ.ಎಸ್. ಯಡಿಯೂರಪ್ಪ ಜೊತೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ದೇವೇಗೌಡ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): 'ಸದ್ಯದ ಸ್ಥಿತಿಯಲ್ಲಿ ಈ ದೇಶವನ್ನು ಆಳುವ ಶಕ್ತಿ ಇರುವುದು ನರೇಂದ್ರ ಮೋದಿ ಅವರಿಗೆ ಮಾತ್ರ' ಎಂದು ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ ಹೇಳಿದರು.

ಸಮೀಪದ ಚಂದ್ರವನ ಆಶ್ರಮದಲ್ಲಿ ಭಾನುವಾರ ನಡೆದ ಮರಿದೇವರು ಶಿವಯೋಗಿ ಸ್ವಾಮೀಜಿ ಅವರ 130ನೇ ಜಯಂತಿ ಹಾಗೂ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಅವರ 25ನೇ ಪಟ್ಟಾಧಿಕಾರ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಡಿ.ಎಂ.ಎಸ್ ಆಯುರ್ವೇದ ಆಸ್ಪತ್ರೆ ಉದ್ಘಾಟಿಸಿ ಅವರು ಮಾತನಾಡಿದರು.

'ಸುಮಾರು 150 ಕೋಟಿ ಜನ ಇರುವ ಈ ದೇಶವನ್ನು ಮುನ್ನಡೆಸುವ ಸಮರ್ಥ ನಾಯಕ ಮೋದಿ ಬಿಟ್ಟರೆ ಬೇರೆ ಯಾರೂ ಇಲ್ಲ. ಅವರು ಗಂಗಾ ನದಿ ಸ್ವಚ್ಛ ಮಾಡಿಸಿದ್ದಾರೆ. ಕಾಶಿಗೆ ಕಾಯಕಲ್ಪ ನೀಡಿದ್ದಾರೆ. ಮುಖ್ಯ ಯಜಮಾನನಾಗಿ ಅಯೋಧ್ಯೆಯಲ್ಲಿ ಬಾಲ ರಾಮನ ಪ್ರಾಣ ಪ್ರತಿಷ್ಠಾಪನೆ ಮಾಡಿದ್ದಾರೆ. ಮುಸ್ಲಿಮರು ಸೇರಿದಂತೆ ಎಲ್ಲರ ಒಳಿತನ್ನೂ ಬಯಸುವ ಅವರು ಮತ್ತೆ ಪ್ರಧಾನಿಯಾಗಲಿದ್ದಾರೆ' ಎಂದರು.



ಶ್ರೀರಂಗಪಟ್ಟಣ ಸಮೀಪದ ಚಂದ್ರವನ ಆಶ್ರಮದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ ಮತ್ತು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ 'ಚಂದ್ರವನ ಸಿರಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಶಾಸಕ ಜಿ.ಟಿ. ದೇವೇಗೌಡ, ಸಿ.ಎಸ್. ಪುಟ್ಟರಾಜು, ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸೋಮೇಶ್ವರನಾಥ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ನಿರ್ಮಲಾನಂದನಾಥ ಸ್ವಾಮೀಜಿ ಪಾಲ್ಗೊಂಡಿದ್ದರು

'ಬಿಹಾರದಲ್ಲಿ ಭಾನುವಾರ ನಡೆದಿರುವ ರಾಜಕೀಯ ಬೆಳವಣಿಗೆಯು ಮೋದಿ ಮತ್ತೆ ಪ್ರಧಾನಿ ಆಗುತ್ತಾರೆ ಎಂಬುದಕ್ಕೆ ಶುಭ ಸೂಚನೆಯಾಗಿದೆ' ಎಂದರು.

'ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿ, ವಿರೋಧ ಪಕ್ಷದ ನಾಯಕರಾಗಿ ಉತ್ತಮ ಕೆಲಸ ಮಾಡಿದ್ದಾರೆ. ರೈತರಿಗಾಗಿ ಪಾದಯಾತ್ರೆಯನ್ನೂ ಕೈಗೊಂಡಿದ್ದಾರೆ. ಅವರ ಮಗ ಬಿ.ವೈ. ವಿಜಯೇಂದ್ರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾದ ಸಂದರ್ಭದಲ್ಲಿ ಆನಂದದಿಂದ ಮನ ತುಂಬಿ ಹಾರೈಸಿದ್ದೇನೆ. ರಾಜಕೀಯದಲ್ಲಿ ಯಾರೂ ಮಿತ್ರರಲ್ಲ, ಯಾರೂ ಶತ್ರುಗಳಲ್ಲ ಎಂಬುದಕ್ಕೆ ಯಡಿಯೂರಪ್ಪ ಮತ್ತು ನನ್ನ ನಡುವಿನ ಬಾಂಧವ್ಯವೇ ಸಾಕ್ಷಿ' ಎಂದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಧ್ಯಾನ ಮಂದಿರ ಉದ್ಘಾಟಿಸಿ ಮಾತನಾಡಿ, 'ದೇವೇಗೌಡರು ಈ ದೇಶವನ್ನಾಳಿದ ಅನುಭವಿ ರಾಜಕಾರಣಿ. ಅವರ ಸೇವೆ ಮತ್ತಷ್ಟು ವರ್ಷ ನಾಡಿಗೆ ಸಿಗಬೇಕು' ಎಂಬ ಆಶಯ ವ್ಯಕ್ತಪಡಿಸಿದರು.

ಆಶ್ರಮದ ಪೀಠಾಧ್ಯಕ್ಷ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಅವರು ದೇವೇಗೌಡ ಮತ್ತು ಯಡಿಯೂರಪ್ಪ ಅವರಿಗೆ 'ಚಂದ್ರವನ ಸಿರಿ ಪ್ರಶಸ್ತಿ' ಪ್ರದಾನ ಮಾಡಿದರು. ಶಾಸಕರಾದ ಜಿ.ಟಿ. ದೇವೇಗೌಡ, ಎಚ್‌. ಟಿ. ಮಂಜು, ಮಾಜಿ ಶಾಸಕ ಸಿ.ಎಸ್. ಪುಟ್ಟರಾಜು, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಸೋಮೇಶ್ವರನಾಥ ಸ್ವಾಮೀಜಿ, ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ, ಆಶ್ರಮದ ಕಾರ್ಯದರ್ಶಿ ಟಿ.ಪಿ. ಶಿವಕುಮಾರ್ ಪಾಲ್ಗೊಂಡಿದ್ದರು.

ಸಂಸದ ರಮೇಶ ಜಿಗಜಿಣಗಿ ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಉಸಿರಾಟದಲ್ಲಿ ತೊಂದರೆ ಹಾಗೂ ಹೃದಯ ಬಡಿತ ಏರುಪೇರಾಗಿದ್ದರಿಂದ ವಿಜಯಪುರ ಸಂಸದ ರಮೇಶ ಜಿಗಜಿಣಗಿ ಭಾನುವಾರ ನಗರದ ಹಾನಗಲ್ ಕುಮಾರೇಶ್ವರ ಆಸ್ಪತ್ರೆಗೆ ದಾಖಲಾಗಿದ್ದಾರೆ.

ವಿಜಯಪುರದಿಂದ ಬೆಳಗಾವಿಗೆ ಹೋಗುವಾಗ ಬೀಳಗಿ ಬಳಿ ಆರೋಗ್ಯದಲ್ಲಿ ತೊಂದರೆ ಕಾಣಿಸಿಕೊಂಡಿತ್ತು. ಕೂಡಲೇ ಬಾಗಲಕೋಟೆಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

'ಆಮ್ಲಜನಕ ಕಡಿಮೆಯಾಗಿದ್ದರಿಂದ ಉಸಿರಾಟದಲ್ಲಿ ತೊಂದರೆ ಕಾಣಿಸಿಕೊಂಡಿತ್ತು. ಹೃದಯ ಬಡಿತದಲ್ಲಿ ಏರು–ಪೇರಾಗಿತ್ತು. ಸಿ.ಟಿ. ಸ್ಕ್ಯಾನ್ ಮಾಡಲಾಗಿದ್ದು, ಪುಪ್ಪುಸದಲ್ಲಿ ಸ್ವಲ್ಪ ನೀರು ಕಂಡು ಬಂದಿತ್ತು. ಚಿಕಿತ್ಸೆ ನೀಡಲಾಗಿದೆ. ಆರೋಗ್ಯ ಸ್ಥಿರವಾಗಿದೆ. ಎರಡು ದಿನದಲ್ಲಿ ಡಿಸ್‌ಚಾರ್ಜ್ ಆಗಲಿದ್ದಾರೆ. ಹೃದಯಾಘಾತವಾಗಿಲ್ಲ' ಎಂದು ಡಾ.ಸುಭಾಷ ಪಾಟೀಲಿ ತಿಳಿಸಿದರು.

'ವೈದ್ಯರು ಎಲ್ಲ ರೀತಿಯ ಚಿಕಿತ್ಸೆ ನೀಡಿದ್ದಾರೆ. ಅವರು ಆರೋಗ್ಯವಾಗಿದ್ದಾರೆ. ಯಾರೂ ಗಾಬರಿಯಾಗಬೇಕಿಲ್ಲ' ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ತಿಳಿಸಿದರು.

ವಿಜಯೇಂದ್ರ ಅಧ್ಯಕ್ಷರಾದ ನಂತರ ಬಿಜೆಪಿಯಲ್ಲಿ ಬದಲಾವಣೆ: ಶೆಟ್ಟರ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಬಿ.ವೈ.ವಿಜಯೇಂದ್ರ ಅವರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾದ ಮೇಲೆ ಸಾಕಷ್ಟು ಬದಲಾವಣೆಗಳಾಗಿವೆ. ಶೇಕಡ ನೂರರಷ್ಟು ಎಲ್ಲವೂ ಸರಿಯಾಗಿದೆ ಎಂದಲ್ಲ. ಆದರೆ, ಸುಖ ದುಃಖ ಹೇಳಿಕೊಳ್ಳುವ ವಾತಾವರಣ ನಿರ್ಮಾಣವಾಗಿದೆ' ಎಂದು ಬಿಜೆಪಿ ಮುಖಂಡ ಜಗದೀಶ ಶೆಟ್ಟರ್ ಹೇಳಿದರು.

ಭಾನುವಾರ ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಕ್ಷದಲ್ಲಿ ಇನ್ನೂ ಹೆಚ್ಚಿನ ಬದಲಾವಣೆ ತರಲು ಶ್ರಮಿಸುತ್ತೇನೆ. ಎಲ್ಲ ಸಮಸ್ಯೆಗಳಿಗೂ ಪರಿಹಾರ ಸಿಗುವ ವಿಶ್ವಾಸ ಇದೆ' ಎಂದರು.

'ಶೆಟ್ಟರ್ ಬಿಜೆಪಿಗೆ ಮರಳಲು ಕಾರಣ ಯಾರು?' ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿ, 'ಬಿಜೆಪಿ ನಾವು ಕಟ್ಟಿದ ನಮ್ಮ ಮನೆ. ಪಕ್ಷದ ರಾಜ್ಯ, ರಾಷ್ಟ್ರೀಯ ನಾಯಕರು ಆತ್ಮೀಯವಾಗಿ, ಗೌರವದಿಂದ ಕರೆದಿದ್ದರಿಂದ ಬಂದಿದ್ದೇನೆ. ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ನನ್ನನ್ನು ಸಂಪರ್ಕಿಸಲಾಯಿತು. ಗೃಹ ಸಚಿವ ಅಮಿತ್ ಶಾ, ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಹಿಂದೆ ಆಗಿದ್ದು ಮರೆತು ಬಿಡಿ. ಪ್ರೀತಿ, ಗೌರವದಿಂದ ಕಾಣುತ್ತೇವೆ, ಸೂಕ್ತ ಸ್ಥಾನಮಾನ ನೀಡುತ್ತೇವೆ ಎಂದು ವಿಶ್ವಾಸದಿಂದ ಕರೆದರು. ಹಿರಿಯನಾಗಿ ಮಾರ್ಗದರ್ಶನ ಮಾಡಬೇಕು ಎಂಬುದು ಕಾರ್ಯಕರ್ತರ ಅಪೇಕ್ಷೆಯಾಗಿತ್ತು' ಎಂದರು.

'ಕೇಂದ್ರ ಸಚಿವ ಪ್ರಲ್ಹಾದ ಜೋಶಿ ನಿಮ್ಮ ಸೇರ್ಪಡೆಗೆ ವಿರೋಧ ವ್ಯಕ್ತಪಡಿಸಿದ್ದಾರಲ್ಲ' ಎಂಬ ಪ್ರಶ್ನೆಗೆ, 'ರಾಷ್ಟ್ರೀಯ ನಾಯಕರ ಜತೆ ಚರ್ಚಿಸಿ ಪಕ್ಷಕ್ಕೆ ಬಂದಿದ್ದೇನೆ. ಅಸಮಾಧಾನಗಳಿದ್ದರೆ ಅವರು ತಿಳಿಸುತ್ತಿದ್ದರು. ಎಲ್ಲರೂ ಸರ್ವಾನುಮತದಿಂದ ಸ್ವಾಗತಿಸಿದ್ದಾರೆ. ಹೀಗಾಗಿ ವೈಯಕ್ತಿಕ ಅಭಿಪ್ರಾಯಗಳಿಗೆ ಮಹತ್ವ ಇಲ್ಲ' ಎಂದರು.

'ಯಾವುದೇ ಷರತ್ತು ವಿಧಿಸಿಲ್ಲ. ಪಕ್ಷ ನೀಡುವ ಜವಾಬ್ದಾರಿ ನಿರ್ವಹಿಸುತ್ತೇನೆ. ವರಿಷ್ಠರು ಸೂಚಿಸಿದರೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತೇನೆ. ನಮ್ಮಲ್ಲಿ ಶೆಟ್ಟರ್, ಜೋಶಿ ಬಣ ಎಂದಿಲ್ಲ. ನಮ್ಮದು ಬಿಜೆಪಿ ಬಣ' ಎಂದು ತಿಳಿಸಿದರು.

ಶೆಟ್ಟರ್ ಅವರನ್ನು ಬೆಂಬಲಿಗರು ಕುಸುಗಲ್ ರಸ್ತೆಯ ಶ್ರೀನಿವಾಸ ಗಾರ್ಡನ್ ಬಳಿ ಅದ್ದೂರಿಯಾಗಿ ಸ್ವಾಗತಿಸಿದರು. ಪಕ್ಷದ ಸ್ಥಳೀಯ ನಾಯಕರು ಗೈರಾಗಿದ್ದರು. ಅಲ್ಲಿಂದ ಬಾದಾಮಿ ನಗರದ ಅವರ ನಿವಾಸಕ್ಕೆ ತೆರೆದ ವಾಹನದಲ್ಲಿ ಅವರನ್ನು ಮೆರವಣಿಗೆ ಮೂಲಕ ಕರೆತರಲಾಯಿತು. ನಂತರ ಪಕ್ಷದ ಕಚೇರಿಯಲ್ಲಿ ಶಾಸಕ ಮಹೇಶ ಟೆಂಗಿನಕಾಯಿ ಮತ್ತು ಇತರ ನಾಯಕರು ಅವರನ್ನು ಸನ್ಮಾನಿಸಿದರು.



ಕಲ್ಯಾಣ
'ಟಗರು ಪಲ್ಯ' ಸಿನಿಮಾ ಖ್ಯಾತಿಯ ನಟ ನಾಗಭೂಷಣ್ ಗೆಳತಿ ಪೂಜಾ ಪ್ರಕಾಶ್ ಅವರನ್ನು ಬೆಳಗಾವಿಯಲ್ಲಿ ಭಾನುವಾರ ವಿವಾಹವಾದರು

ಬಿಜೆಪಿ ಎದುರಿಸಲು ಅಖಿಲೇಶ್ ಮಾದರಿ: ಎಸ್‌ಪಿ

ಲಖನೌ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸಲು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಮೈತ್ರಿಯ ಮಾದರಿಯೊಂದನ್ನು ತೋರಿಸಿಕೊಟ್ಟಿದ್ದಾರೆ, ಇದನ್ನು ಇತರರೂ ಅನುಕರಿಸಬೇಕು ಎಂದು ಸಮಾಜವಾದಿ ಪಕ್ಷದ ವಕ್ತಾರ ಆಮೀಕ್ ಜಾಮೇಯಿ ಹೇಳಿದರು.

ನಿತೀಶ್ ಕುಮಾರ್ ಬಿಹಾರದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರದಲ್ಲಿ ಆಮೀಕ್ ಈ ಮಾತು ಹೇಳಿದ್ದಾರೆ. 'ದೇಶದ ಧರ್ಮನಿರಪೇಕ್ಷ ಪ್ರಜಾತಂತ್ರವನ್ನು ಉಳಿಸಲಿಕ್ಕಾಗಿ ಮುಂದಿನ ಲೋಕಸಭಾ ಚುನಾವಣೆ ಬರುತ್ತಿದೆ. ಅಖಿಲೇಶ್ ಅವರು ಕಾಂಗ್ರೆಸ್ ಮತ್ತು ಆರ್‌ಎಲ್‌ಡಿ ಜೊತೆ ಸೀಟು ಹಂಚಿಕೆಯನ್ನು ಪ್ರಕಟಿಸುವ ಮೂಲಕ ಮಾದರಿ ನೀಡಿದ್ದಾರೆ' ಎಂದರು.

ಐದು ನಿರ್ಣಯಗಳ ಅಂಗೀಕಾರ



ಬೆಳಗಾವಿಯಲ್ಲಿ ಆಯೋಜಿಸಿದ್ದ ಸಮಾವೇಶದಲ್ಲಿ ಸಾವಿರಾರು ಶರಣೆಯರು ಭಾಗವಹಿಸಿ ಇಷ್ಟಲಿಂಗಕ್ಕೆ ಸಾಮೂಹಿಕ ಪೂಜೆ ಮಾಡಿದರು –ಪ್ರಜಾವಾಣಿ ಚಿತ್ರ

ಅಕ್ಕಮಹಾದೇವಿ ವೇದಿಕೆ(ಬೆಳಗಾವಿ): 'ನ್ಯಾಯಮೂರ್ತಿ ನಾಗಮೋಹನದಾಸ್ ವರದಿ ಜಾರಿಗೆ ರಾಜ್ಯ ಸರ್ಕಾರವು ಕೇಂದ್ರಕ್ಕೆ ಶಿಫಾರಸು ಮಾಡಿದ್ದು, ಇದಕ್ಕೆ ಕೇಂದ್ರವು ಕೇಳಿರುವ ಮಾಹಿತಿ ಒದಗಿಸಿ ವರದಿ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಬೇಕು' ಎನ್ನುವುದೂ ಸೇರಿದಂತೆ ಐದು ನಿರ್ಣಯಗಳನ್ನು ಇಲ್ಲಿ ಭಾನುವಾರ ಮುಕ್ತಾಯಗೊಂಡ ರಾಷ್ಟ್ರೀಯ ಲಿಂಗಾಯತ ಪ್ರಥಮ ಮಹಿಳಾ ಸಮಾವೇಶದಲ್ಲಿ ಕೈಗೊಳ್ಳಲಾಯಿತು.

'ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯಲ್ಲಿರುವ ಬಸವಣ್ಣನ ಸಹೋದರಿ ಅಕ್ಕನಾಗಮ್ಮ ತಾಯಿಯ ಲಿಂಗೈಕ್ಯ ಸ್ಥಳ, ಆ ಪ್ರದೇಶದಲ್ಲಿರುವ ಶರಣ ನುಲಿಯ ಚಂದಯ್ಯನವರು ಮತ್ತು ಕಾಯಕ ವರ್ಗದ ಇತರೆ ಶರಣರ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಬೇಕು. ಚನ್ನಬಸವೇಶ್ವರರ ಲಿಂಗೈಕ್ಯ ಸ್ಥಳವಾದ ಉತ್ತರ ಕನ್ನಡ ಜಿಲ್ಲೆಯ ಉಳವಿ ಕ್ಷೇತ್ರದ ಅಭಿವೃದ್ಧಿಗಾಗಿ ಉಳವಿ ಅಭಿವೃದ್ಧಿ ಪ್ರಾಧಿಕಾರ ರಚಿಸಬೇಕು' ಎಂದು ಒತ್ತಾಯಿಸಲಾಯಿತು.

ಸಮಾವೇಶದ ಸರ್ವಾಧ್ಯಕ್ಷೆ, ಕೂಡಲಸಂಗಮದ ಬಸವ ಧರ್ಮ ಪೀಠದ ಅಧ್ಯಕ್ಷೆ ಮಾತೆ ಗಂಗಾದೇವಿ, 'ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಪಡೆಯುವುದೊಂದೇ ನಮ್ಮ ಗುರಿ' ಎಂದರು. ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಭಾಲ್ಕಿಯ ಹಿರೇಮಠ ಸಂಸ್ಥಾನದ ಡಾ.ಬಸವಲಿಂಗ ಪಟ್ಟದ್ದೇವರು, ನಾಗನೂರು ರುದ್ರಾಕ್ಷಿಮಠದ ಅಲ್ಲಮಪ್ರಭು ಸ್ವಾಮೀಜಿ, ಜಾಗತಿಕ ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಾಮದಾರ ಪಾಲ್ಗೊಂಡಿದ್ದರು.

ನಿಧನ ವಾರ್ತೆ

ನಾಗನಗೌಡ ಕಂದಕೂರ

ಗುರುಮಠಕಲ್ (ಯಾದಗಿರಿ ಜಿಲ್ಲೆ): ಗುರುಮಠಕಲ್ ಮತಕ್ಷೇತ್ರದ ಜೆಡಿಎಸ್ ಮಾಜಿ ಶಾಸಕ, ಮಾಜಿ ಪ್ರಧಾನಿ ಎಚ್‌. ಡಿ.ದೇವೇಗೌಡರ ಆಪ್ತ ನಾಗನಗೌಡ ಕಂದಕೂರ (77) ಹೃದಯಾಘಾತದಿಂದ ಭಾನುವಾರ ನಿಧನರಾದರು.



ನಗರದ ಮನೆಯಲ್ಲಿ ಬೆಳಿಗ್ಗೆ 10-30ರ ವೇಳೆಗೆ ತೀವ್ರ ಹೃದಯಾಘಾತವಾಯಿತು. ಕೂಡಲೇ ಪಕ್ಕದಲ್ಲಿದ್ದ ಶರಣಬಸವ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖ ಲಿಸಲಾಗಿತ್ತು. ಅಲ್ಲಿ ಅವರು ಸಾವನ್ನಪ್ಪಿ ದರು. 2018ರಲ್ಲಿ ಪ್ರಥಮ ಬಾರಿಗೆ ಜೆಡಿಎಸ್ ಶಾಸಕರಾಗಿ ಆಯ್ಕೆಯಾಗಿದ್ದರು.

ಅವರಿಗೆ ಪತ್ನಿ, ಇಬ್ಬರು ಮಕ್ಕಳಾದ ಶಾಸಕ ಶರಣಗೌಡ ಕಂದಕೂರ, ಉದ್ಯಮಿ ಮಲ್ಲಿಕಾರ್ಜುನರೆಡ್ಡಿ (ರಾಜುಗೌಡ) ಹಾಗೂ ಒಬ್ಬ ಪುತ್ರಿ ಇದ್ದಾರೆ.

ಸೋಮವಾರ (ಜ.29) ರ ಮಧ್ಯಾಹ್ನ 3 ಗಂಟೆಗೆ ಗ್ರಾಮದ ಅವರ ತೋಟದಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಧರ್ಮಸ್ಥಳ: ಮೇ 1ಕ್ಕೆ ಸಾಮೂಹಿಕ ವಿವಾಹ

ಉಜಿರೆ: 2024ರ ಮೇ 1ರಂದು ಸಂಜೆ 6.45ರ ಗೋಧೂಳಿ ಲಗ್ನದಲ್ಲಿ ಧರ್ಮಸ್ಥಳದಲ್ಲಿ 52ನೇ ವರ್ಷದ ಉಚಿತ ಸಾಮೂಹಿಕ ವಿವಾಹ ನಡೆಯಲಿದೆ.

ದೇವಸ್ಥಾನದ ವತಿಯಿಂದ ವರನಿಗೆ ಧೋತಿ, ಶಾಲು, ವಧುವಿಗೆ ಸೀರೆ, ರವಿಕೆ ಕಣ ಮತ್ತು ಮಂಗಳಸೂತ್ರ ನೀಡಲಾಗುವುದು. ಎರಡನೇ ವಿವಾಹಕ್ಕೆ ಅವಕಾಶ ಇಲ್ಲ. ಇಲ್ಲಿ ಮದುವೆ ಆಗಲಿಚ್ಛಿಸುವವರು ಏ.20ರೊಳಗೆ ಮಾಹಿತಿ ಮತ್ತು ಸೂಕ್ತ ದಾಖಲೆಯೊಂದಿಗೆ ಅರ್ಜಿ ಸಲ್ಲಿಸಬಹುದು.

ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರು 1972ರಲ್ಲಿ ಆರಂಭಿಸಿದ ಉಚಿತ ಸಾಮೂಹಿಕ ವಿವಾಹದಲ್ಲಿ ಕಳೆದ ವರ್ಷದವರೆಗೆ 12,777 ಜೋಡಿ ದಾಂಪತ್ಯಕ್ಕೆ ಕಾಲಿರಿಸಿದ್ದಾರೆ.

ಮಾಹಿತಿಗಾಗಿ ದೂ: 08256 266644, 9663464648, 8147263422 ಸಂಪರ್ಕಿಸಬಹುದು.

ಕೈದಿಗಳ ವಿರುದ್ಧ ದೂರು ದಾಖಲು

ವಿಜಯಪುರ: 'ಇಲ್ಲಿನ ದರ್ಗಾ ಕೇಂದ್ರ ಕಾರಾಗೃಹದಲ್ಲಿ ಶ್ರೀರಾಮನ ಪೂಜೆ ಮಾಡಿದ ಕಾರಣಕ್ಕೆ ಮುಸ್ಲಿಂ ಕೈದಿಗಳು ಮತ್ತು ಜೈಲಿನ ಅಧಿಕಾರಿಗಳು ಹಲ್ಲೆ ಮಾಡಿದ್ದಾರೆ' ಎಂದು ಆರೋಪಿಸಿ, ವಿಡಿಯೊ ಮಾಡಿ ಹರಿಬಿಟ್ಟಿದ್ದ ಮಹಾರಾಷ್ಟ್ರದ ಮೂವರು ಕೈದಿಗಳ ವಿರುದ್ಧ ಭಾನುವಾರ ದೂರು ದಾಖಲಾಗಿದೆ.

ನಿಷೇಧಿತ ಪ್ರದೇಶದಲ್ಲಿ ಅಕ್ರಮವಾಗಿ ಮೊಬೈಲ್ ಬಳಕೆ ಮಾಡಿ ವಿಡಿಯೊ ಮಾಡಿರುವುದು ಅಲ್ಲದೇ, ದುರುದ್ದೇಶ ಪೂರ್ವಕವಾಗಿ ಜೈಲಿನ ಅಧಿಕಾರಿಗಳ ವಿರುದ್ಧ ಸುಳ್ಳು ಸುದ್ದಿಯನ್ನು ಹರಿಬಿಟ್ಟಿರುವ ಆರೋಪದ ಮೇರೆಗೆ ಮಹಾರಾಷ್ಟ್ರದ ಪರಮೇಶ್ವರ ಅಲಿಯಾಸ್ ದೇವ ಜಾಧವ, ರಮೇಶ ಧೂಳೆ, ಪ್ರದೀಪ ಪಾಂಡುರಂಗ ವಿರುದ್ಧ ಕೇಂದ್ರ ಕಾರಾಗೃಹದ ಅಧೀಕ್ಷಕ ಐ.ಜೆ. ಮ್ಯಾಗೇರಿ ಅವರು ಆದರ್ಶನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಗೋಲ್ಡನ್ ಸಫಾರಿ?

ಕೆಜಿಎಫ್ (ಕೋಲಾರ): ಭಾರತ್ ಗೋಲ್ಡ್‌ಮೈನ್ಸ್‌ನ (ಬಿಜಿಎಂಎಲ್) ನೀರಿಲ್ಲದ ಆಳದ ಚಿನ್ನದ ಗಣಿಗಳಲ್ಲಿ (ಶಾಫ್ಟ್) 'ಗೋಲ್ಡನ್ ಸಫಾರಿ' ಯೋಜನೆ ರೂಪಿಸುವ ಚಿಂತನೆ ನಡೆದಿದೆ ಎಂದು ಸಂಸದ ಎಸ್. ಮುನಿಸ್ವಾಮಿ ಹೇಳಿದ್ದಾರೆ.

ಊರಿಗಾಂನಲ್ಲಿ ಭಾನುವಾರ ಆಕಾಶವಾಣಿಯ ಎಫ್.ಎಂ ಮರು ಪ್ರಸಾರ ಕೇಂದ್ರ ಉದ್ಘಾಟಿಸಿ, ಕೆಜಿಎಫ್ ಸಮೀಪದ ಚಿಗರುಕುಂಟೆಯಲ್ಲಿ ಸಾಕಷ್ಟು ಚಿನ್ನದ ನಿಕ್ಷೇಪಗಳಿದ್ದು, ಗಣಿ ಪುನಃಶ್ಚೇತನದ ಬಗ್ಗೆಯೂ ಚಿಂತನೆ ನಡೆದಿದೆ ಎಂದು ಹೇಳಿದರು.

ಪಟಾಕಿ ಘಟಕ ಸ್ಫೋಟ: 3 ಸಾವು

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ (ದಕ್ಷಿಣ ಕನ್ನಡ): ವೇಣೂರು ಪೊಲೀಸ್ ಠಾಣೆ ವ್ಯಾಪ್ತಿಯ ಗೋಳಿಯಂಗಡಿ ಸಮೀಪದ ಕಡ್ತ್ಯಾರು ಬಳಿಯ ಕುಕ್ಕೇಡಿಯ ಪಟಾಕಿ ತಯಾರಿಕಾ ಘಟಕದಲ್ಲಿ ಭಾನುವಾರ ಸಂಜೆ ಸ್ಫೋಟ ಸಂಭವಿಸಿ ಮೂವರು ಮೃತಪಟ್ಟಿದ್ದಾರೆ. ಮೃತರ ಪೈಕಿ ಒಬ್ಬನ ಮೃತದೇಹ ದೊರೆತಿದ್ದು, ಇಬ್ಬರ ದೇಹದ ಭಾಗಗಳು ಸ್ಫೋಟದ ರಭಸಕ್ಕೆ ಛಿದ್ರವಾಗಿ ಚದುರಿ ಬಿದ್ದಿವೆ.

ತ್ರಿಶೂರಿನ ವರ್ಗೀಸ್, ಹಾಸನ ಅಂಕನಾಯಕನಹಳ್ಳಿ ಚೇತನ್, ಕೇರಳದ ಸ್ವಾಮಿ ಮೃತಪಟ್ಟವರು. ಕುಕ್ಕೇಡಿಯ ಬಶೀರ್ ಎಂಬುವರ ಜಮೀನಿನಲ್ಲಿ ಪಟಾಕಿ ತಯಾರಿಸಲಾಗುತ್ತಿತ್ತು. ಹಾಸನದ ದಿನೇಶ, ಕಿರಣ, ಅರಸೀಕೆರೆಯ ಕುಮಾರ, ಚಿಕ್ಕಮಾರಹಳ್ಳಿಯ ಕಲ್ಲೇಶ, ಕೇರಳದ ಪ್ರೇಮ್, ಕೇಶವ ಸೇರಿದಂತೆ ಒಟ್ಟು 9 ಮಂದಿ ಕಾರ್ಮಿಕರು ಇಲ್ಲಿ ಪಟಾಕಿ ತಯಾರಿಯಲ್ಲಿ ತೊಡಗಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸ್ಥಳಕ್ಕೆ ಬೆಳ್ತಂಗಡಿ ಅಗ್ನಿಶಾಮಕ ಸಿಬ್ಬಂದಿ ಧಾವಿಸಿ ಬೆಂಕಿನಂದಿಸಿ ಅರೆ ಜೀವಾವಸ್ಥೆಯಲ್ಲಿದ್ದ ವ್ಯಕ್ತಿಯನ್ನು ಆಸ್ಪತ್ರೆಗೆ ಸಾಗಿಸಿದರು. ಆಸ್ಪತ್ರೆಯಲ್ಲಿ ಅವರು ಕೊನೆಯುಸಿರೆಳೆದರು. ಸ್ಥಳದಲ್ಲಿ ಶೆಡ್ ಸಂಪೂರ್ಣ ಧ್ವಂಸವಾಗಿದ್ದು, ಇದರ ಸದ್ದು 4 ಕಿ.ಮೀ. ದೂರಕ್ಕೆ ಕೇಳಿಸಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

'ಸಾಲಿಡ್ ಫೈರ್ ವರ್ಕ್ಸ್' ಎಂಬ ಈ ಪಟಾಕಿ ತಯಾರಿಕಾ ಘಟಕ 50 ವರ್ಷಗಳಿಂದ ಇದೆ. ಇಲ್ಲಿ ಪಟಾಕಿ ತಯಾರಿಸಿ ಹಲವಾರು ಜಾತ್ರೆ ಹಾಗೂ ಇತರ ಕಾರ್ಯಕ್ರಮಗಳಿಗೆ ಪೂರೈಸುತ್ತಿದ್ದರು. ಇದಕ್ಕೆ ಪರವಾನಗಿ ಇತ್ತೇ ಎಂಬುದು ಖಚಿತವಾಗಿಲ್ಲ.

ಸೋಮವಾರ, ಜನವರಿ 29, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 29 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಓದುವಾಗಲೆಲ್ಲ ಮನಸು ಮೊಬೈಲ್ ಫೋನಿನತ್ತ ನೋಡುವಂತೆ ಚಡಪಡಿಸುತ್ತದೆಯೇ? ಇಲ್ಲಿದೆ ಪರಿಹಾರ



ಆಳ-ಅಗಲ: ಎಲ್ಲಿದ್ದರೂ ನಿತೀಶ್ ಅವರೇ ಮುಖ್ಯಮಂತ್ರಿ

ಮುರ್ಮುಗೆ ಏಕವಚನ ಬಳಸಿದ ಸಿ.ಎಂ 4

ಇ.ಡಿ ಸಮನ್ಸ್; ಸೊರೇನ್ ದೆಹಲಿಗೆ ದೌಡು 9

ಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣ: ದಾಖಲು ಪ್ರಮಾಣ ಶೇ 96ರಷ್ಟು ಹೆಚ್ಚಳ 9

9ನೇ ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ • ಬಿಜೆಪಿಯ ಇಬ್ಬರು ಉಪ ಮುಖ್ಯಮಂತ್ರಿ

ಬಿಹಾರ: ಮತ್ತೆ ನಿತೀಶ್ ಸಿ.ಎಂ

ಪಟ್ನಾ (ಪಿಟಿಐ): ನಾಟಕೀಯ ರಾಜಕೀಯ ಬೆಳವಣಿಗೆಗಳ ನಡುವೆಯೇ ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರು ಬಿಜೆಪಿ ಜತೆಗೂಡಿ ಭಾನುವಾರ ಸಂಜೆ ಬಿಹಾರದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಈ ಮೂಲಕ ಅವರು 9ನೇ ಬಾರಿ ಮುಖ್ಯ-ಮಂತ್ರಿಯಾಗಿ ದಾಖಲೆ ಬರೆದಿದ್ದಾರೆ.

ಕ್ಷಿಪ್ರ ಬೆಳವಣಿಗೆಗಳ ಬೆನ್ನಲ್ಲೇ ಅವರು ಭಾನುವಾರ ಬೆಳಿಗ್ಗೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಮೂಲಕ 'ಮಹಾಘಟಬಂಧನ್' ಸರ್ಕಾರಕ್ಕೆ ಅಂತ್ಯ ಹಾಡಿದರು. ಆ ಮೂಲಕ ಅವರು 'ಇಂಡಿಯಾ' ಮೈತ್ರಿಕೂಟದಿಂದಲೂ ಹೊರ ನಡೆದರು. ಅಲ್ಲದೆ ಬಿಜೆಪಿ ಸಖ್ಯ ತೊರೆದ 18 ತಿಂಗಳಲ್ಲಿಯೇ ಮರಳಿ ಅದೇ ಪಕ್ಷದ ಒಡಗೂಡಿ ಸರ್ಕಾರವನ್ನೂ ರಚಿಸಿದರು. ನಿತೀಶ್ ಅವರನ್ನು ಮರಳಿ ಎನ್‌ಡಿಎಗೆ ಕರೆತರುವುದಿಲ್ಲ ಎಂದು ಬಿಜೆಪಿಯ ಹಿರಿಯ ನಾಯಕರು ವರ್ಷದ ಹಿಂದೆಯಷ್ಟೇ ಹೇಳಿದ್ದರು.

ಬಿಹಾರದ ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಅವರು ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಿತೀಶ್ ಅವರಿಗೆ ಅಧಿಕಾರ ಮತ್ತು ಗೋಪ್ಯತೆಯ ಪ್ರತಿಜ್ಞಾ ವಿಧಿ ಬೋಧಿಸಿದರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಸೇರಿದಂತೆ ಕೆಲ ನಾಯಕರು ಉಪಸ್ಥಿತರಿದ್ದರು. ವಿಧಾನಸಭೆಯಲ್ಲಿ ಏಕೈಕ ದೊಡ್ಡ ಪಕ್ಷವಾಗಿರುವ ಆರ್‌ಜೆಡಿಯ ಯಾವುದೇ ನಾಯಕ ಸಮಾರಂಭದಲ್ಲಿ ಭಾಗಿಯಾಗಿರಲಿಲ್ಲ.


ಇಬ್ಬರು ಉಪ ಮುಖ್ಯಮಂತ್ರಿ: ಇದೇ ವೇಳೆ ಪ್ರಮಾಣ ವಚನ ಸ್ವೀಕರಿಸಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸಾಮ್ರಾಟ್ ಚೌಧರಿ ಮತ್ತು ಮಾಜಿ ಸ್ಪೀಕರ್ ವಿಜಯ್ ಕುಮಾರ್ ಸಿನ್ಹಾ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಲಾಗಿದೆ. ಇದಕ್ಕೂ ಮುನ್ನ ನಡೆದಿದ್ದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಚೌಧರಿ ಮತ್ತು ಸಿನ್ಹಾ ಅವರನ್ನು ಕ್ರಮವಾಗಿ ನಾಯಕ ಮತ್ತು ಉಪ ನಾಯಕರನ್ನಾಗಿ ಆಯ್ಕೆ ಮಾಡಲಾಗಿತ್ತು.

9ನೇ ಪುಟ ನೋಡಿ



ಪಟ್ನಾದ ರಾಜಭವನದಲ್ಲಿ ಬಿಹಾರದ ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಅವರು, ನೂತನವಾಗಿ ಪ್ರಮಾಣ ವಚನ ಸ್ವೀಕರಿಸಿದ ಮುಖ್ಯಮಂತ್ರಿ ನಿತೀಶ್ ಕುಮಾರ್, ಉಪ ಮುಖ್ಯಮಂತ್ರಿಗಳಾದ ಸಾಮ್ರಾಟ್ ಚೌಧರಿ, ವಿಜಯ್ ಕುಮಾರ್ ಸಿನ್ಹಾ ಜತೆ ಮಾತುಕತೆ ನಡೆಸಿದರು —ಪಿಟಿಐ ಚಿತ್ರ

ಬಿಹಾರ ವಿಧಾನಸಭೆ ಪ್ರಸ್ತುತ ಸದಸ್ಯಬಲ 243



ಅಂದುಕೊಂಡಂತೆ ಆಗುತ್ತಿರಲಿಲ್ಲ: ನಿತೀಶ್

'ಮಹಾಘಟಬಂಧನ್‌ನಲ್ಲಿ ಕೆಲವು ವಿಷಯ, ವಿಚಾರಗಳು ನಾನು ಅಂದುಕೊಂಡಂತೆ ಆಗುತ್ತಿರಲಿಲ್ಲ. ಹೀಗಾಗಿ ನಾನು ರಾಜೀನಾಮೆ ಸಲ್ಲಿಸಿದೆ' ಎಂದು ನಿತೀಶ್ ಕುಮಾರ್ ಅವರು ಬೆಳಿಗ್ಗೆ ರಾಜೀನಾಮೆ ಸಲ್ಲಿಸಿದ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ನಾನು ಮಹಾಘಟಬಂಧನ್‌ಗೆ ಹೇಗೆ ಬಂದೆ, ಅಲ್ಲಿ ಹಲವು ಪಕ್ಷಗಳನ್ನು ಒಗ್ಗೂಡಿಸಲು ಎಷ್ಟೆಲ್ಲ ಶ್ರಮಿಸಿದ್ದೇನೆ ಎಂಬುದೆಲ್ಲ ನಿಮಗೆ ತಿಳಿದಿದೆ. ಆದರೆ ಈಗ ಅದು ಸಾಧ್ಯವಾಗುತ್ತಿಲ್ಲ. ಇದು ನನ್ನ ಪಕ್ಷದಲ್ಲಿ ಇರುವವರಿಗೂ ಸರಿಹೋಗುತ್ತಿಲ್ಲ' ಎಂದು ನಿತೀಶ್ ಸಮರ್ಥನೆ ನೀಡಿದರು. ರಾಜೀನಾಮೆ ಸಲ್ಲಿಸುವುದಕ್ಕೂ ಮುನ್ನ ಅವರು ಜೆಡಿಯು ಶಾಸಕಾಂಗ ಪಕ್ಷದ ಸಭೆ ನಡೆಸಿದರು.

ಆಟ ಇನ್ನೂ ಮುಗಿದಿಲ್ಲ, ಈಗಷ್ಟೇ ಆರಂಭವಾಗಿದೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜೆಡಿಯು ನಾಶವಾಗಲಿದೆ
ತೇಜಸ್ವಿ ಯಾದವ್
ಮಾಜಿ ಉಪ ಮುಖ್ಯಮಂತ್ರಿ

ಕಸ ಮತ್ತೆ ಕಸದ ಬುಟ್ಟಿಗೆ ಹೋಗಿದೆ. ಕೊಳೆತು ನಾರುವ ಕಸದ ಭಾಗವಾಗಿರುವ ಗುಂಪಿಗೆ ಶುಭಾಶಯಗಳು.
ರೋಹಿಣಿ ಆಚಾರ್ಯ
(ಲಾಲು ಪ್ರಸಾದ್ ಅವರ ಪುತ್ರಿ)

ನಿತೀಶ್ ಕುಮಾರ್ ದ್ರೋಹ ಎಸಗಿದ್ದಾರೆ. ದೀರ್ಘ ಕಾಲ ಮುಖ್ಯಮಂತ್ರಿ ಆಗಿ ಸೇವೆ ಸಲ್ಲಿಸಿದ್ದ ಅವರನ್ನು ಆರ್‌ಎಸ್‌ಎಸ್- ಬಿಜೆಪಿ ದಾಳವಾಗಿ ಬಳಸಿಕೊಳ್ಳುತ್ತದೆ
ದೀಪಂಕರ್ ಭಟ್ಟಾಚಾರ್ಯ
ಸಿಪಿಐ (ಎಂ.ಎಲ್) ಪ್ರಧಾನ ಕಾರ್ಯದರ್ಶಿ

ತಮ್ಮ ರಾಜಕೀಯ ನಿಷ್ಠೆಯನ್ನು ಪದೇ ಪದೇ ಬದಲಿಸುವ ನಿತೀಶ್ ಕುಮಾರ್ ಅವರಿಗೆ 'ಗಿರ್ಗಿತ್ ರತ್ನ' (ಊಸರವಳ್ಳಿ) ಪ್ರಶಸ್ತಿ ನೀಡಿ ಗೌರವಿಸಬೇಕು
ತೇಜ್ ಪ್ರತಾಪ್ ಯಾದವ್
ಆರ್‌ಜೆಡಿ ನಾಯಕ

ನಿತೀಶ್ ಕುಮಾರ್ ಅವರನ್ನು 'ಸ್ನೋಲಿಗೋಸ್ಟರ್' ಎಂದು ಕರೆಯಬಹುದು; ಅಂದರೆ, 'ತತ್ವರಹಿತ ರಾಜಕಾರಣಿ' ಎಂದರ್ಥ. ಬಣ್ಣ ಬದಲಿಸುವುದರಲ್ಲಿ ಅವರು ಊಸರವಳ್ಳಿಗೂ ಪೈಪೋಟಿ ನೀಡುತ್ತಿದ್ದಾರೆ
ಶಶಿ ತರೂರ್, ಕಾಂಗ್ರೆಸ್ ನಾಯಕ



ಸಿನ್ನರ್‌ಗೆ ಚೊಚ್ಚಲ ಕಿರೀಟ

ಮೆಲ್ಬರ್ನ್(ಎಎಫ್‌ಪಿ): ಇಟಲಿಯ ಯಾನಿಕ್ ಸಿನ್ನರ್ ಭಾನುವಾರ ನಡೆದ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ಪ್ರಶಸ್ತಿ ಜಯಿಸಿದರು. ಫೈನಲ್‌ನಲ್ಲಿ 22 ವರ್ಷದ ಸಿನ್ನರ್ ಅವರು ರಷ್ಯಾದ ಡೆನಿಲ್ ಮೆಡ್ವೆಡೇವ್ ವಿರುದ್ಧ ಜಯಿಸಿದರು. ತಮ್ಮ ವೃತ್ತಿಜೀವನದ ಮೊದಲ ಗ್ರ್ಯಾನ್‌ಸ್ಲಾಮ್ ಕಿರೀಟ ಧರಿಸಿದರು.

ಫೈನಲ್ ಫಲಿತಾಂಶ

ಯಾನಿಕ್ ಸಿನ್ನರ್ (ಇಟಲಿ)	3	3	6	6	6
ಡೆನಿಲ್ ಮೆಡ್ವೆಡೇವ್ (ರಷ್ಯಾ)	6	6	4	4	3

ತೋಟಗಾರಿಕೆ ಮೂಲಕ 'ಪ್ರಕೃತಿ ಚಿಕಿತ್ಸೆ'

• ಖಲೀಲಅಹ್ಮದ ಶೇಖ

ಬೆಂಗಳೂರು: ಮಾನಸಿಕ ಅಸ್ವಸ್ಥರು, ಅಂಗವಿಕಲರು ಹಾಗೂ ಅಪರಾಧ ಕೃತ್ಯ ಎಸಗಿರುವ ಮಕ್ಕಳ ಮೇಲಿನ ಒತ್ತಡ ನಿವಾರಣೆ ಮತ್ತು ಆರೋಗ್ಯಪೂರ್ಣ ಬದುಕು ಕಟ್ಟಿಕೊಡಲು 'ತೋಟಗಾರಿಕೆ ಚಿಕಿತ್ಸೆ' ಎಂಬ ಹೊಸ ಪದ್ಧತಿ ಆರಂಭಿಸಲಾಗಿದೆ.

'ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ ಸಂಸ್ಥೆ'ಯು (ಎಪಿಡಿ) ಹೊಸ ಬಗೆಯ ಪ್ರಕೃತಿ ಚಿಕಿತ್ಸೆಯನ್ನು ಪರಿಚಯಿಸಿದೆ. ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಹಿಂಭಾಗದಲ್ಲಿರುವ ಸಮನ್ವಯ ಸುಸ್ಥಿರ ತೋಟಗಾರಿಕೆ ಕೇಂದ್ರದಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಿದೆ. ಇದರ ಫಲಿತಾಂಶವನ್ನು ಗಮನಿಸಿ, ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ವಿಸ್ತರಿಸುವ ಯೋಜನೆಯನ್ನು ಎಪಿಡಿ ಹಾಕಿಕೊಂಡಿದೆ.

'ತೋಟಗಾರಿಕೆ ತರಬೇತಿ ಹಾಗೂ ಪ್ರಕೃತಿ ಚಿಕಿತ್ಸೆ' ಎಂಬ ಯೋಜನೆಗೆ ಬಾಷ್ ಗ್ಲೋಬಲ್ ಸಾಫ್ಟ್‌ವೇರ್ ಕಂಪನಿಯು ಹಣಕಾಸಿನ ನೆರವು ನೀಡಿದ್ದು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಮುಕ್ಕಾಲು ಎಕರೆ ಜಮೀನು ನೀಡಿ ಉಸ್ತುವಾರಿ ವಹಿಸಿಕೊಂಡಿದೆ.

4ನೇ ಪುಟ ನೋಡಿ

ಕೇಂದ್ರದಲ್ಲಿ ತರಬೇತಿ ಪಡೆಯುತ್ತಿರುವವರು

18	ಮಾನಸಿಕ ಅಸ್ವಸ್ಥ ಮಹಿಳೆಯರು
22	ಬುದ್ಧಿಮಾಂದ್ಯ ಮಹಿಳೆಯರು
20	ಬುದ್ಧಿಮಾಂದ್ಯ ಪುರುಷರು
9	ಅಪರಾಧ ಕೃತ್ಯ ಎಸಗಿರುವ ಬಾಲಕರು
20	ಅಪರಾಧ ಕೃತ್ಯ ಎಸಗಿರುವ ಬಾಲಕಿಯರು
26	ಬುದ್ಧಿಮಾಂದ್ಯ ಮಕ್ಕಳು
115	ಒಟ್ಟು

ಒಳ ಪುಟಗಳು



ಜಾತಿಗಣತಿ ವರದಿ ಸ್ವೀಕಾರಕ್ಕೆ ಒತ್ತಾಯ

ಸಮಾವೇಶಕ್ಕೆ ಬಂದ ಲಕ್ಷಾಂತರ ಜನ: ಸಿ.ಎಂ ಬೆನ್ನಿಗೆ ನಿಂತ ಸಮುದಾಯಗಳು

• ಜಿ.ಬಿ.ನಾಗರಾಜ್

ಚಿತ್ರದುರ್ಗ: ಎಚ್. ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸಿದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ (ಜಾತಿ ಗಣತಿ) ವರದಿಯನ್ನು ಸ್ವೀಕರಿಸಿ ಕೂಡಲೇ ಜಾರಿಗೊಳಿಸುವಂತೆ ಶೋಷಿತ ಸಮುದಾಯದವರು ರಾಜ್ಯ ಸರ್ಕಾರವನ್ನು ಒಕ್ಕೊರಲಿನಿಂದ ಆಗ್ರಹಿಸಿದರು.

ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ವತಿಯಿಂದ ಭಾನುವಾರ ಇಲ್ಲಿ ಏರ್ಪಡಿಸಿದ್ದ 'ಶೋಷಿತರ ಜಾಗೃತಿ' ಸಮಾವೇಶದಲ್ಲಿ ರಾಜ್ಯದ ವಿವಿಧೆಡೆಯಿಂದ ಲಕ್ಷಾಂತರ ಜನ ಭಾಗವಹಿಸಿದ್ದರು. ಜಾತಿ ಗಣತಿಯ ಪರ ನಿಲುವು ತಳೆಯುವಂತೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಸಚಿವ ಸಂಪುಟದ ಸದಸ್ಯರಿಂದ ವಾಗ್ದಾನ ಪಡೆದರು.

ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಜನಪರ ಸಂಘಟನೆಯ ಪ್ರತಿನಿಧಿಗಳಿಂದ ಸಭಾಂಗಣ ತುಂಬಿತ್ತು. ಕಾಂತರಾಜ ಆಯೋಗದ ವರದಿ ವಿರೋಧಿಸುವ ಜಾತಿಗಳು ಹಾಗೂ ರಾಜಕೀಯ ಪಕ್ಷಗಳಿಗೆ ಸಂದೇಶ ರವಾನಿಸುವ ಪ್ರಯತ್ನದಲ್ಲಿ ಸಮಾವೇಶ ಮೇಲುಗೈ ಸಾಧಿಸಿತು.

4ನೇ ಪುಟ ನೋಡಿ



ಚಿತ್ರದುರ್ಗದಲ್ಲಿ ಭಾನುವಾರ ಆಯೋಜಿಸಿದ್ದ ಶೋಷಿತರ ಜಾಗೃತಿ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಮಾಜಿ ಸಚಿವ ಎಚ್. ಆಂಜನೇಯ, ಸಚಿವ ಎಚ್.ಸಿ. ಮಹದೇವಪ್ಪ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ದಿನೇಶ್ ಗುಂಡೂರಾವ್, ಶಿವರಾಜ ತಂಗಡಗಿ, ಜಮೀರ್ ಅಹಮ್ಮದ್ ಖಾನ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ/ ವಿ.ಚಂದ್ರಪ್ಪ

ಕೆಕೆಆರ್‌ಡಿಬಿ ಅನುದಾನದಿಂದ ಮುಖ್ಯಮಂತ್ರಿ ಹಂಚಿಕೆ

'ಕಲ್ಯಾಣ'ದ ಕೈ ಶಾಸಕರಿಗೆ ತಲಾ ₹5 ಕೋಟಿ ಸಿ.ಎಂ 'ಪ್ರಸಾದ'

• ರಾಜೇಶ್ ರೈ ಚಟ್ಲ

ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) ಪ್ರಸಕ್ತ ಸಾಲಿನಲ್ಲಿ (2023-24) ನೀಡಿರುವ ₹3 ಸಾವಿರ ಕೋಟಿ ಅನುದಾನದಲ್ಲಿ ₹90 ಕೋಟಿಯನ್ನು ಆ ಭಾಗದ ಕಾಂಗ್ರೆಸ್ ಶಾಸಕರಿಗೆ ಹಂಚಲಾಗಿದೆ. 19 ಕಾಂಗ್ರೆಸ್ ಶಾಸಕರು ಮತ್ತು ಪಕ್ಷೇತರರಾಗಿ ಗೆದ್ದು ಕಾಂಗ್ರೆಸ್ ಜೊತೆ ಗುರುತಿಸಿಕೊಂಡಿರುವ ಲತಾ ಮಲ್ಲಿಕಾರ್ಜುನ್ ಅವರಿಗೆ ತಲಾ ₹5 ಕೋಟಿ ಅನುದಾನ ನೀಡಲಾಗಿದೆ.

ಒಟ್ಟು 20 ಶಾಸಕರಿಗೆ ₹5 ಕೋಟಿಯಂತೆ ಹಂಚಲು ₹100 ಕೋಟಿ ಅಗತ್ಯವಿದೆ. ಕೆಕೆಆರ್‌ಡಿಬಿಗೆ ನೀಡಿದ ಅನುದಾನದಲ್ಲಿ ಶೇ 3ರಷ್ಟನ್ನು ಮುಖ್ಯಮಂತ್ರಿಯವರ ವಿವೇಚನಾ ನಿಧಿಯ ಹೆಸರಿನಲ್ಲಿ ಪಡೆದುಕೊಳ್ಳಲು ಮುಖ್ಯಮಂತ್ರಿಗೆ ಅವಕಾಶ ಇದೆ.



4ನೇ ಪುಟ ನೋಡಿ

ಯಾರಿಗೆಲ್ಲ ತಲಾ ₹5 ಕೋಟಿ?

ಖನೀಜ್ ಫಾತಿಮ (ಕಲಬುರ್ಗಿ ಉತ್ತರ), ಅಲ್ಲಮ ಪ್ರಭು ಪಾಟೀಲ (ಕಲಬುರಗಿ ದಕ್ಷಿಣ), ಎಂ.ವೈ. ಪಾಟೀಲ್ (ಅಫಜಲಪುರ), ಬಿ.ಆರ್. ಪಾಟೀಲ (ಆಳಂದ), ಅಜಯ್ ಸಿಂಗ್ (ಜೇವರ್ಗಿ), ಚನ್ನಾರೆಡ್ಡಿ ಪಾಟೀಲ ತುನ್ನೂರ (ಯಾದಗಿರಿ), ರಾಜಾ ವೆಂಕಟಪ್ಪ ನಾಯಕ (ಸುರಪುರ), ಬಸವರಾಜ ರಾಯರಡ್ಡಿ (ಯಲಬುರ್ಗಾ), ರಾಘವೇಂದ್ರ ಬಸವರಾಜ ಹಿಟ್ನಾಳ್ (ಕೊಪ್ಪಳ), ಬಸನಗೌಡ ದದ್ದಲ್ (ರಾಯಚೂರು ಗ್ರಾಮಾಂತರ), ಜಿ. ಹಂಪಯ್ಯನಾಯಕ್ (ಮಾನ್ವಿ), ಹಂಪನಗೌಡ ಬಾದರ್ಲಿ (ಸಿಂಧನೂರು), ಬಸನಗೌಡ ತುರುವಿಹಾಳ (ಮಸ್ಕಿ) ಇ. ತುಕಾರಾಂ (ಸಂಡೂರು), ನಾರಾ ಭರತರೆಡ್ಡಿ (ಬಳ್ಳಾರಿ ನಗರ), ಜೆ.ಎನ್. ಗಣೇಶ್ (ಕಂಪ್ಲಿ), ಬಿ.ಎಂ. ನಾಗರಾಜ (ಸಿರಗುಪ್ಪ), ಶ್ರೀನಿವಾಸ್ ಎನ್. ಟಿ (ಕೂಡ್ಲಿಗಿ), ಎಚ್.ಆರ್. ಗವಿಯಪ್ಪ (ವಿಜಯನಗರ-ಹೊಸಪೇಟೆ), ಲತಾ ಮಲ್ಲಿಕಾರ್ಜುನ್ (ಹರಪನಹಳ್ಳಿ-ಸ್ವತಂತ್ರ ಅಭ್ಯರ್ಥಿ)

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕೆರಗೋಡು: ಬಿಜೆಪಿ, ಜೆಡಿಎಸ್ ಸದಸ್ಯರ ತೀವ್ರ ಪ್ರತಿಭಟನೆ

ಹನುಮಧ್ವಜ ತೆರವು: ಉದ್ವಿಗ್ನ

ಪ್ರಜಾವಾಣಿ ವಾರ್ತೆ

ಮಂಡ್ಯ: ತಾಲ್ಲೂಕಿನ ಕೆರಗೋಡು ಗ್ರಾಮದಲ್ಲಿ ಹಾರಿಸಲಾಗಿದ್ದ ಹನುಮ ಧ್ವಜವನ್ನು ಬಿಜೆಪಿ, ಜೆಡಿಎಸ್ ಕಾರ್ಯಕರ್ತರು, ಬಜರಂಗ ದಳ ಹಾಗೂ ವಿಶ್ವ ಹಿಂದೂ ಪರಿಷತ್ ಸದಸ್ಯರ ತೀವ್ರ ಪ್ರತಿಭಟನೆಯ ನಡುವೆಯೂ ಭಾನುವಾರ ಜಿಲ್ಲಾಡಳಿತ ತೆರವುಗೊಳಿಸಿತು. ಇದರಿಂದ ಕೆರಳಿರುವ ಕಾರ್ಯಕರ್ತರು ಇಡೀ ಗ್ರಾಮವನ್ನು ಬಂದ್ ಮಾಡಿ ಹೋರಾಟ ಮುಂದುವರಿಸಿದ್ದಾರೆ, ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ.

ಗ್ರಾಮದ ರಂಗಮಂದಿರದ ಸಮೀಪ ಗೌರಿಶಂಕರ ಸೇವಾ ಟ್ರಸ್ಟ್ ವತಿಯಿಂದ ಜ.19ರಂದು 108 ಅಡಿ ಧ್ವಜಸ್ತಂಭ ಸ್ಥಾಪಿಸಿ ಅದಕ್ಕೆ ಹನುಮಂತ- ಅರ್ಜುನ ಚಿತ್ರವುಳ್ಳ ಬೃಹತ್ ಕೇಸರಿ ಧ್ವಜ ಹಾರಿಸಲಾಗಿತ್ತು. ಅಯೋಧ್ಯೆ ರಾಮಮಂದಿರ ಉದ್ಘಾಟನೆ ಹಿನ್ನೆಲೆಯಲ್ಲಿ ಧ್ವಜಸ್ತಂಭ ಸ್ಥಾಪಿಸಲಾಗಿತ್ತು.

4ನೇ ಪುಟ ನೋಡಿ

ಅಶೋಕ ಸೇರಿ ಹಲವರು ವಶಕ್ಕೆ 4



ಕೆರಗೋಡು ಗ್ರಾಮದ ರಂಗಮಂದಿರದ ಸಮೀಪ ಅಳವಡಿಸಲಾಗಿದ್ದ ಹನುಮ ಧ್ವಜವನ್ನು ಪೊಲೀಸರು ಕೆಳಗಿಳಿಸಿದರು

ಕಾನ್‌ಸ್ಟೆಬಲ್ ಪರೀಕ್ಷೆ: ವ್ಯವಸ್ಥೆ ಇಲ್ಲದೆ ಅಭ್ಯರ್ಥಿಗಳಿಗೆ ತೊಂದರೆ

ಬಸ್, ರೈಲು ನಿಲ್ದಾಣದಲ್ಲೇ ನಿದ್ದೆ

• ಕೆ.ಓಂಕಾರ ಮೂರ್ತಿ

ಕೋಲಾರ: ಸಶಸ್ತ್ರ ಮೀಸಲು ಪೊಲೀಸ್ ಪಡೆಯ ಕಾನ್‌ಸ್ಟೆಬಲ್ ಹುದ್ದೆ ನೇಮಕಾತಿಗೆ ಭಾನುವಾರ ನಡೆದ ಪರೀಕ್ಷೆ ಬರೆಯಲು ರಾಜ್ಯದ ನಾನಾ ಕಡೆಗಳಿಂದ ಕೋಲಾರ ನಗರಕ್ಕೆ ಬಂದಿದ್ದ ಸಾವಿರಾರು ಅಭ್ಯರ್ಥಿಗಳು ಮಲಗಲು, ಊಟ-ತಿಂಡಿ ಹಾಗೂ ಶೌಚಕ್ಕೆ ಸರಿಯಾದ ವ್ಯವಸ್ಥೆ ಇಲ್ಲದೇ ಪರದಾಡಬೇಕಾಯಿತು.

ಬೆಳಗಾವಿ, ವಿಜಯಪುರ, ಯಾದಗಿರಿ, ಕೊಪ್ಪಳ, ರಾಯಚೂರು, ಧಾರವಾಡ, ಹಾವೇರಿ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ಅಭ್ಯರ್ಥಿಗಳು ಶನಿವಾರವೇ ಕೋಲಾರ ನಗರಕ್ಕೆ ಬಂದಿದ್ದರು.


ತಂಗಲು ಸರಿಯಾದ ವ್ಯವಸ್ಥೆ ಇಲ್ಲದ ಕಾರಣ ಕೆಲವರು ಬಸ್ ನಿಲ್ದಾಣ, ರೈಲು ನಿಲ್ದಾಣದಲ್ಲೇ ಮಲಗಿದರು. ಕೆಲವರು ದೇವಸ್ಥಾನ, ಅಂಗಡಿ, ಮಳಿಗೆಗಳ ಮುಂದಿನ ಆವರಣದಲ್ಲಿ ನಿದ್ದೆ ಹೋದರು.

ಇನ್ನು ಹಲವರು ಶನಿವಾರ ರಾತ್ರಿಯಿಡೀ ಪರೀಕ್ಷಾ ಕೇಂದ್ರಗಳ ಬಳಿಯ ರಸ್ತೆ ಬದಿಯಲ್ಲೇ ಮಲಗಿದರು. ಕೆಲವರು ಮಾತ್ರ ಲಾಡ್ಜ್ ಸೇರಿದಂತೆ ವಿವಿಧೆಡೆ ವಸತಿ ವ್ಯವಸ್ಥೆ ಮಾಡಿಕೊಂಡಿದ್ದರು.

3,064 ಹುದ್ದೆಗಳ ಭರ್ತಿಗೆ ಕೋಲಾರ ನಗರದ ವಿವಿಧ ಕೇಂದ್ರಗಳಲ್ಲಿ ಭಾನುವಾರ ಪರೀಕ್ಷೆ ನಡೆಯಿತು. ಪೊಲೀಸ್ ಇಲಾಖೆಯ ಅಧಿಸೂಚನೆಯಲ್ಲಿರುವಂತೆ ಕೋಲಾರ ಜಿಲ್ಲೆಗೆ 44 ಹುದ್ದೆ ಹಾಗೂ ಕೆಜಿಎಫ್‌ಗೆ 14 ಹುದ್ದೆ ವರ್ಗೀಕರಣ ಮಾಡಲಾಗಿದೆ.

ಶನಿವಾರ ಮಧ್ಯಾಹ್ನದ ವೇಳೆಗೆ ನಗರ ತಲುಪಿದ ಹಲವರು ರಸ್ತೆ ಬದಿಯ ಗೂಡಂಗಡಿ, ತಳ್ಳು ಗಾಡಿಗಳಲ್ಲಿ ಊಟ, ತಿಂಡಿ ಮಾಡಿ ಉದ್ಯಾನಗಳಲ್ಲಿ ಕುಳಿತು ಓದಿದರು. ರಾತ್ರಿ ಆಗುತ್ತಿದ್ದಂತೆ ಮಲಗಲು ಸಮಸ್ಯೆ ಎದುರಾಯಿತು.

3Aನೇ ಪುಟ ನೋಡಿ



ಕೋಲಾರದ ರೈಲು ನಿಲ್ದಾಣ ಆವರಣದಲ್ಲೇ ಪರೀಕ್ಷಾರ್ಥಿಗಳು ಮಲಗಿದ್ದರು

ನಮ್ಮ ಗಮನಕ್ಕೆ ಬಂದ ಪರೀಕ್ಷಾರ್ಥಿಗಳ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿದೆವು. ಮೂರು ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದಾರೆ
ಎಂ.ನಾರಾಯಣ
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಕೋಲಾರ


ತುಮಕೂರು ಜಿಲ್ಲೆಗೆ
715 ಕೋಟಿ ವೆಚ್ಚದ
ವಿವಿಧ ಅಭಿವೃದ್ಧಿ ಕಾಮಗಾರಿಗಳ
ಉದ್ಘಾಟನೆ ಹಾಗೂ ಶಂಕುಸ್ಥಾಪನೆ
ವಿವಿಧ ಸವಲತ್ತುಗಳ
ವಿತರಣಾ ಕಾರ್ಯಕ್ರಮಕ್ಕೆ
ಆಗಮಿಸುತ್ತಿರುವ
ಮುಖ್ಯಮಂತ್ರಿಗಳಾದ
ಸಿದ್ದರಾಮಯ್ಯನವರಿಗೆ
ಉಪಮುಖ್ಯಮಂತ್ರಿಗಳಾದ
ಡಿ.ಕೆ.ಶಿವಕುಮಾರ್
ಮತ್ತು ಹಾಗೂ ಎಲ್ಲಾ ಮಂತ್ರಿಗಳಿಗೆ
ಹಾರ್ದಿಕ ಸುಸ್ವಾಗತ
ದಿನಾಂಕ : 29-01-2024 ಸೋಮವಾರ
ಸ್ಥಳ : ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನ, ತುಮಕೂರು.
ಶ್ರೀ ಬಿ.ವಿ.ಜಯರಾಮು
ಕಾಂಗ್ರೆಸ್ ಮುಖಂಡರು ಹಾಗೂ
ಡಾ.ಜಿ.ಪರಮೇಶ್ವರ್ ಅವರ ಅಭಿಮಾನಿಗಳ ಬಳಗ

ನಾಗರಿಕ ವೇದಿಕೆಯ ಕಾರ್ಯಕ್ರಮದಲ್ಲಿ ಪತ್ರಕರ್ತ ಕೃಷ್ಣಪ್ರಸಾದ್ ಅಭಿಮತ

‘ಎನ್‌ಡಿಎ ಅವಧಿಯಲ್ಲಿ ಹೆಚ್ಚಿದ ಇ.ಡಿ ದಾಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಶ್ವಮೇಧ ಯಾಗದಲ್ಲಿ ಕುದುರೆ ಬಿಟ್ಟಂತೆ ವಿರೋಧ ಪಕ್ಷದವರನ್ನು ಹಣಿಯಲು ಇ.ಡಿ (ಜಾರಿ ನಿರ್ದೇಶನಾಲಯ) ಎಂಬ ಕುದುರೆ ಬಿಡಲಾಗಿದೆ. ಪಂಜಾಬ್, ರಾಜಸ್ಥಾನ, ದೆಹಲಿ, ಬಿಹಾರ, ಮಹಾರಾಷ್ಟ್ರ, ಕರ್ನಾಟಕ ಹಾಗೂ ತೆಲಂಗಾಣದಲ್ಲಿ ಇ.ಡಿ ಕಾರ್ಯಾಚರಣೆಗಳು ನಿರಂತರವಾಗಿ ನಡೆದಿರುವುದು ಇದಕ್ಕೆ ಸಾಕ್ಷಿ’ ಎಂದು ಪತ್ರಕರ್ತ ಕೃಷ್ಣಪ್ರಸಾದ್ ಅಭಿಪ್ರಾಯಪಟ್ಟರು.

ನಗರದ ಗಾಂಧಿ ಭವನದಲ್ಲಿ ನಾಗರಿಕರ ವೇದಿಕೆ ವತಿಯಿಂದ ‘ಜಾರಿ ನಿರ್ದೇಶನಾಲಯ (ಇ.ಡಿ), ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ-2002, ಸಿಬಿಐ, ಸಂವಿಧಾನ ಹಾಗೂ ರಾಜ್ಯಪಾಲರ ಜವಾಬ್ದಾರಿ’ ವಿಷಯದ ಬಗ್ಗೆ ಭಾನುವಾರ ಹಮ್ಮಿಕೊಂಡಿದ್ದ ಸಂವಾದದಲ್ಲಿ ಅವರು ಮಾತನಾಡಿದರು.



ಸಂವಾದದಲ್ಲಿ ಪಾಲ್ಗೊಂಡಿದ್ದ ಹೈಕೋರ್ಟ್‌ನ ಹಿರಿಯ ವಕೀಲ ಬಿ.ವಿ. ಆಚಾರ್ಯ ಅವರಿಗೆ ಹಸ್ತಲಾಘವ ನೀಡಿದ ಪತ್ರಕರ್ತ ಕೃಷ್ಣಪ್ರಸಾದ್ ಕುಶಲೋಪರಿ ವಿಚಾರಿಸಿದರು. ರಾಜ್ಯಸಭಾ ಸದಸ್ಯ ಎಲ್‌.ಹನುಮಂತಯ್ಯ, ನಿವೃತ್ತ ಲೋಕಾಯುಕ್ತ ಎನ್‌. ಸಂತೋಷ್ ಹೆಗ್ಡೆ ಇದ್ದರು – ಪ್ರಜಾವಾಣಿ ಚಿತ್ರ

‘ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಹೋಲಿಸಿದರೆ, ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದಲ್ಲಿ ಇ.ಡಿ ದಾಳಿಗಳು ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿವೆ. ಇವನ್ನೆಲ್ಲ ಪ್ರಶ್ನಿಸಬೇಕಾದ ನಾವೆಲ್ಲರೂ ಮೌನವಾಗಿದ್ದೇವೆ’ ಎಂದು ಅಂಕಿ ಅಂಶಗಳನ್ನು ಉಲ್ಲೇಖಿಸಿ ಹೇಳಿದರು.

ನಿವೃತ್ತ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ ಮಾತನಾಡಿ, ‘ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ಪ್ರಜಾಪ್ರಭುತ್ವದ ರಾಜನೀತಿ ಮೇಲೆ ಜನರು ಇಟ್ಟಿರುವ ನಂಬಿಕೆಯನ್ನು ಸುಳ್ಳು ಮಾಡುತ್ತಿರುವ ಪ್ರಜಾಪ್ರಭುತ್ವದ ಎಲ್ಲ ಅಂಗಗಳ ಪ್ರತಿನಿಧಿಗಳು, ವೈಯಕ್ತಿಕ ಲಾಭಕ್ಕಾಗಿ ಕಾನೂನುಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ’ ಎಂದು ಅಭಿಪ್ರಾಯಪಟ್ಟರು.

> **ಪ್ರಾಮಾಣಿಕರಿಗೆ ಗೌರವ ಇಲ್ಲದಂತಾಗಿದೆ. ಜೈಲಿಗೆ ಹೋಗಿ ಬಂದವರನ್ನು ಅದ್ದೂರಿಯಾಗಿ ಸ್ವಾಗತಿಸಲಾಗುತ್ತಿದೆ**
> **ಎನ್. ಸಂತೋಷ್ ಹೆಗ್ಡೆ**
> **ನಿವೃತ್ತ ಲೋಕಾಯುಕ್ತ**

‘ಪ್ರಾಮಾಣಿಕತೆಗೆ ಗೌರವ ನೀಡುತ್ತಿದ್ದ ಸಮಾಜ ನಮ್ಮದಾಗಿತ್ತು. ಆದರೆ, ಇಂದು ಶ್ರೀಮಂತಿಕೆ ಹಾಗೂ ಅಧಿಕಾರಕ್ಕೆ ಗೌರವ ಸಿಗುತ್ತಿದೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗದಲ್ಲಿರುವ ಎಲ್ಲರೂ ಜನತಾ ಸೇವಕರು. ವೈಯಕ್ತಿಕ ಲಾಭ ಹಾಗೂ ಅಧಿಕಾರಕ್ಕಾಗಿ ಜವಾಬ್ದಾರಿ ಮರೆಯುತ್ತಿದ್ದಾರೆ. ಯಾವುದೇ ನೇಮಕವಿದ್ದರೂ ಅದರಿಂದ ತಮಗೇನು ಲಾಭ ಎಂಬುದನ್ನೇ ಪ್ರತಿನಿಧಿಗಳು ಲೆಕ್ಕ ಹಾಕುತ್ತಿದ್ದಾರೆ’ ಎಂದರು.

ರಾಜ್ಯಸಭೆ ಸದಸ್ಯ ಎಲ್. ಹನುಮಂತಯ್ಯ ಮಾತನಾಡಿ, ‘ಇ.ಡಿ., ಸಿಬಿಐ, ಐ.ಟಿ ಹಾಗೂ ಇತರ ಸ್ವಾಯತ್ತ ಸಂಸ್ಥೆಗಳು ಒಂದೊಂದಾಗಿ ಬೆತ್ತಲಾಗಿ ನಿಲ್ಲುತ್ತಿವೆ. ಅಕ್ರಮ ಹಾಗೂ ಅಪರಾಧಗಳಲ್ಲಿ ಭಾಗಿಯಾಗುತ್ತಿರುವವರಿಗೆ, ಪಕ್ಷದ ಪ್ರಾಥಮಿಕ ಸದಸ್ಯತ್ವ ಸಿಗುತ್ತಿದ್ದಂತೆ ಕ್ಲಿನ್‌ಚಿಟ್ ನೀಡಲಾಗುತ್ತಿದೆ. ಎಲ್ಲ ಸಂಸ್ಥೆಗಳನ್ನು ನಿರ್ನಾಮ ಮಾಡುತ್ತ ದೇಶಪ್ರೇಮದ ಹೆಸರಿನಲ್ಲಿ ಜನರ ದಿಕ್ಕು ತಪ್ಪಿಸುತ್ತಿರುವುದು ಆತಂಕಕಾರಿ ಅಂಶ’ ಎಂದರು. ಹೈಕೋರ್ಟ್‌ನ ಹಿರಿಯ ವಕೀಲ ಬಿ.ವಿ. ಆಚಾರ್ಯ, ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಸಂವಾದದಲ್ಲಿ ಹಾಜರಿದ್ದರು.



ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ಭಾನುವಾರ ಭಾರಿ ಸಂಖ್ಯೆಯಲ್ಲಿ ಜನರು ಫಲಪುಷ್ಪ ಪ್ರದರ್ಶನ ವೀಕ್ಷಿಸಿದರು —ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

ಅಂತಿಮ ದಿನ 76 ಸಾವಿರ ಮಂದಿ ಭಾಗಿ

ಫಲಪುಷ್ಪ ಪ್ರದರ್ಶನಕ್ಕೆ ತೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್ ಗಾಜಿನ ಮನೆಯಲ್ಲಿ ತೋಟಗಾರಿಕೆ ಇಲಾಖೆ ಆಯೋಜಿಸಿದ್ದ ‘ವಿಶ್ವಗುರು’ ಬಸವಣ್ಣ ಹಾಗೂ ವಚನ ಸಾಹಿತ್ಯ ಆಧಾರಿತ ಫಲ-ಪುಷ್ಪ ಪ್ರದರ್ಶನದಲ್ಲಿ ಅಂತಿಮ ದಿನ 76,500 ಜನ ಭಾಗವಹಿಸಿದ್ದರು. ಪ್ರವೇಶ ಶುಲ್ಕವಾಗಿ ಒಟ್ಟು ₹37.5 ಲಕ್ಷ ಸಂಗ್ರಹವಾಗಿದೆ.

ಭಾನುವಾರ ಶಾಲಾ-ಕಾಲೇಜು, ಕಚೇರಿಗಳಿಗೆ ರಜೆ ಇದ್ದಿದ್ದರಿಂದ ಬೆಳಿಗ್ಗೆಯಿಂದಲೇ ಸಾರ್ವಜನಿಕರು ತಂಡೋಪತಂಡವಾಗಿ ಲಾಲ್‌ಬಾಗ್‌ನತ್ತ ಬರುತ್ತಿದ್ದರು. ಲಾಲ್‌ಬಾಗ್‌ನ ನಾಲ್ಕೂ ಪ್ರವೇಶ ದ್ವಾರಗಳಲ್ಲಿ ಜನಸಂದಣಿ ಹೆಚ್ಚಿತ್ತು.

ಲಾಲ್‌ಬಾಗ್ ಮುಖ್ಯ ಗೇಟ್‌ನ ರಸ್ತೆಯಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಏಕಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಿದ್ದರೂ, ಬೀದಿ ಬದಿ ವ್ಯಾಪಾರಿಗಳು ಹೆಚ್ಚಾಗಿದ್ದರಿಂದ ಸಂಚಾರ ದಟ್ಟಣೆ ಉಂಟಾಗಿತ್ತು. ಲಾಲ್‌ಬಾಗ್ ಮೆಟ್ರೊ ನಿಲ್ದಾಣದಲ್ಲಿ ಟಿಕೆಟ್ ಖರೀದಿಗೆ ಪ್ರಯಾಣಿಕರು ಹರಸಾಹಸ ಪಡುತ್ತಿದ್ದರು. ಬಿಎಂಟಿಸಿ ಬಸ್‌ಗಳೆಲ್ಲ ಭರ್ತಿಯಾಗಿದ್ದವು. ಶಾಂತಿನಗರ ಬಸ್ ನಿಲ್ದಾಣದಿಂದ ಲಾಲ್‌ಬಾಗ್‌ನ ಗೇಟ್‌ವರೆಗೆ, ಉದ್ಯಾನದ ವೆಸ್ಟ್‌ಗೇಟ್‌ನ ಪಾದಚಾರಿ ಮಾರ್ಗಗಳಲ್ಲಿ ಕಿರು ಮಾರುಕಟ್ಟೆಗಳು ಸೃಷ್ಟಿಯಾಗಿದ್ದವು.

ಗಾಜಿನ ಮನೆಯಲ್ಲಿ ಬಸವಣ್ಣ ಹಾಗೂ ವಚನ ಸಾಹಿತ್ಯದ ಪುಷ್ಪಗಳ ಮಾದರಿಯನ್ನು ನೋಡಲು ಬಂದಿದ್ದ ಜನ ಸರತಿ ಸಾಲಿನಲ್ಲಿ ನಿಂತಿದ್ದರು. ಪೊಲೀಸರು ಮತ್ತು ತೋಟಗಾರಿಕೆ ಇಲಾಖೆ ಸಿಬ್ಬಂದಿ ಕಿಕ್ಕಿರಿದು ಸೇರಿದ್ದ ಜನರನ್ನು ನಿಯಂತ್ರಿಸಲು ಹರಸಾಹಸಪಟ್ಟರು.

‘ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನಕ್ಕೆ ಜನವರಿ 18ರಿಂದ 28ರವರೆಗೆ ಒಟ್ಟು 5.61 ಲಕ್ಷ ಜನ ಭೇಟಿ ನೀಡಿದ್ದು, ಒಟ್ಟು ₹2.59 ಕೋಟಿ ಪ್ರವೇಶ ಶುಲ್ಕ ಸಂಗ್ರಹವಾಗಿದೆ’ ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಕಾನ್‌ಸ್ಟೆಬಲ್ ಪರೀಕ್ಷೆ: ಕೆಲವೆಡೆ ಅದಲು– ಬದಲು ಗೊಂದಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಶಸ್ತ್ರ ಮೀಸಲು ಪೊಲೀಸ್ ಪಡೆಯಲ್ಲಿ (ಸಿಎಆರ್ ಹಾಗೂ ಡಿಎಆರ್) ಖಾಲಿ ಇರುವ 3,064 ಕಾನ್‌ಸ್ಟೆಬಲ್ ಹುದ್ದೆಗಳ ಭರ್ತಿಗಾಗಿ ರಾಜ್ಯದ 710 ಕೇಂದ್ರಗಳಲ್ಲಿ ಭಾನುವಾರ ಲಿಖಿತ ಪರೀಕ್ಷೆ ಸುಗಮವಾಗಿ ನಡೆಯಿತು.

ಬೆಂಗಳೂರಿನ ನ್ಯಾಷನಲ್ ಕಾಲೇಜು ಪರೀಕ್ಷಾ ಕೇಂದ್ರದಲ್ಲಿ ಒಎಂಆರ್ ಪ್ರತಿಗಳನ್ನು ಅದಲು-ಬದಲಾಗಿ ಅಭ್ಯರ್ಥಿಗಳಿಗೆ ಹಂಚಿಕೆ ಮಾಡಿದ್ದರಿಂದ ಕೆಲ ನಿಮಿಷ ಗೊಂದಲ ಉಂಟಾಗಿತ್ತು. ಸ್ಥಳಕ್ಕೆ ಭೇಟಿ ನೀಡಿದ್ದ ಪೊಲೀಸ್ ನೇಮಕಾತಿ ವಿಭಾಗದ ಡಿಜಿಪಿ ಕಮಲ್ ಪಂತ್, ಅಭ್ಯರ್ಥಿಗಳ ಗೊಂದಲ ನಿವಾರಿಸಿದರು.

ಕೇಂದ್ರದ ಅಭ್ಯರ್ಥಿಗಳಿಗೆ ನೋಂದಣಿ ಸಂಖ್ಯೆಗೆ ಅನುಗುಣವಾಗಿ ಒಎಂಆರ್ ಪ್ರತಿ ಹಂಚಲು ಸಿಬ್ಬಂದಿಗೆ ಸೂಚಿಸಲಾಗಿತ್ತು. ಆದರೆ, ಹಂಚಿಕೆ ಸಂದರ್ಭದಲ್ಲಿ ಒಎಂಆರ್ ಪ್ರತಿಗಳು ಅದಲು-ಬದಲು ಆಗಿದ್ದವು. ಅದನ್ನು ಗಮನಿಸಿದ್ದ ಹಲವು ಅಭ್ಯರ್ಥಿಗಳು, ಒಎಂಆರ್ ಪ್ರತಿ ಬದಲಾಯಿಸಿದ್ದರು. ಆದರೆ, ಕೆಲ ಅಭ್ಯರ್ಥಿಗಳು ಯಥಾಪ್ರಕಾರ ಉತ್ತರ ಬರೆಯಲಾರಂಭಿಸಿದ್ದರು. ಕೆಲ ನಿಮಿಷಗಳ ನಂತರ, ಅದಲು-ಬದಲು ವಿಷಯ ಗೊತ್ತಾಗಿ ಅಭ್ಯರ್ಥಿಗಳು ಆತಂಕಗೊಂಡಿದ್ದರು.

> **3.19 ಲಕ್ಷ ಅಭ್ಯರ್ಥಿಗಳಿಗೆ ಪ್ರವೇಶ ಪತ್ರ ನೀಡಲಾಗಿತ್ತು. ಶೇ 80ರಷ್ಟು ಅಭ್ಯರ್ಥಿಗಳು ಭಾನುವಾರ ಪರೀಕ್ಷೆ ಬರೆದಿದ್ದಾರೆ. ಎಲ್ಲ ಕೇಂದ್ರದಲ್ಲೂ ಪರೀಕ್ಷೆ ಸುಗಮವಾಗಿ ನಡೆದಿದೆ**
> **ಕಮಲ್ ಪಂತ್,** ಪೊಲೀಸ್ ನೇಮಕಾತಿ ವಿಭಾಗದ ಡಿಜಿಪಿ

‘ಪರೀಕ್ಷೆಗಳನ್ನು ಸುಗಮವಾಗಿ ನಡೆಸಲು ಹಾಗೂ ನಕಲು ತಡೆಯುವ ಉದ್ದೇಶದಿಂದ ಮುಂಜಾಗ್ರತಾ ಕ್ರಮವಾಗಿ ಒಎಂಆರ್ ಪ್ರತಿಗಳಲ್ಲಿ ಅಭ್ಯರ್ಥಿಗಳ ನೋಂದಣಿ ಸಂಖ್ಯೆಯನ್ನು ಮುದ್ರಿಸಲಾಗಿತ್ತು. ಜೊತೆಗೆ, ನೋಂದಣಿ ಸಂಖ್ಯೆ ಬರೆಯಲೂ ಪ್ರತ್ಯೇಕ ಬಾಕ್ಸ್‌ನಲ್ಲಿ ಅವಕಾಶ ನೀಡಲಾಗಿತ್ತು. ಒಬ್ಬರ ನೋಂದಣಿ ಸಂಖ್ಯೆಯ ಒಎಂಆರ್ ಪ್ರತಿ, ಬೇರೊಬ್ಬರಿಗೂ ಹಂಚಿಕೆ ಆಗಿದ್ದರಿಂದ ಗೊಂದಲ ಉಂಟಾಗಿತ್ತು’ ಎಂದು ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಮುಂಜಾಗ್ರತಾ ಕ್ರಮವಾಗಿ ಮುದ್ರಿಸಿರುವ ನೋಂದಣಿ ಸಂಖ್ಯೆ, ಒಎಂಆರ್ ಮೌಲ್ಯಮಾಪನ ವೇಳೆ ಗಣನೆಗೆ ಬರುವುದಿಲ್ಲ. ಅಭ್ಯರ್ಥಿಗಳು ಬರೆಯುವ ನೋಂದಣಿ ಸಂಖ್ಯೆಯನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುವುದು. ಈ ಬಗ್ಗೆ ಅಭ್ಯರ್ಥಿಗಳಿಗೆ ಮನದಟ್ಟು ಮಾಡಿಕೊಡಲಾಗಿದೆ. ಜೊತೆಗೆ, ಎಲ್ಲರ ನೋಂದಣಿ ಸಂಖ್ಯೆ ಹಾಗೂ ಒಎಂಆರ್ ಪ್ರತಿ ಸಂಖ್ಯೆಯನ್ನು ಸೂಕ್ತವಾಗಿ ಪರಿಶೀಲಿಸಿ, ಗೊಂದಲ ನಿವಾರಣೆ ಮಾಡಲಾಯಿತು’ ಎಂದು ಹೇಳಿದರು.

ಒಂದೇ ಕೇಂದ್ರದಲ್ಲಿ 17,000 ಅಭ್ಯರ್ಥಿಗಳು: ಮೂಡಬಿದರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯ ಪರೀಕ್ಷೆ ಕೇಂದ್ರದಲ್ಲಿ 17,000 ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಅರ್ಹರಾಗಿದ್ದರು. ಬಹುಪಾಲು ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದು, ಒಂದೇ ಕೇಂದ್ರದಲ್ಲಿ ಅತೀ ಹೆಚ್ಚು ಅಭ್ಯರ್ಥಿಗಳು ಹಾಜರಾಗಿರುವುದು ಇದೇ ಮೊದಲು ಎಂದು ಅಧಿಕಾರಿ ತಿಳಿಸಿದರು.

ಹಸಿರು ಮಾರ್ಗ: ಇಂದು ಮೆಟ್ರೊ ಸಂಚಾರ ಪುನರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಸಿರು ಮಾರ್ಗದಲ್ಲಿ ನಾಗಸಂದ್ರದಿಂದ ಮಾದಾವರ ವರೆಗಿನ ವಿಸ್ತರಣೆ ಮಾರ್ಗದ ಪೂರ್ವ ನಿಯೋಜಿತ ಕಾಮಗಾರಿ ಭಾನುವಾರ ಪೂರ್ಣಗೊಂಡಿದ್ದು, ಮೂರು ದಿನಗಳಿಂದ ಸ್ಥಗಿತಗೊಂಡಿದ್ದ ನಾಗಸಂದ್ರ- ಪೀಣ್ಯ ಇಂಡಸ್ಟ್ರಿ ನಿಲ್ದಾಣಗಳ ನಡುವಿನ ಮೆಟ್ರೊ ರೈಲು ಸಂಚಾರ ಸೋಮವಾರ ಪುನರಾರಂಭಗೊಳ್ಳಲಿದೆ. ಈ ಮಾರ್ಗದಲ್ಲಿ ಎಲೆಕ್ಟ್ರಿಕ್ ಕೆಲಸಗಳನ್ನು ಜ.26ರಿಂದ ಹಮ್ಮಿಕೊಳ್ಳಲಾಗಿತ್ತು. ಅದಕ್ಕಾಗಿ ಹಸಿರುಮಾರ್ಗದಲ್ಲಿ ಪೀಣ್ಯ ಇಂಡಸ್ಟ್ರಿಯಿಂದ ನಾಗಸಂದ್ರ ವರೆಗೆ ರೈಲು ಸಂಚಾರ ಸ್ಥಗಿತಗೊಳಿಸಲಾಗಿತ್ತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಜೈನರ ಅಭಿವೃದ್ಧಿ ನಿಗಮ ಸ್ಥಾಪಿಸದಿದ್ದಲ್ಲಿ 4 ಹಂತದ ಹೋರಾಟ: ಗುಣಧರನಂದಿ



ಆಚಾರ್ಯ ಗುಣಧರ ನಂದಿ ಮಹಾರಾಜ್

ಚಿಕ್ಕೋಡಿ: ‘ಜೈನ ಸಮುದಾಯದ ಏಳ್ಗೆಗಾಗಿ ಜೈನ ಸಮಾಜದ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಬೇಕು. ಇಲ್ಲದೇ ಹೋದಲ್ಲಿ ಮುಂಬರುವ ದಿನಗಳಲ್ಲಿ ನಾಲ್ಕು ಹಂತಗಳ ಹೋರಾಟ ಮಾಡಲಾಗುವುದು’ ಎಂದು ಹುಬ್ಬಳ್ಳಿಯ ವರೂರಿನ ಆಚಾರ್ಯ ಗುಣಧರನಂದಿ ಮಹಾರಾಜ್ ಎಚ್ಚರಿಕೆ ನೀಡಿದರು.

ತಾಲ್ಲೂಕಿನ ಶಮನೇವಾಡಿ ಗ್ರಾಮದಲ್ಲಿ ಫೆ.8ರಂದು ಆಯೋಜಿಸಲಿರುವ ಜೈನ ಸಮ್ಮೇಳನದ ಪೂರ್ವಭಾವಿ ಸಭೆ ಉದ್ದೇಶಿಸಿ ಮಾತನಾಡಿದ ಅವರು, ‘ಜೈನ ಸಮುದಾಯವನ್ನು ಜಾಗೃತ ಮಾಡುವ ನಾಯಕರು ಬೇಕಾಗಿದೆ. ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ಅವರ ಮೇಲೆ ಅಪವಾದ ಬಂದಾಗ ಸಮಾಜದ ಯಾರೊಬ್ಬರೂ ಬೀದಿಗಿಳಿಯಲಿಲ್ಲ. ಸಮಾಜಕ್ಕಾಗುವ ಸಮಸ್ಯೆಗೆ ಪರಿಹಾರ ಕೇಳುವವರು ಇಲ್ಲದಂತಾಗಿದೆ. ಹೀಗಾಗಿಯೇ ಜೈನ ಸಮಾಜದ ಅಭಿವೃದ್ಧಿ ನಿಗಮವನ್ನು ಸರ್ಕಾರ ಕೂಡಲೇ ಸ್ಥಾಪಿಸಬೇಕು. ಪ್ರತಿವರ್ಷ ₹100 ಕೋಟಿ ನಿಧಿ ಮೀಸಲಿಡಬೇಕು’ ಎಂದು ಒತ್ತಾಯಿಸಿದರು.

‘ನಿಗಮಕ್ಕಾಗಿ ಮೊದಲ ಹಂತವಾಗಿ ಆಯಾ ಜಿಲ್ಲೆಯಲ್ಲಿ ಜೈನ ಸಮಾಜದವರು ಸಂಬಂಧಿಸಿದ ಶಾಸಕರಿಗೆ ಮನವಿ ಸಲ್ಲಿಸುವುದು. ಬಳಿಕ ಬೆಳಗಾವಿಯಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ, ಉಪವಾಸ ಕುಳಿತುಕೊಳ್ಳುವುದು ಹಾಗೂ ನಾಲ್ಕನೇಯದಾಗಿ ಬೆಂಗಳೂರಿನ ವಿಧಾನಸೌಧದ ಎದುರು ಧರಣಿ ಮಾಡಲು ಕೂಡ ತಾವು ಬದ್ಧ’ ಎಂದು ಹೇಳಿದರು.

ಫೆ.1ರಿಂದ ‘ಅಖಿಲ ಭಾರತೀಯ ಕಲಾಸಾಧಕ ಸಂಗಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸ್ಕಾರ ಭಾರತಿ ಕರ್ನಾಟಕವು ಫೆ.1 ರಿಂದ 4ರವರೆಗೆ ನಗರದ ಆರ್ಟ್ ಆಫ್ ಲಿವಿಂಗ್ ಅಂತರ ರಾಷ್ಟ್ರೀಯ ಕೇಂದ್ರದಲ್ಲಿ ‘ಅಖಿಲ ಭಾರತೀಯ ಕಲಾಸಾಧಕ ಸಂಗಮ’ ಕಾರ್ಯಕ್ರಮವನ್ನು ಆಯೋಜಿಸಿದೆ.

ಭಾನುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಕಾರ ಭಾರತಿಯ ಅಖಿಲ ಭಾರತ ಮಹಾಮಂತ್ರಿ ಅಶ್ವಿನ್ ದಲ್ವಿ, ‘ಈ ಕಾರ್ಯಕ್ರಮವನ್ನು ‘ಸಮರಸತೆ’ ಎಂಬ ಪರಿಕಲ್ಪನೆಯಡಿ ಆಯೋಜಿಸಲಾಗುತ್ತಿದ್ದು, ದೇಶದ ವಿವಿಧೆಡೆಯಿಂದ 2,500ಕ್ಕೂ ಹೆಚ್ಚು ಕಲಾಸಾಧಕರು ಬರಲಿದ್ದಾರೆ. ಫೆ.1ರ ಸಂಜೆ 4.30ಕ್ಕೆ ಕಾರ್ಯಕ್ರಮದ ಉದ್ಘಾಟನೆ ನಡೆಯಲಿದ್ದು, ಮೈಸೂರಿನ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಜನಪದ ಕಲಾವಿದೆ ಮಂಜಮ್ಮ ಜೋಗತಿ, ಇತಿಹಾಸ ತಜ್ಞ ವಿಕ್ರಮ ಸಂಪತ್ ಮತ್ತು ತಬಲಾ ವಿದ್ವಾಂಸ ಪಂಡಿತ್ ರವೀಂದ್ರ ಯಾವಗಲ್ ಮತ್ತು ವಿಜಯನಗರ ರಾಜ ವಂಶಸ್ಥ ಕೃಷ್ಣದೇವರಾಯ ಪಾಲ್ಗೊಳ್ಳಲಿದ್ದಾರೆ’ ಎಂದು ತಿಳಿಸಿದರು.

‘ನಾಲ್ಕು ದಿನಗಳ ಕಾರ್ಯಕ್ರಮದಲ್ಲಿ ಪ್ರತಿ ನಿತ್ಯ ಲೋಕನೃತ್ಯ, ವಿಚಾರ ಸಂಕಿರಣ, ಚಿತ್ರಕಲೆ, ಹಸ್ತಪ್ರತಿ, ರಂಗೋಲಿ ಕಲಾ ಪ್ರದರ್ಶನಗಳಿರುತ್ತವೆ. ಇವುಗಳ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿಶೇಷ ಉಪನ್ಯಾಸಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಫೆ.3ರಂದು ಚಿತ್ರಕಲಾವಿದ ವಿಜಯ ದಶರಥ್ ಅಚ್ರೇಕರ್ ಮತ್ತು ಜನಪದ ಕಲಾವಿದ ಗಣಪತ್ ಸಖಾರಾಮ ಮಸಗೆ ಅವರಿಗೆ ‘ಭರತಮುನಿ ಸಮ್ಮಾನ’ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ’ ಎಂದು ವಿವರಿಸಿದರು.

‘ಫೆ.4ರ ಸಮಾರೋಪ ಸಮಾರಂಭದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್, ಆರ್ಟ್ ಆಫ್ ಲಿವಿಂಗ್‌ನ ಸಂಸ್ಥಾಪಕ ಶ್ರೀಶ್ರೀ ರವಿಶಂಕರ್ ಗುರೂಜಿ ಭಾಗವಹಿಸಲಿದ್ದಾರೆ’ ಎಂದು ತಿಳಿಸಿದರು.

ಸಂಸ್ಕಾರ ಭಾರತಿ-ಕರ್ನಾಟಕ ಪ್ರಾಂತಾಧ್ಯಕ್ಷ ಸುಚೇಂದ್ರ ಪ್ರಸಾದ್, ಕೋಶಾಧ್ಯಕ್ಷ ಜಗದೀಶ್ ಟಿ. ಆರ್. ಉಪಸ್ಥಿತರಿದ್ದರು.

ಗೌರಿ ಲಂಕೇಶ್ ನೆನಪಿನಲ್ಲಿ 'ನಾಲ್ಕನೇ ಅಂಗದ ಮರುನಿರ್ಮಾಣ' ಚಿಂತನಾ ಕಾರ್ಯಕ್ರಮ

'ಜನರ ಚಿಂತನಾ ಶಕ್ತಿಯನ್ನೇ ಕೊಲ್ಲಲಾಗುತ್ತಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಎಲ್ಲರನ್ನು ಸಂವಿಧಾನದಿಂದ ದೂರಕ್ಕೆ ಕೊಂಡೊಯ್ಯಲಾಗುತ್ತಿದೆ. ಜನರ ಚಿಂತನೆಯ ಶಕ್ತಿಯನ್ನು ಕೊಂದು ಮೃಗಗಳನ್ನಾಗಿ ಮಾಡಲಾಗುತ್ತಿದೆ' ಎಂದು 'ಆರ್ಟಿಕಲ್ 19 ಇಂಡಿಯಾ' ಸಂಸ್ಥಾಪಕ ಸಂಪಾದಕ ನವೀನ್ ಕುಮಾರ್ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಭಾನುವಾರ ಗೌರಿ ಲಂಕೇಶ್ ನೆನಪಿನಲ್ಲಿ ಗೌರಿ ಮೆಮೊರಿಯಲ್ ಟ್ರಸ್ಟ್ ಆಯೋಜಿಸಿದ್ದ 'ನಾಲ್ಕನೇ ಅಂಗದ ಮರುನಿರ್ಮಾಣ' ಚಿಂತನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಧರ್ಮ ರಕ್ಷಣೆಯ ಹೆಸರಲ್ಲಿ ಯುವ ಜನರಿಂದ ಪುಸ್ತಕ, ಪೆನ್ನು ಕಿತ್ತುಕೊಂಡು ತಲ್ವಾರ್ ಕೊಡುವಂತಹ ಕೆಲಸಗಳಾಗುತ್ತಿವೆ. ಹಿಂದೂ- ಮುಸ್ಲಿಂ–ಕ್ರಿಶ್ಚಿಯನ್ನರ ನಡುವೆ ದ್ವೇಷ ಬಿತ್ತಲಾಗುತ್ತಿದೆ. ಮಹಿಳೆಯರು, ಪುರುಷರು ಕಚ್ಚಾಡುವಂತೆ ಮಾಡಲಾಗುತ್ತಿದೆ' ಎಂದರು.

'ಮನುಷ್ಯತ್ವದ ಎದುರು ಮಂದಿರ–ಮಸೀದಿಗಳನ್ನು ನಿಲ್ಲಿಸುತ್ತಿದ್ದಾರೆ. ಸಂವಿಧಾನವನ್ನು ಬದಲಾಯಿಸಲು ಷಡ್ಯಂತ್ರ ಮಾಡುತ್ತಿದ್ದಾರೆ. ಆರೋಗ್ಯ, ಶಿಕ್ಷಣವನ್ನು ಖಾಸಗೀಕರಣ ಮಾಡಿ ಬಡವರಿಗೆ ಎಟುಕದಂತೆ ಮಾಡುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ವಿಶ್ವವಿದ್ಯಾಲಯಗಳಲ್ಲಿ ಚಿಂತಕರು ಇದ್ದಾರೆ. ಸತ್ಯ ಮಾತನಾಡುತ್ತಾರೆ. ಅದಕ್ಕಾಗಿ ವಿಶ್ವವಿದ್ಯಾಲಯಗಳನ್ನು ಖಾಸಗೀಕರಣಗೊಳಿಸಿ ಶುಲ್ಕವನ್ನು ಏರಿಸಲಾಗುತ್ತಿದೆ. ಈ ಮೂಲಕ ಬಡವರ ಮಕ್ಕಳು ವಿಶ್ವವಿದ್ಯಾಲಯಗಳಿಗೆ ಬಾರದಂತೆ, ಅವರ ಮಟ್ಟ ಮೀರಿ ಚಿಂತನೆ ನಡೆಸದಂತೆ ತಡೆಯುವ ಹುನ್ನಾರ ನಡೆಸಲಾಗುತ್ತಿದೆ' ಎಂದು ಹೇಳಿದರು.

'ಯೋಚನೆ ಮಾಡುವವರನ್ನು, ಸತ್ಯ ಮಾತನಾಡುವವರನ್ನು, ಜಾಗೃತಿ ಮೂಡಿಸುವವರನ್ನು ಮೊದಲು ರಕ್ಷಣೆ ಮಾಡಬೇಕಿದೆ' ಎಂದೂ ಹೇಳಿದರು.

ಉತ್ತರ ಪ್ರದೇಶದ ಪತ್ರಕರ್ತೆ ಮೀನಾ ಕೊತ್ವಾಲ್ ಮಾತನಾಡಿ, 'ಯಾವುದೇ ಧರ್ಮ ಕಟ್ಟರ್ ಆದರೆ ಮೊದಲು ಮಹಿಳೆ ತೊಂದರೆ ಅನುಭವಿಸುತ್ತಾಳೆ. ಧಾರ್ಮಿಕ ವಿಚಾರಗಳಲ್ಲಿ ನೇರ ಮಾತನಾಡುವ ಮಹಿಳೆಯರನ್ನು ಧರ್ಮಗಳು ಸಹಿಸಿಕೊಳ್ಳುವುದಿಲ್ಲ. ಪೀಳಿಗೆಯನ್ನು ಜಾಗೃತಗೊಳಿಸುತ್ತಿದ್ದ ದಿಟ್ಟ ಪತ್ರಕರ್ತೆ ಗೌರಿಗೆ ಗುಂಡಿಕ್ಕಲು ಇದುವೇ ಕಾರಣ' ಎಂದರು.

'ಸರ್ಕಾರದ ಗಿಣಿಯಾಗಿ ಇರುವುದು, ಇಲ್ಲವೇ ಸತ್ಯ ಹೇಳಿ ಸಾಯುವುದು ಈಗ ಪತ್ರಕರ್ತರಿಗಿರುವ ಎರಡು ಆಯ್ಕೆಗಳು. ನಾನು, ಗೌರಿ ಲಂಕೇಶ್ ತರಹ ಸತ್ಯ ಹೇಳುತ್ತೇನೆ. ಸಾವು ಬಂದರೂ ಸರ್ಕಾರ ಆಡಿಸುವ ಸೂತ್ರದ ಗೊಂಬೆಯಾಗಲಾರೆ' ಎಂದು ದಿಟ್ಟ ನುಡಿಗಳನ್ನಾಡಿದರು.

ಚಿಂತಕರಾದ ತೀಸ್ತಾ ಸೆಟಲ್ವಾಡ್, ಪರಂಜಾಯ್ ಗುಹಾ ಠಾಕುರ್ತಾ, ಹರ್ಷೋತ್ತರ್ಶ್ ಬಾಲ್, ಸುಮಿತ್ ಚವ್ಹಾಣ್, ಗೀತಾ ಶೇಷು, ಕವಿತಾ ಲಂಕೇಶ್, ಭವರ್ ಮೇಘವಂಶಿ ಮಾತನಾಡಿದರು.

> **ಚುನಾವಣೆ ಸಮೀಪಿಸುತ್ತಿದೆ. ಇನ್ನು ಮೂರು ತಿಂಗಳಲ್ಲಿ ಏನೇನೋ ವಿದ್ಯಮಾನಗಳು ದೇಶದಲ್ಲಿ ಸಂಭವಿಸಲಿವೆ. ಪಿತೂರಿಗಳ ಬಗ್ಗೆ ಎಚ್ಚರದಿಂದ ಇರಬೇಕು**
>
> **ನವೀನ್‌ಕುಮಾರ್,** 'ಆರ್ಟಿಕಲ್ 19 ಇಂಡಿಯಾ' ಸಂಸ್ಥಾಪಕ ಸಂಪಾದಕ



ಗೌರಿ ಲಂಕೇಶ್ ನೆನಪಿನಲ್ಲಿ ಬೆಂಗಳೂರಿನಲ್ಲಿ ಗೌರಿ ಮೆಮೊರಿಯಲ್ ಟ್ರಸ್ಟ್ ಆಯೋಜಿಸಿದ್ದ 'ನಾಲ್ಕನೇ ಅಂಗದ ಮರುನಿರ್ಮಾಣ' ಚಿಂತನಾ ಕಾರ್ಯಕ್ರಮದಲ್ಲಿ ಗೌರಿ ಭಾವಚಿತ್ರಕ್ಕೆ ಕವಿತಾ ಲಂಕೇಶ್ ಪುಷ್ಪ ಅರ್ಪಿಸಿದರು. ತೀಸ್ತಾ ಸೆಟಲ್ವಾಡ್, ಪರಂಜಾಯ್ ಗುಹಾ ಠಾಕುರ್ತಾ, ಹರ್ಷೋತ್ತರ್ಶ್ ಬಾಲ್, ಸುಮಿತ್ ಚವ್ಹಾಣ್, ಗೀತಾ ಶೇಷು, ನವೀನ್ ಕುಮಾರ್ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ



ಅಂಕಿತ ಪುಸ್ತಕ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೆ.ಎನ್. ಗಣೇಶಯ್ಯ (ಎಡದಿಂದ ಮೊದಲನೆಯವರು) ಅವರ 'ಇಮ್ಮಡಿ ಮಡಿಲು', 'ಹೊಕ್ಕಳ ಮೆದುಳು' ಹಾಗೂ 'ಅಜ್ಞಾತ ಚಿತ್ತದತ್ತ ಒಂದು' ಪುಸ್ತಕವನ್ನು ಸಂಶೋಧಕ ದೇವರಕೊಂಡಾರೆಡ್ಡಿ (ಎಡದಿಂದ ಎರಡನೆಯವರು) ಬಿಡುಗಡೆ ಮಾಡಿದರು. ಕಾದಂಬರಿಕಾರ ಎಂ.ಆರ್. ದತ್ತಾತ್ರಿ ಮತ್ತು ಕಥೆಗಾರ ಕರ್ಕಿ ಕೃಷ್ಣಮೂರ್ತಿ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ



ಆರ್ ಟಿ ನಗರದ ವಿನಾಯಕ ದೇವಸ್ಥಾನ ಸಭಾಂಗಣದಲ್ಲಿ ಭಾನುವಾರ ನಡೆದ ಶಿವರಾಮ ಕಾರಂತ ವೇದಿಕೆಯ 31ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಮೈಸೂರಿನ ಕೃಪಾ ಫಡ್ಕೆ ಮತ್ತು ಶಿಷ್ಯೆಯರು 'ಭಾವಯಾಮಿ' ನೃತ್ಯ ರೂಪಕ ಪ್ರದರ್ಶಿಸಿದರು

'ವಿ.ವಿ.ಗಳಲ್ಲಿ ಪ್ರಾಚೀನ ಶಿಕ್ಷಣ ನೀತಿ ಜಾರಿಯಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಗತ್ತಿಗೆ ಜ್ಞಾನವನ್ನು ಉಪದೇಶ ಮಾಡಿದ ರಾಷ್ಟ್ರ ನಮ್ಮದಾಗಿದ್ದು, ನಮ್ಮ ಪ್ರಾಚೀನ ಜ್ಞಾನದ ಶಿಕ್ಷಣ ನೀತಿ ಇಲ್ಲಿನ ವಿಶ್ವವಿದ್ಯಾಲಯಗಳಲ್ಲಿ ಪರಿಣಾಮಕಾರಿಯಾಗಿ ಜಾರಿಯಾಗಬೇಕು' ಎಂದು ಭಂಡಾರಕೇರಿ ಮಠದ ವಿದ್ಯೇಶತೀರ್ಥ ಸ್ವಾಮೀಜಿ ತಿಳಿಸಿದರು.

ಗುಜರಾತ್‌ನ ಪುನರುತ್ಥಾನ ವಿದ್ಯಾಪೀಠ, ಪೂರ್ಣಪ್ರಮತಿ-ಪರಿಪೂರ್ಣ ಕಲಿಕಾ ತಾಣ ಹಾಗೂ ವಿದ್ಯಾಕ್ಷೇತ್ರ ಗುರುಕುಲ ಜಂಟಿಯಾಗಿ ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಭಾರತೀಯ ಶಿಕ್ಷಣದ ಪುನರುತ್ಥಾನ' ವಿದ್ವತ್ ಸಮ್ಮೇಳನದಲ್ಲಿ 1,051 ಪುಸ್ತಕಗಳನ್ನು ಲೋಕಾರ್ಪಣೆ ಮಾಡಿ, ಮಾತನಾಡಿದರು.

'ವೇದ ವಿಶ್ವದ ಜ್ಞಾನಕೋಶವಾಗಿದ್ದು, ಸರ್ವವನ್ನೂ ತಿಳಿಸಿದೆ. ಹಾಗಾಗಿಯೇ ಭಾರತ ಅನಾದಿ ಕಾಲದಿಂದಲೂ ಜ್ಞಾನದ ತವರೂರೆಂದು ಕರೆಯಿಸಿಕೊಂಡಿದೆ. ನಮ್ಮಲ್ಲಿ ಅಪಾರವಾದಂತಹ ಜ್ಞಾನದ ಸಂಪತ್ತು ಇದ್ದರೂ ಅದನ್ನು ನಾವು ಮೂಲೆಗುಂಪು ಮಾಡಿದ್ದೇವೆ. ಇಂದಿಗೂ ಬ್ರಿಟಿಷ್ ಶಿಕ್ಷಣ ನೀತಿಯ ಸಂಕೋಲೆಯಲ್ಲೇ ಇದ್ದೇವೆ. ಈಗಲಾದರೂ ಬ್ರಿಟಿಷ್ ಶಿಕ್ಷಣ ನೀತಿಯಿಂದ ಭಾರತೀಯರು ಹೊರಬರಬೇಕು' ಎಂದು ಹೇಳಿದರು.

'ರಾಷ್ಟ್ರ ರಕ್ಷಣೆಯಾಗಬೇಕಾದರೆ ಪ್ರಾಚೀನ ಜ್ಞಾನದ ಪ್ರತಿಷ್ಠಾಪನೆಯಾಗಬೇಕು. ಅಯೋಧ್ಯೆಯ ರಾಮನ ಸನ್ನಿಧಿಯಲ್ಲಿ ಪ್ರಾಚೀನ ಜ್ಞಾನದ ಶಿಕ್ಷಣ ಕೇಂದ್ರವನ್ನು ನಿರ್ಮಿಸಬೇಕು. ದಕ್ಷಿಣ ಭಾರತದ ಪ್ರಾಚೀನ ಜ್ಞಾನದ ಶಿಕ್ಷಣ ಕೇಂದ್ರವನ್ನು ಕರ್ನಾಟಕದಲ್ಲಿ ನಿರ್ಮಾಣ ಮಾಡುವ ಕೆಲಸವಾಗಬೇಕು' ಎಂದರು.

ಕೂಡಲಿ ಶೃಂಗೇರಿ ಶಾರದಾಪೀಠದ ಅಭಿನವ ಶಂಕರ ಭಾರತೀ ಸ್ವಾಮೀಜಿ, 'ಭಾರತೀಯ ಶಿಕ್ಷಣದ ಬಗ್ಗೆ ವೈಚಾರಿಕ ಸ್ಪಷ್ಟತೆ ಬಾರದೆ ಭಾರತೀಯ ಶಿಕ್ಷಣದ ಪುನರುತ್ಥಾನ ಸಾಧ್ಯವಿಲ್ಲ. ಪಠ್ಯ ವಿಷಯವೇ ಬೇರೆ, ಪಠ್ಯಕ್ರಮವೇ ಬೇರೆ. ಔರಂಗಜೇಬ ಸೇರಿದಂತೆ ಹಲವರನ್ನು ಪಠ್ಯದಿಂದ ತೆಗೆದುಹಾಕಿ, ಅವರ ಜಾಗದಲ್ಲಿ ಶಿವಾಜಿ ಮಹಾರಾಜ ಸೇರಿದಂತೆ ಇನ್ನಿತರರನ್ನು ತಂದು ಹಾಕಿದ ಮಾತ್ರಕ್ಕೆ ಭಾರತೀಯ ಶಿಕ್ಷಣ ಆಗುವುದಿಲ್ಲ. ಆದ್ದರಿಂದ ಶಿಕ್ಷಣ ವ್ಯವಸ್ಥೆಯಲ್ಲಿ ಸಮಗ್ರ ಬದಲಾವಣೆ ಮಾಡಿ, ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ಮತ್ತೆ ಜಾರಿ ಮಾಡಬೇಕು' ಎಂದು ಹೇಳಿದರು.

ಅಹಮದಾಬಾದ್‌ನ ಪುನರುತ್ಥಾನ ವಿದ್ಯಾಪೀಠದ ಕುಲಪತಿ ಇಂದುಮತಿ ಕಟ್ದಾರೆ, 'ಭಾರತವು ಜ್ಞಾನ ಹೊಂದಿದ ರಾಷ್ಟ್ರವಾಗಿದ್ದು, ಅದನ್ನು ಮರಳಿ ಪ್ರತಿಷ್ಠಾಪನೆ ಮಾಡಬೇಕಾಗಿದೆ. ಭಾರತೀಯತೆ ಅನಾವರಣ ಮಾಡುವ ಪಠ್ಯಗಳನ್ನು ರಚಿಸಿ, ವಿದ್ಯಾರ್ಥಿಗಳಿಗೆ ನೀಡಬೇಕಿದೆ' ಎಂದರು.



ಸಮ್ಮೇಳನದಲ್ಲಿ ವಿದ್ಯೇಶತೀರ್ಥ ಸ್ವಾಮೀಜಿ, ಅಭಿನವ ಶಂಕರ ಭಾರತೀ ಸ್ವಾಮೀಜಿ ಮತ್ತು ಇಂದುಮತಿ ಕಟ್ದಾರೆ ಅವರು 1,051 ಪುಸ್ತಕಗಳನ್ನು ಲೋಕಾರ್ಪಣೆ ಮಾಡಿದರು —ಪ್ರಜಾವಾಣಿ ಚಿತ್ರ

ರಾಷ್ಟ್ರೀಯ ಹೂವು ಲಾಂಛನದ ಬಗ್ಗೆ ಗೌರವ: ಕೆಎಂಶಿ

ಪ್ರಜಾವಾಣಿ ವಾರ್ತೆ

ಅರಸೀಕೆರೆ (ಹಾಸನ ಜಿಲ್ಲೆ): 'ಗಣರಾಜ್ಯೋತ್ಸವ ಸಮಾರಂಭದಲ್ಲಿ ಚಂದ್ರಶೇಖರ ಇಂಟರ್‌ನ್ಯಾಷನಲ್ ಶಾಲೆ ಮಕ್ಕಳು ನಡೆಸಿಕೊಟ್ಟ ನೃತ್ಯದಲ್ಲಿ ರಾಷ್ಟ್ರೀಯ ಹೂವು ಕಮಲವನ್ನು ದೊಡ್ಡದಾಗಿ ಪ್ರದರ್ಶನ ಮಾಡಿದ್ದರು. ಹಾಗಾಗಿ ಸಂಬಂಧಿಸಿದ ಶಿಕ್ಷಕರನ್ನು ಪ್ರಶ್ನಿಸಿದೆ' ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಹೇಳಿದ್ದಾರೆ.

ವಿಡಿಯೊ ಹೇಳಿಕೆ ನೀಡಿರುವ ಅವರು, 'ಮಕ್ಕಳು ರಾಷ್ಟ್ರೀಯ ಚಿಹ್ನೆಗಳಾದ ನವಿಲು, ಅಶೋಕ ಚಕ್ರ, ಕಮಲದ ಹೂವು ಪ್ರದರ್ಶಿಸಿದ್ದರು. ಆದರೆ, ಕಮಲದ ಹೂವು ಎದ್ದುಕಾಣುವಂತೆ ಮಾಡಿದ್ದರು. ಇದಕ್ಕಾಗಿ ಶಿಕ್ಷಕರನ್ನು ನಾನು ಪ್ರಶ್ನಿಸಿದ್ದು ನಿಜ. ಆದರೆ, ಅದರಲ್ಲಿ ರಾಜಕೀಯದ ದುರುದ್ದೇಶದಿಂದ ಕೇಳಿರಲಿಲ್ಲ. ರಾಷ್ಟ್ರಪ್ರೇಮ, ಸಂವಿಧಾನ, ರಾಷ್ಟ್ರಧ್ವಜ, ರಾಷ್ಟ್ರೀಯ ಚಿಹ್ನೆಗಳ ಬಗ್ಗೆ ಗೌರವವಿದೆ. ಕೀಳುಮಟ್ಟದ ರಾಜಕೀಯ ಮಾಡಿಲ್ಲ. ಇದಕ್ಕೆ ರಾಜಕೀಯ ಬಣ್ಣ ಕಟ್ಟುವುದು ಬೇಡ' ಎಂದು ತಿಳಿಸಿದ್ದಾರೆ.

'ಆ ನೃತ್ಯಕ್ಕೆ ಬಹುಮಾನ ನೀಡುವುದು ತಾಲ್ಲೂಕು ಆಡಳಿತ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಜವಾಬ್ದಾರಿ. ಇದರಲ್ಲಿ ನನ್ನ ಪಾತ್ರವಿಲ್ಲ. ಅಧಿಕಾರಿಗಳನ್ನೇ ಕೇಳಲಿ' ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಬಜೆಟ್‌ನಲ್ಲಿ ಹೂವಿನ ಮಾರುಕಟ್ಟೆ ಘೋಷಿಸಿ: ಗೂಳಿಗೌಡ

ಬೆಂಗಳೂರು: 'ನಗರದ ಸುತ್ತಮುತ್ತ 10 ಎಕರೆ ಜಮೀನಿನಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ಹೂವಿನ ಮಾರುಕಟ್ಟೆ ನಿರ್ಮಾಣ ಮಾಡುವುದಾಗಿ ಈ ಬಾರಿಯ ಬಜೆಟ್‌ನಲ್ಲಿ ಘೋಷಿಸಬೇಕು' ಎಂದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಮನವಿ ಮಾಡಿದ್ದಾರೆ.

ಈ ಕುರಿತು ಇಬ್ಬರಿಗೂ ಪತ್ರ ಬರೆದಿರುವ ಅವರು, 'ಸುಸಜ್ಜಿತ ಮಾರುಕಟ್ಟೆ ನಿರ್ಮಿಸುವ ಕುರಿತು ಈ ಬಾರಿಯ ಬಜಟ್‌ನಲ್ಲಿ ಘೋಷಿಸಬೇಕೆಂದು' ಮನವಿ ಮಾಡಿದ್ದಾರೆ.

'ಕರ್ನಾಟಕದಲ್ಲಿ 35 ಸಾವಿರ ಹೆಕ್ಟೇರ್‌ನಲ್ಲಿ ಪುಷ್ಪಕೃಷಿಯಿದೆ. ಬೆಂಗಳೂರು ಸುತ್ತಮುತ್ತ 10 ರಿಂದ 12 ಜಿಲ್ಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಹೂವುಗಳನ್ನು ಬೆಳೆಯಲಾಗುತ್ತದೆ. ಈಗಿರುವ ಅಂಕಿ-ಅಂಶಗಳ ಪ್ರಕಾರ ಬೆಂಗಳೂರು ಜಿಲ್ಲೆಯಲ್ಲಿ 535 ಹೆಕ್ಟೇರ್ ಪ್ರದೇಶದಲ್ಲಿ 2,100 ಮೆಟ್ರಿಕ್ ಟನ್ ಹೂವನ್ನು ಬೆಳೆಯಲಾಗುತ್ತಿದೆ. ಸಾವಿರಾರು ಕೋಟಿ ವ್ಯವಹಾರವಿರುವ ಪುಷ್ಪ ಕೃಷಿಗೆ ರಾಜ್ಯದಲ್ಲಿ ಉತ್ತಮ ಮಾರುಕಟ್ಟೆ ವ್ಯವಸ್ಥೆ ಇಲ್ಲ. ಹೀಗಾಗಿ ಹೂವಿನ ಬೆಳೆಗಾರರು, ಕೆ.ಆರ್. ಮಾರುಕಟ್ಟೆ, ಮತ್ತಿತರ ಪಾದಚಾರಿ ಮಾರ್ಗಗಳಲ್ಲಿ ಬಿಡಿ ಬಿಡಿಯಾಗಿ ಹೂವು ಮಾರಾಟ ಮಾಡುತ್ತಿದ್ದಾರೆ. ಇದರಿಂದ ಬೆಳೆಗಾರರಿಗೆ ಉತ್ತಮ ಬೆಲೆಯೂ ಸಿಗುತ್ತಿಲ್ಲ, ಸರ್ಕಾರಕ್ಕೂ ಸರಿಯಾದ ಅಂಕಿ– ಅಂಶಗಳು ಸಿಗುತ್ತಿಲ್ಲ' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

'ಬಜೆಟ್‌ನಲ್ಲಿ ಹೂವಿನ ಮಾರುಕಟ್ಟೆ ಘೋಷಣೆ ಜೊತೆಗೆ, ಹೂವುಗಳನ್ನು ಹೆಚ್ಚು ದಿನಗಳ ಕಾಲ ಕೆಡದಂತೆ ಸುರಕ್ಷಿತವಾಗಿ ಇಡಲು ಶೈತ್ಯಾಗಾರ ಘಟಕಗಳ ನಿರ್ಮಾಣಕ್ಕೂ ಆದ್ಯತೆ ನೀಡಬೇಕು' ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ದೇಶದಲ್ಲಿ ಜಾಗೃತಗೊಂಡ ಧಾರ್ಮಿಕ ಪರಿಸರ'



ಬೆಂಗಳೂರು: 'ಅಯೋಧ್ಯೆಯ ರಾಮ ಮಂದಿರದಲ್ಲಿ ಬಾಲ ರಾಮನ ಪ್ರಾಣ ಪ್ರತಿಷ್ಠಾಪನೆಯಿಂದ ದೇಶದ ಧಾರ್ಮಿಕ ಪರಿಸರ ಜಾಗೃತ ಸ್ಥಿತಿ ತಲುಪಿದೆ' ಎಂದು ಕರ್ಕಿ ದೈವಜ್ಞ ಮಠದ ಸಚ್ಚಿದಾನಂದ ಜ್ಞಾನೇಶ್ವರ ಭಾರತಿ ಸ್ವಾಮೀಜಿ ತಿಳಿಸಿದರು.

ನಗರದಲ್ಲಿ ನಡೆದ ದೈವಜ್ಞ ಬ್ರಾಹ್ಮಣ ಸಮಾಜದ ಸಮಾವೇಶದಲ್ಲಿ, ಸೈನ್ಯದಲ್ಲಿ ಸೇವೆ ಸಲ್ಲಿಸಿದ ಸಮಾಜದ ಸಾಧಕರನ್ನು ಸನ್ಮಾನಿಸಿ, ಮಾತನಾಡಿದರು.

'ಸಮಾಜದಲ್ಲಿ ಶಾಂತಿ, ನೆಮ್ಮದಿ, ಸಹಬಾಳ್ವೆಯ ಯುಗ ಆರಂಭವಾಗಿದೆ. ದೈವಜ್ಞ ಬ್ರಾಹ್ಮಣ ಸಮಾಜ ಸಾತ್ವಿಕ ಸ್ವಭಾವದ ತ್ಯಾಗಮಯಿ ಜನರಿಂದ ಕೂಡಿದೆ. ನಿರುಪದ್ರವಿ ಸ್ವಭಾವದ ದೈವಜ್ಞ ಬ್ರಾಹ್ಮಣರು ತಮ್ಮ ಶ್ರಮ, ಜ್ಞಾನ, ನಿಷ್ಠೆಯ ಮೂಲಕ ರಾಮ ರಾಜ್ಯ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಬೇಕು' ಎಂದು ಹೇಳಿದರು.

ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಸಿ. ರಾಮಮೂರ್ತಿ, ದೈವಜ್ಞ ಬ್ರಾಹ್ಮಣ ಸಮಾಜದ ಅಧ್ಯಕ್ಷ ಮಹೇಶ್ ಶೇಟ್ ಪಾಲ್ಗೊಂಡಿದ್ದರು.

ಜೋಶಿಗೆ ಅಸಮಾಧಾನ ಆಗಿಲ್ಲ: ಶೆಟ್ಟರ್

ಪ್ರಜಾವಾಣಿ ವಾರ್ತೆ

ತುಮಕೂರು: 'ಕಾಂಗ್ರೆಸ್‌ನಿಂದ ನನಗೆ ಯಾವುದೇ ರೀತಿಯ ಅನ್ಯಾಯವಾಗಿಲ್ಲ ಮತ್ತು ನಾನು ಬಿಜೆಪಿ ಸೇರಿದ್ದರಿಂದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಅಸಮಾಧಾನ ಆಗಿಲ್ಲ' ಎಂದು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಹೇಳಿದ್ದಾರೆ.

ಸಿದ್ಧಗಂಗಾ ಮಠಕ್ಕೆ ಭಾನುವಾರ ಭೇಟಿ ನೀಡಿ ಶಿವಕುಮಾರ ಸ್ವಾಮೀಜಿ ಗದ್ದುಗೆಯ ದರ್ಶನ ಪಡೆದ ನಂತರ ಸುದ್ದಿಗಾರರ ಜತೆ ಅವರು ಮಾತನಾಡಿದರು.

'ಕಾರ್ಯಕರ್ತರ ಒತ್ತಾಯಕ್ಕೆ ಮಣಿದು ಬಿಜೆಪಿ ಸೇರಿದ್ದೇನೆ. ಪಕ್ಷ ಸೇರ್ಪಡೆ ಕಾರ್ಯಕ್ರಮವನ್ನು ತುರ್ತಾಗಿ ಆಯೋಜಿಸಿದ್ದರಿಂದ ಪ್ರಲ್ಹಾದ ಜೋಶಿ ಪಾಲ್ಗೊಳ್ಳಲು ಆಗಲಿಲ್ಲ ಅಷ್ಟೇ. ಅದನ್ನು ಅಸಮಾಧಾನ ಎಂದು ಭಾವಿಸಬಾರದು' ಎಂದು ಸ್ಪಷ್ಟಪಡಿಸಿದರು.

ಶಾಸಕ ಜಿ.ಬಿ.ಜ್ಯೋತಿಗಣೇಶ್, ಎಂ.ಪಿ. ರೇಣುಕಾಚಾರ್ಯ, ಶಂಕರ ಪಾಟೀಲ ಮುನೇನಕೊಪ್ಪ, ಸೊಗಡು ಶಿವಣ್ಣ, ಎಚ್.ಎಸ್. ರವಿಶಂಕರ್, ಎಸ್.ಪಿ.ಚಿದಾನಂದ ಜೊತೆಗಿದ್ದರು.

ಬಸ್, ರೈಲು ನಿಲ್ದಾಣದಲ್ಲೇ ನಿದ್ದೆ

ಒಂದನೇ ಪುಟದಿಂದ...

ಹೆಚ್ಚಿನವರು ಮಲಗಲು ಕೆಎಸ್‌ಆರ್‌ಟಿಸಿ ಹೊಸ ಬಸ್ ನಿಲ್ದಾಣವನ್ನೇ ಆಶ್ರ ಯಿಸಿದರು. ಬಸ್ ನಿಲ್ದಾಣ ರಾತ್ರಿಯೂ ಜನಜಂಗುಳಿಯಿಂದ ತುಂಬಿತ್ತು. ಇರುವ ಒಂದು ಶೌಚಾಲಯಕ್ಕೆ ಬೆಳಗ್ಗೆ ನಾಲ್ಕರಿಂದಲೇ ಮುಗಿಬಿದ್ದರು. ಅಲ್ಲೇ ಬಟ್ಟೆ ಬದಲಾಯಿಸಿಕೊಂಡು ಪರೀಕ್ಷೆ ಕೊಠಡಿಗೆ ತೆರಳಿದರು.

ರೈಲು ನಿಲ್ದಾಣದ ಆವರಣದಲ್ಲಿ ಮಲಗಿದ್ದ ಕೆಲವರು ಅಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲದ ಕಾರಣ ಪಕ್ಕದ ಬಯಲು ಪ್ರದೇಶಕ್ಕೆ ಹೋಗಿ ದೈನಂದಿನ ಕೆಲಸ ಪೂರ್ಣಗೊಳಿಸಿದರು.

'ಕೋಲಾರಕ್ಕೆ ಪರೀಕ್ಷೆ ಬರೆಯಲು ವಿಜಯಪುರದಿಂದ ಐವರು ಬಂದಿದ್ದೆವು. ರಾತ್ರಿ ಲಾಡ್ಜ್ ಹುಡುಕಿಕೊಂಡು ಹೊರಟೆವು. ಕೊಠಡಿಗೆ ₹500 ಎಂದು ಹೇಳಿದರು. ಅದಕ್ಕಿಂತ ಕಡಿಮೆ ಮೊತ್ತದ ಕೊಠಡಿ ಸಿಗಲಿಲ್ಲ. ಬಸ್ ಟಿಕೆಟ್, ಊಟ ತಿಂಡಿಗೆ ₹1 ಸಾವಿರಕ್ಕೂ ಹೆಚ್ಚು ಖರ್ಚಾಗಿತ್ತು. ಲಾಡ್ಜ್‌ಗೆ ಹಣ ನೀಡಲು ಕಷ್ಟವೆಂದು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲೇ ಮಲಗಿದೆವು' ಎಂದು ಪರೀಕ್ಷಾರ್ಥಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಪರೀಕ್ಷೆ ಮುಗಿಸಿ ತೆರಳುವಾಗಲೂ ಅಭ್ಯರ್ಥಿಗಳ ಸಂಕಷ್ಟ ತಪ್ಪಲಿಲ್ಲ. ಪರೀಕ್ಷೆ ಮುಗಿಸಿ ಏಕಕಾಲಕ್ಕೆ ಎಲ್ಲರೂ ಒಮ್ಮೆಲೆ ಬಸ್ ನಿಲ್ದಾಣಕ್ಕೆ ಬಂದಿದ್ದರಿಂದ ನಿಲ್ದಾಣ ದಲ್ಲಿ ಭಾರಿ ಜನದಟ್ಟಣೆ ಉಂಟಾಯಿತು. ಬೆಂಗಳೂರಿಗೆ ತೆರಳುವ ಬಸ್ ಏರಲು ಎಲ್ಲರೂ ಮುಗಿಬಿದ್ದರು. ಬಸ್ ಸಿಗದೆ ಕೆಲವರಿಗೆ ಸಮಸ್ಯೆ ಎದುರಾಯಿತು.

ಮಾಲ್ದೀವ್ಸ್ ಸಂಸತ್ತಿನಲ್ಲಿ ಹೊಡೆದಾಟ!

ಮಾಲಿ (ಪಿಟಿಐ): ಮಾಲ್ದೀವ್ಸ್‌ನ ಸಂಸತ್ತಿನಲ್ಲಿ ಆಡಳಿತ ಹಾಗೂ ವಿರೋಧ ಪಕ್ಷಗಳ ಸದಸ್ಯರ ನಡುವೆ, ಅಧ್ಯಕ್ಷ ಮೊಹಮ್ಮದ್ ಮುಯಿಜು ಸಂಪುಟದ ನಾಲ್ಕು ಸದಸ್ಯರಿಗೆ ಅನುಮೋದನೆ ನೀಡುವ ವಿಚಾರವಾಗಿ ಹೊಡೆದಾಟ ನಡೆದಿದೆ. ಹೊಡೆದಾಟ ನಡೆದಿರುವುದಕ್ಕೆ ಸಂಬಂಧಿಸಿದ ದೃಶ್ಯಾವಳಿಗಳನ್ನು ಕೆಲವರು ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಂಡಿದ್ದಾರೆ.

ಸಂಪುಟದ ವಿಚಾರವಾಗಿ ಮತಚಲಾವಣೆಗೂ ಮೊದಲು, ಮುಯಿಜು ಸಂಪುಟದ ನಾಲ್ಕು ಮಂದಿಗೆ ಅನುಮೋದನೆ ನೀಡುವುದನ್ನು ತಡೆಹಿಡಿಯಲು ಪ್ರಮುಖ ವಿರೋಧ ಪಕ್ಷವಾದ ಮಾಲ್ದೀವಿಯನ್ ಡೆಮಾಕ್ರಟಿಕ್ ಪಾರ್ಟಿ (ಎಂಡಿಪಿ) ತೀರ್ಮಾನಿಸಿತು. ಇದಾದ ನಂತರ ಸರ್ಕಾರದ ಪರವಾಗಿ ಇರುವ ಸಂಸದರು ಪ್ರತಿಭಟನೆ ಆರಂಭಿಸಿದರು, ಕಲಾಪ ಮುಂದುವರಿಯುವುದಕ್ಕೆ ಅಡ್ಡಿ ಉಂಟುಮಾಡಿದರು ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಸಂಸದರಾದ ಅಬ್ದುಲ್ಲಾ ಶಹೀಂ ಅಬ್ದುಲ್ ಹಕೀಂ ಮತ್ತು ಅಹ್ಮದ್ ಇಯಾಸಾ ಅವರ ನಡುವೆ ಘರ್ಷಣೆ ನಡೆದಿದೆ. ಶಹೀಂ ಅವರಿಗೆ ಗಾಯಗಳಾಗಿವೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಕೂಡ ವರದಿಯಾಗಿದೆ. ವಿರೋಧ ಪಕ್ಷಗಳ ಸಂಸದೀಯ ಗುಂಪು, ಮುಯಿಜು ಸಂಪುಟದ ಕೆಲವು ಸದಸ್ಯರಿಗೆ ಒಪ್ಪಿಗೆ ನೀಡದೆ ಇರಲು ತೀರ್ಮಾನಿಸಿದ ಕಾರಣದಿಂದಾಗಿ ಆಡಳಿತಾರೂಢ ಪಿಪಿಎಂ ಮತ್ತು ಪಿಎನ್‌ಸಿ ಮೈತ್ರಿಕೂಟದ ಸದಸ್ಯರು ಸಂಸತ್ತಿನ ಕಲಾಪಕ್ಕೆ ಅಡ್ಡಿ ಉಂಟುಮಾಡಿದರು ಎಂದು ವರದಿಗಳು ಹೇಳಿವೆ.

ಸ್ಪೀಕರ್ ಆಸನದ ಎದುರು ಘರ್ಷಣೆಯಲ್ಲಿ ತೊಡಗಿರುವ ದೃಶ್ಯಗಳು ಜಾಲತಾಣಗಳಲ್ಲಿ ಹರಿದಾಡಿರುವ ವಿಡಿಯೊದಲ್ಲಿ ಇವೆ. ಸಂಸದ ಹಸನ್ ಜರೀರ್ ಅವರಿಗೆ ಕೂಡ ಗಾಯಗಳಾಗಿವೆ.

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಮೇಲ್ ಮಾಡಿ: peoplesproblem@prajavani.co.in ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಕಸ ತೆರವುಗೊಳಿಸಿ

ನಗರದ ನಂಜಪ್ಪ ವೃತ್ತದ ಪಾದಚಾರಿ ಮಾರ್ಗದಲ್ಲಿ ಮರದ ಟೊಂಗೆ, ಮನೆ ಹಾಗೂ ಕಟ್ಟಡ ತ್ಯಾಜ್ಯ ಹಾಕಲಾಗಿದೆ. ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಇದರ ಹಿಂಭಾಗದಲ್ಲಿ ಈಶ್ವರ ದೇವಸ್ಥಾನವಿದ್ದು, ದೇವಸ್ಥಾನಕ್ಕೆ ಹೋಗುವ ಜನ ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಬಿಬಿಎಂಪಿ ಅಧಿಕಾರಿಗಳು ಈ ಪ್ರದೇಶವನ್ನು ಸ್ವಚ್ಛಗೊಳಿಸಲು ಕ್ರಮ ಕೈಗೊಳ್ಳಬೇಕು.

ಶಿವಪ್ರಸಾದ್, ಸ್ಥಳೀಯ ನಿವಾಸಿ



ನಂಜಪ್ಪ ವೃತ್ತದ ಪಾದಚಾರಿ ಮಾರ್ಗದಲ್ಲಿ ಹಾಕಿರುವ ಕಸದ ರಾಶಿ



ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿರುವ ಗುಂಡಿಗಳು.

ರಸ್ತೆ ದುರಸ್ತಿಗೊಳಿಸಿ

ರಿಚ್‌ಮಂಡ್ ಟೌನ್‌ನ ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ರಸ್ತೆ ಹಾಳಾಗಿದೆ. ಪ್ರತಿನಿತ್ಯ ಇಲ್ಲಿ ಸಾವಿರಾರು ವಾಹನಗಳು ಸಂಚರಿಸುತ್ತವೆ. ಈ ರಸ್ತೆಯಲ್ಲಿ ಗುಂಡಿಗಳಾಗಿರುವ ಕಾರಣ ಅಪಘಾತಗಳು ಸಂಭವಿಸುತ್ತಿದ್ದು, ಸಂಚಾರ ದಟ್ಟಣೆ ಉಂಟಾಗುತ್ತಿದೆ. ದ್ವಿಚಕ್ರ ವಾಹನ ಸವಾರರು ಈ ರಸ್ತೆಯಲ್ಲಿ ಜಾರಿ ಬಿದ್ದು ಗಾಯ ಮಾಡಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಬಿಬಿಎಂಪಿಗೆ ಹಲವಾರು ಮನವಿ ಸಲ್ಲಿಸಲಾಗಿದೆ. ಆದರೂ ಪ್ರಯೋಜನವಾಗಿಲ್ಲ ಕೂಡಲೇ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಎಸ್. ಶಿವ, ರಿಚ್‌ಮಂಡ್ ಟೌನ್

ಬನಶಂಕರಿ: ಮೂಲಸೌಲಭ್ಯ ಕಲ್ಪಿಸಲು ಆಗ್ರಹ

ತಲಘಟ್ಟಪುರ ಸಮೀಪದ ಬನಶಂಕರಿ 6ನೇ ಹಂತದ 4ನೇ ಟಿ ಬ್ಲಾಕ್ ಹೆಸರಿಗಷ್ಟೇ ಬಿಡಿಎ ಲೇಔಟ್ ಆಗಿದೆ. ಆದರೆ, ಇಲ್ಲಿ ವಾಸಿಸುವ ನಿವಾಸಿಗಳಿಗೆ ಕುಡಿಯುವ ನೀರು, ಉದ್ಯಾನ, ಚರಂಡಿ, ಸೇರಿದಂತೆ ಯಾವುದೇ ಮೂಲ ಸೌಕರ್ಯಗಳನ್ನು ಕಲ್ಪಿಸಿಲ್ಲ. ಈ ಬಡಾವಣೆಯಿಂದ ಅರ್ಧ ಕಿ.ಮೀ ದೂರದ ಕನಕಪುರ ಮುಖ್ಯರಸ್ತೆಗೆ ಉತ್ತಮ ಸಂಪರ್ಕ ರಸ್ತೆಯಾಗಲಿ, ಬಡಾವಣೆಯ ಒಳಗಡೆ ಸಂಚರಿಸಲು ಗುಣಮಟ್ಟದ ರಸ್ತೆಗಳೇ ನಿರ್ಮಿಸಿಲ್ಲ. ಈ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆಗೆ ಒಂದು ಬೋರ್ಡ್ ಸಹ ಇಲ್ಲ. ಆದ್ದರಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧಿಕಾರಿಗಳು ಬಡಾವಣೆಗೆ ಮೂಲಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಬೇಕು.

ರಾ. ಜಯಸಿಂಹ, ತಲಘಟ್ಟಪುರ



ಬನಶಂಕರಿ 6ನೇ ಹಂತದಲ್ಲಿರುವ ಬಿಡಿಎ ಬಡಾವಣೆಗೆ ಸಂಪರ್ಕಿಸುವ ರಸ್ತೆಯ ದುಸ್ಥಿತಿ



ರಸ್ತೆಗೆ ಬಾಗಿರುವ ಮರ.

ರಸ್ತೆಯಲ್ಲಿರುವ ಆಲದ ಮರ ಸ್ಥಳಾಂತರಿಸಿ

ಬಸವನಗುಡಿಯ ಬುಲ್ ಟೆಂಪಲ್ ರಸ್ತೆಯಲ್ಲಿರುವ ಶೇಖರ್ ಆಸ್ಪತ್ರೆಯ ಮುಂಭಾಗದಲ್ಲಿ ಹಳೆಯದಾದ ಆಲದ ಮರವನ್ನು ಬೇರೆ ಕಡೆಗೆ ಸ್ಥಳಾಂತರಿಸಬೇಕು. ಈ ಮರದ ಬೇರುಗಳು ಭೂಮಿಯಿಂದ ಸಂಪೂರ್ಣವಾಗಿ ಮೇಲೆ ಬಂದಿದ್ದು, ಮರವು ರಸ್ತೆಯ ಕಡೆಗೆ ಬಾಗಿದೆ. ಮಳೆಗಾಲ ಅಥವಾ ಜೋರಾದ ಗಾಳಿ ಬೀಸುವ ಸಂದರ್ಭದಲ್ಲಿ ಈ ಮರ ಬೀಳುವ ಸಾಧ್ಯತೆ ಇದೆ. ಆದ್ದರಿಂದ, ಅಪಾಯ ಸಂಭವಿಸುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ಈ ಮರವನ್ನು ಬೇರೆ ಕಡೆಗೆ ಸ್ಥಳಾಂತರಿಸಬೇಕು.

ಕೆ.ಎಸ್. ನಾಗರಾಜ, ಹನುಮಂತನಗರ

ರಸ್ತೆಗೆ ಡಾಂಬರು ಹಾಕಿ

ತ್ಯಾಗರಾಜನಗರದ 2ನೇ ಬ್ಲಾಕ್‌ನಲ್ಲಿರುವ ಗಣೇಶ ಮಂದಿರ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಡಾಂಬರೀಕರಣ ಕಾಮಗಾರಿ ಸೂಕ್ತ ರೀತಿಯಲ್ಲಿ ನಡೆಯದಿದ್ದರಿಂದ ಕೆಲವೇ ದಿನಗಳಲ್ಲಿ ರಸ್ತೆ ಕಿತ್ತು ಹೋಗಿದೆ. ಇದರಿಂದಾಗಿ ವಾಹನ ಸವಾರರು ಇಲ್ಲಿ ಸಂಚರಿಸಲು ಸಮಸ್ಯೆ ಎದುರಿಸಬೇಕಾಗಿದೆ. ರಸ್ತೆಯಲ್ಲಿ ಬಿದ್ದು, ಹಲವರಿಗೆ ಗಾಯಗಳಾಗಿವೆ. ವಾಹನಗಳ ಸಂಚಾರ ಹೆಚ್ಚಾಗಿರುವ ಈ ರಸ್ತೆಯನ್ನು ಶೀಘ್ರ ಸರಿಪಡಿಸಬೇಕು.

ಮಹೇಶ್ ಡಿ., ಗಣೇಶ ಮಂದಿರ ರಸ್ತೆ ನಿವಾಸಿ



ಗಣೇಶ ಮಂದಿರ ರಸ್ತೆಯ ಡಾಂಬರು ಕಿತ್ತು ಹೋಗಿದೆ

ವರದಕ್ಷಿಣೆ ಕಿರುಕುಳ: ನಿರ್ದೇಶಕ ಮಂಸೋರೆ ವಿರುದ್ಧ ಪತ್ನಿ ದೂರು

ತಾಯಿ ವೆಂಕಟಲಕ್ಷ್ಮಮ್ಮ ಹಾಗೂ ಸಹೋದರಿ ಹೇಮಲತಾ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಸಿನಿಮಾ ನಿರ್ದೇಶಕ ಮಂಜುನಾಥ್ ಸೋಮಕೇಶವ್ ರೆಡ್ಡಿ ಉರುಫ್ ಮಂಸೋರೆ ಹಾಗೂ ಕುಟುಂಬದವರು ವರದಕ್ಷಿಣೆ ಕಿರುಕುಳ ನೀಡುತ್ತಿದ್ದಾರೆ' ಎಂದು ಆರೋಪಿಸಿ ಪತ್ನಿ ಎಸ್. ಅಖಿಲಾ ಅವರು ಸುಬ್ರಹ್ಮಣ್ಯಪುರ ಠಾಣೆಗೆ ದೂರು ನೀಡಿದ್ದಾರೆ.

'ಉತ್ತರಹಳ್ಳಿಯ ಪಿ.ಪಿ ಬಡಾವಣೆ ನಿವಾಸಿ ಅಖಿಲಾ ಅವರು ದೂರು ನೀಡಿದ್ದಾರೆ. ವರದಕ್ಷಿಣೆಗಾಗಿ ಕಿರುಕುಳ ಹಾಗೂ ಜೀವ ಬೆದರಿಕೆ ಆರೋಪದಡಿ ಮಂಸೋರೆ, ಅವರ ತಾಯಿ ವೆಂಕಟ ಲಕ್ಷ್ಮಮ್ಮ ಹಾಗೂ ಸಹೋದರಿ ಹೇಮಲತಾ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ದೂರಿನ ವಿವರ: 'ಮಂಜುನಾಥ್ ಅವರನ್ನು ಹಲವು ವರ್ಷಗಳಿಂದ ಪ್ರೀತಿಸಿ 2021ರ ಆಗಸ್ಟ್ 15ರಂದು ಮದುವೆ ಆಗಿದ್ದೆ. ಅವರ ಸಹೋದರಿ ಹೇಮಲತಾ ವರದಕ್ಷಿಣೆ ನೀಡುವಂತೆ ಒತ್ತಾಯಿಸಿದ್ದರಿಂದ, ನನ್ನ ಪೋಷಕರು 180 ಗ್ರಾಂ ತೂಕದ ಚಿನ್ನಾಭರಣ, 1 ಕೆ.ಜಿ 500 ಗ್ರಾಂ ಬೆಳ್ಳಿ ಸಾಮಗ್ರಿ ಹಾಗೂ ₹ 9 ಲಕ್ಷ ನಗದು ನೀಡಿದ್ದರು' ಎಂದು ಅಖಿಲಾ ದೂರಿನಲ್ಲಿ ತಿಳಿಸಿದ್ದಾರೆ.

'ಮದುವೆ ನಂತರ ₹ 1.50 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳನ್ನು ಕೊಟ್ಟಿದ್ದೆವು. ಮಂಜುನಾಥ್‌ನನ್ನು ಪ್ರೀತಿಸುತ್ತಿದ್ದ ಸಂದರ್ಭದಲ್ಲಿ ₹ 2.21 ಲಕ್ಷ ಮೌಲ್ಯದ ಜಾವಾ ಬೈಕ್ ಹಾಗೂ ₹ 1.06 ಲಕ್ಷ ಮೌಲ್ಯದ ಮೊಬೈಲ್ ಕೊಡಿಸಿದ್ದೆ. ಕಂಪನಿಯೊಂದರಲ್ಲಿ ವ್ಯವಸ್ಥಾಪಕಿ ಆಗಿದ್ದ ನಾನು, ಸಂಬಳವನ್ನೆಲ್ಲ ಪತಿಗೆ ನೀಡುತ್ತಿದ್ದೆ.'

'2022ರಲ್ಲಿ ಸಿನಿಮಾ ಮಾಡಲು ಪತಿ ಹಣ ಕೇಳಿದ್ದರು. ಪೋಷಕರಿಂದ ₹ 10 ಲಕ್ಷ ತಂದು ಕೊಟ್ಟಿದ್ದೆ. ₹ 76 ಸಾವಿರ ಮೌಲ್ಯದ ಐಫೋನ್ ಸಹ ಕೊಡಿಸಿದ್ದೆ. ಮದುವೆಯಾದ ಆರಂಭದಲ್ಲಿ ಪತಿ ಹಾಗೂ ಅತ್ತೆ ಚೆನ್ನಾಗಿ ನೋಡಿಕೊಂಡಿದ್ದರು. ಪತಿಯ ಅಕ್ಕ ಹೇಮಲತಾ ಆಗಾಗ ಮನೆಗೆ ಬಂದು, ನನ್ನ ಬಗ್ಗೆ ಇಲ್ಲಸಲ್ಲದನ್ನು ಹೇಳಲಾರಂಭಿಸಿದಳು. ಇದರಿಂದಾಗಿ ಪತಿ ಹಾಗೂ ಅತ್ತೆ ನನ್ನ ಜೊತೆ ಜಗಳ ಮಾಡಲಾರಂಭಿಸಿದರು. ಮೂವರು ಸೇರಿ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ. ಪತಿಗೆ ₹ 30 ಲಕ್ಷ ಮೌಲ್ಯದ ಕಾರು ಕೊಡಿಸುವಂತೆಯೂ ಪೀಡಿಸುತ್ತಿದ್ದಾರೆ' ಎಂದು ಅಖಿಲಾ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ತಾಯಿ ಹೊರಹಾಕುವಂತೆ ಪಟ್ಟು'

ಪತ್ನಿ ನೀಡಿರುವ ದೂರಿಗೆ ಉತ್ತರವಾಗಿ ಪ್ರತಿ ದೂರು ನೀಡಿರುವ ಮಂಸೋರೆ, 'ಮಾನಸಿಕ ಅಸ್ವಸ್ಥೆಯಂತೆ ವರ್ತಿಸುತ್ತಿರುವ ಪತ್ನಿ, ನನ್ನ ಹಾಗೂ ತಾಯಿ ಮೇಲೆ ಹಲ್ಲೆ ಮಾಡಿದ್ದಾರೆ. ಆತ್ಮಹತ್ಯೆಗೂ ಯತ್ನಿಸಿದ್ದಾರೆ. ನನ್ನ ಪತ್ನಿಯನ್ನು ಬಳಸಿಕೊಂಡು ಅವರ ಸಹೋದರರು ಪಿತೂರಿ ಮಾಡುತ್ತಿದ್ದಾರೆ. ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಅಪಪ್ರಚಾರ ಮಾಡುತ್ತಿದ್ದಾರೆ. ಇವರೆಲ್ಲರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದಿದ್ದಾರೆ.

'ನಾನು ಕೊಡಿಸಿದ್ದ ಚಿನ್ನಾಭರಣ ಜೊತೆಯಲ್ಲಿ, ರಾಷ್ಟ್ರ–ರಾಜ್ಯ ಮಟ್ಟದ ಪ್ರಶಸ್ತಿಯಾಗಿ ಬಂದಿದ್ದ ಚಿನ್ನ ಹಾಗೂ ಬೆಳ್ಳಿ ಪದಕಗಳನ್ನು ಪತ್ನಿ ತವರು ಮನೆಗೆ ಕೊಂಡೊಯ್ದಿದ್ದಾರೆ. ವಯೋಸಹಜ ಕಾಯಿಲೆಯಿಂದ ಬಳಲುತ್ತಿರುವ ತಾಯಿಯನ್ನು ಮನೆಯಿಂದ ಹೊರಹಾಕುವಂತೆ ಪೀಡಿಸುತ್ತಿದ್ದಾರೆ. ಅದನ್ನು ಪ್ರಶ್ನಿಸಿದ್ದಕ್ಕೆ ನನ್ನ ಹಾಗೂ ತಾಯಿ ಮೇಲೆ ಹಲ್ಲೆ ಮಾಡಿದ್ದಾರೆ' ಎಂದು ಅವರು ಆರೋಪಿಸಿದ್ದಾರೆ.

ಹರಿವು, ನಾತಿ ಚರಾಮಿ, ಆ್ಯಕ್ಟ್ 1978 ಹಾಗೂ 19.20.21 ಸಿನಿಮಾಗಳನ್ನು ಮಂಸೋರೆ ನಿರ್ದೇಶನ ಮಾಡಿದ್ದರು.

ಬಿಜೆಪಿಯಿಂದ ಪಿಐಎಲ್

ಹಾವೇರಿ: 'ಹಾನಗಲ್ ತಾಲ್ಲೂಕಿನಲ್ಲಿ ಜ.8ರಂದು ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದ ಕುರಿತು ಹೈಕೋರ್ಟ್‌ನಲ್ಲಿ ಬಿಜೆಪಿ ಪಿಐಎಲ್ ಸಲ್ಲಿಸಲಿದೆ' ಎಂದು ಶಾಸಕ ಬಸವರಾಜ ಬೊಮ್ಮಾಯಿ ತಿಳಿಸಿದರು.

ಭಾನುವಾರ ಮಾತನಾಡಿದ ಅವರು, ಪ್ರತಿಭಟನೆ ನಡೆಸಿದರೂ, ಇದುವರೆಗೂ ಸರ್ಕಾರ ಎಸ್‌ಐಟಿ ರಚನೆ ಮಾಡಲಿಲ್ಲ. ಹೀಗಾಗಿ ನಾವೇ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹಾಕಲಿದ್ದೇವೆ' ಎಂದು ಹೇಳಿದರು.

ಬಾರ್ ಗಲಾಟೆ: ಸ್ನೇಹಿತನ ಕೊಂದಿದ್ದವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಬ್ರಹ್ಮಣ್ಯಪುರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ದರ್ಶನ್ ಕೊಲೆ ಪ್ರಕರಣದಲ್ಲಿ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿಗಳಾದ ಚಂದ್ರಶೇಖರ್ ಅಲಿಯಾಸ್ ಪ್ರೀತಂ, ಯಶವಂತ್, ವೆಂಕಟೇಶ್, ಪ್ರಶಾಂತ್ ಮತ್ತು ದರ್ಶನ್ ಅಲಿಯಾಸ್ ಗುಂಡ ಬಂಧಿತರು. ಐವರು ಸೇರಿಕೊಂಡು ಜ. 24ರಂದು ತಡರಾತ್ರಿ ದರ್ಶನ್ ಅವರನ್ನು ಕೊಲೆ ಮಾಡಿ ಪರಾರಿಯಾಗಿದ್ದರು. ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ದರ್ಶನ್ ಹಾಗೂ ಆರೋಪಿಗಳು, ಹಲವು ವರ್ಷಗಳ ಸ್ನೇಹಿತರೆಂಬುದು ಗೊತ್ತಾಗಿದೆ. ಆಗಾಗ ಪರಸ್ಪರ ಭೇಟಿಯಾಗುತ್ತಿದ್ದರು. ಆರೋಪಿ ಯಶವಂತ್, ಡೆಲಿವರಿ ಬಾಯ್ ಕೆಲಸ ಮಾಡುತ್ತಿದ್ದ. ಚಂದ್ರಶೇಖರ್ ಹಾಗೂ ವೆಂಕಟೇಶ್ ಆಟೊ ಚಾಲಕರು. ಪ್ರಶಾಂತ್ ಹಾಗೂ ಗುಂಡ, ಪ್ಲಂಬರ್ ಕೆಲಸಗಾರರು' ಎಂದು ತಿಳಿಸಿದರು.

'ಮನೆಯ ಖರ್ಚಿಗಾಗಿ ತಾಯಿಗೆ ನೀಡಲೆಂದು ದರ್ಶನ್ ಅವರಿಗೆ ದೊಡ್ಡಮ್ಮ ₹ 3 ಸಾವಿರ ನೀಡಿದ್ದರು. ಹಣ ಪಡೆದಿದ್ದ ದರ್ಶನ್, ಸ್ನೇಹಿತರಾದ ರಮೇಶ್ ಹಾಗೂ ನಿತಿನ್ ಜೊತೆ ಬಾರ್‌ಗೆ ಹೋಗಿದ್ದರು. ಅದೇ ಬಾರ್‌ಗೆ ಆರೋಪಿ ಪ್ರೀತಂ ಮತ್ತು ಇತರರು ಬಂದಿದ್ದರು.'

'ನಿತಿನ್ ಹಾಗೂ ಪ್ರೀತಂ ನಡುವೆ ಕ್ಷುಲ್ಲಕ ಕಾರಣಕ್ಕಾಗಿ ಜಗಳ ಶುರುವಾಗಿತ್ತು. ಇಬ್ಬರ ನಡುವೆ ಮಾರಾಮಾರಿಯೂ ನಡೆದಿತ್ತು. ಬಾರ್ ಸಿಬ್ಬಂದಿಯೇ ಜಗಳ ಬಿಡಿಸಿ ಎಲ್ಲರನ್ನೂ ಸ್ಥಳದಿಂದ ಕಳುಹಿಸಿದ್ದರು' ಎಂದು ಪೊಲೀಸರು ಹೇಳಿದರು.

ಸ್ನೇಹಿತನ ಮನೆ ಬಳಿ ಕೃತ್ಯ: 'ಬಾರ್‌ನಿಂದ ಹೊರಬಂದಿದ್ದ ನಿತಿನ್ ಹಾಗೂ ದರ್ಶನ್, ಸ್ನೇಹಿತ ರಮೇಶ್ ಮನೆ ಬಳಿ ಹೋಗಿದ್ದರು. ಅದೇ ಸ್ಥಳಕ್ಕೆ ಹೋಗಿದ್ದ ಪ್ರೀತಂ ಹಾಗೂ ಇತರರು, ಪುನಃ ಜಗಳ ತೆಗೆದಿದ್ದರು. ದರ್ಶನ್ ಜಗಳ ಬಿಡಿಸಲು ಪ್ರಯತ್ನಿಸಿದ್ದರು' ಎಂದು ಪೊಲೀಸರು ತಿಳಿಸಿದರು.

'ದರ್ಶನ್ ಮೇಲೆಯೇ ಸಿಟ್ಟಾಗಿದ್ದ ಆರೋಪಿಗಳು, ಸಿಮೆಂಟ್ ಇಟ್ಟಿಗೆಯಿಂದ ತಲೆಗೆ ಹೊಡೆದಿದ್ದರು. ತೀವ್ರ ಗಾಯಗೊಂಡು ದರ್ಶನ್ ಸ್ಥಳದಲ್ಲೇ ಮೃತಪಟ್ಟಿದ್ದರು' ಎಂದು ಹೇಳಿದರು.

ಆರ್ಚ್ ಬಿಷಪ್ ಹೆಸರಿನಲ್ಲಿ ಹಣಕ್ಕೆ ಬೇಡಿಕೆ: ಎಫ್‌ಐಆರ್ ದಾಖಲು

ಅಪರಾಧ ಸುದ್ದಿ

ಬೆಂಗಳೂರು: ಬೆಂಗಳೂರು ಧರ್ಮ ಪ್ರಾಂತ್ಯದ ಆರ್ಚ್ ಬಿಷಪ್ ಪೀಟರ್ ಮಚಾಡೊ ಹೆಸರಿನಲ್ಲಿ ನಕಲಿ ಇ–ಮೇಲ್ ಸೃಷ್ಟಿಸಿರುವ ಸೈಬರ್ ವಂಚಕರು ಹಣಕ್ಕೆ ಬೇಡಿಕೆ ಇರಿಸುತ್ತಿದ್ದು, ಈ ಸಂಬಂಧ ಪೂರ್ವ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸೈಬರ್ ವಂಚನೆ ಸಂಬಂಧ ಜೆ.ಎ. ಕಾಂತರಾಜ್ ಅವರು ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರ್ಚ್ ಬಿಷಪ್ ಪೀಟರ್ ಮಚಾಡೊ ಹೆಸರು ಬಳಸಿಕೊಂಡು msgr.machado@gmail.com ನಕಲಿ ಇ–ಮೇಲ್ ಸೃಷ್ಟಿಸಲಾಗಿದೆ. ಅದೇ ಇ–ಮೇಲ್‌ನಿಂದ ಹಲವರಿಗೆ ಸಂದೇಶ ಕಳುಹಿಸಿ, ಹಣಕ್ಕೆ ಬೇಡಿಕೆ ಇರಿಸಲಾಗಿತ್ತು. ಸಂದೇಶ ಗಮನಿಸಿದ್ದ ಕೆಲವರು ದೂರುದಾರರಿಗೆ ಮಾಹಿತಿ ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.

ಲಾಂಗ್‌ನಿಂದ ಹೊಡೆದು ರೌಡಿ ಹತ್ಯೆ

ಬೆಂಗಳೂರು: ತಲಘಟ್ಟಪುರ ಠಾಣೆ ವ್ಯಾಪ್ತಿಯಲ್ಲಿ ರೌಡಿ ಗಾಳಪ್ಪ ಅಲಿಯಾಸ್ ಹುಚ್ಚಗಾಳ ಎಂಬಾತನನ್ನು ಲಾಂಗ್‌ನಿಂದ ಹೊಡೆದು ಕೊಲೆ ಮಾಡಲಾಗಿದ್ದು, ಹಳೇ ವೈಷಮ್ಯದಿಂದ ಕೃತ್ಯ ನಡೆದಿರುವ ಶಂಕೆ ವ್ಯಕ್ತವಾಗಿದೆ.

'ರೌಡಿ ಗಾಳಪ್ಪ ಕೆಲಸ ನಿಮಿತ್ತ ಚಿಕ್ಕೆಗೌಡನಪಾಳ್ಯಕ್ಕೆ ಬಂದಿದ್ದ. ಇದೇ ಸಂದರ್ಭದಲ್ಲಿ ದಾಳಿ ಮಾಡಿದ್ದ ದುಷ್ಕರ್ಮಿಗಳು ಕೊಲೆ ಮಾಡಿ ಪರಾರಿಯಾಗಿದ್ದಾರೆ' ಎಂದು ಪೊಲೀಸರು ಹೇಳಿದರು. 'ಎರಡು ಕೊಲೆ ಪ್ರಕರಣದಲ್ಲಿ ಆರೋಪಿಯಾಗಿದ್ದ ಗಾಳಪ್ಪ ವಿರುದ್ಧ ಕೆಂಗೇರಿ ಹಾಗೂ ತಾವರೆಕೆರೆ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿದ್ದವು' ಎಂದರು.

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶನಿವಾರ ರಾತ್ರಿ ಪ್ರತ್ಯೇಕ ಅಪಘಾತಗಳು ಸಂಭವಿಸಿದ್ದು, ಬೈಕ್ ಸವಾರರಿಬ್ಬರು ಮೃತಪಟ್ಟಿದ್ದಾರೆ. ಅರುಣ್‌ಕುಮಾರ್ (28) ಹಾಗೂ ಸುಜಿತ್ ಶಾ (32) ಮೃತರು. ಅಪಘಾತಗಳಿಗೆ ಸಂಬಂಧಿಸಿ ಕುಮಾರಸ್ವಾಮಿ ಲೇಔಟ್ ಹಾಗೂ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿವೆ.

'ಜೆ.ಪಿ. ನಗರ ಬಳಿಯ ಸಾರಕ್ಕಿ ಲೇಔಟ್ ನಿವಾಸಿ ಅರುಣ್‌ಕುಮಾರ್, ಕಂಪನಿಯೊಂದರಲ್ಲಿ ಲೆಕ್ಕಾಧಿಕಾರಿ ಕೆಲಸ ಮಾಡುತ್ತಿದ್ದರು. ಶನಿವಾರ ರಾತ್ರಿ 11.30 ಗಂಟೆ ಸುಮಾರಿಗೆ ಬೈಕ್‌ನಲ್ಲಿ ಅಂಜನಾಪುರದ 80 ಅಡಿ ರಸ್ತೆಯಲ್ಲಿ ಹೊರಟಿದ್ದಾಗ ಅಪಘಾತ ಸಂಭವಿಸಿದೆ' ಎಂದು ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸರು ಹೇಳಿದರು.

'ಅರುಣ್ ಅವರ ಬೈಕ್‌ಗೆ ಲಾರಿ ಡಿಕ್ಕಿ ಹೊಡೆದಿತ್ತು. ಬೈಕ್ ಸಮೇತ ಉರುಳಿಬಿದ್ದಿದ್ದ ಅರುಣ್ ತಲೆಗೆ ತೀವ್ರ ಪೆಟ್ಟಾಗಿತ್ತು. ಲಾರಿ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

ಬಿಹಾರದ ಕಾರ್ಮಿಕ: 'ಮೃತ ಸುಜಿತ್ ಶಾ, ಬಿಹಾರದವರು. ಕೆಲಸ ಹುಡುಕಿಕೊಂಡು ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು' ಎಂದು ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸರು ಹೇಳಿದರು.

'ಸುಜಿತ್ ಶಾ ಅವರು ಶನಿವಾರ ರಾತ್ರಿ 7 ಗಂಟೆ ಸುಮಾರಿಗೆ ಬೈಕ್‌ನಲ್ಲಿ ಚಿಕ್ಕ ನಾಗಮಂಗಲ ರಸ್ತೆಯಲ್ಲಿ ಹೊರಟಿದ್ದರು. ಇದೇ ಸಂದರ್ಭದಲ್ಲಿ ಬೈಕ್‌ಗೆ ಟ್ರಕ್ ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡಿದ್ದ ಸುಜಿತ್ ಶಾ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ನೌಕರಿ ಕಾಯಂ ಹೆಸರಲ್ಲಿ ವಂಚನೆ ಆರೋಪ

ರಾಮನಗರ: ನೌಕರಿ ಕಾಯಂಗೊಳಿಸುವ ಆಸೆ ತೋರಿಸಿದ ವ್ಯಕ್ತಿಗಳಿಬ್ಬರು, ಹೊರಗುತ್ತಿಗೆಯಡಿ ಕೆಲಸ ಮಾಡುತ್ತಿದ್ದ ಅಮಾಯಕ ನೌಕರರಿಂದ ಸುಮಾರು ₹26.25 ಲಕ್ಷ ಹಣ ವಸೂಲಿ ಮಾಡಿದ್ದಾರೆ. ಇದೀಗ, ಇತ್ತ ಕೆಲಸ ಕಾಯಂ ಮಾಡಿಸದೆ, ಅತ್ತ ಹಣವನ್ನು ಹಿಂದಿರುಗಿಸದೆ ವಂಚಿಸಿದ್ದಾರೆ ಎಂದು ದೂರು ದಾಖಲಾಗಿದೆ.

ರಾಮನಗರದಲ್ಲಿ ನೀರು ಸರಬರಾಜು ನೌಕರರಾಗಿ ಕೆಲಸ ಮಾಡುತ್ತಿರುವ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ (ಕೆಯುಡಬ್ಲ್ಯುಎಸ್‌ಡಿಬಿ) ನೌಕರಿ ಕಾಯಂಗಾಗಿ ಹಣ ಕೊಟ್ಟು ಕೈ ಸುಟ್ಟುಕೊಂಡವರು.

ವಂಚನೆ ಕುರಿತು ರಾಮನಗರ ಪುರ ಪೊಲೀಸ್ ಠಾಣೆಯಲ್ಲಿ ಜ. 20ರಂದು ವಸಂತಕುಮಾರ್ ಆರ್.ಸಿ ಸೇರಿದಂತೆ ಸುಮಾರು 35 ನೌಕರರು ದೂರು ಕೊಟ್ಟಿದ್ದಾರೆ. ಆ ಮೇರೆಗೆ, ಬೆಂಗಳೂರಿನ ಜ್ಞಾನಭಾರತಿಯ ಲೋಕೇಶ್ ಎಂ.ಪಿ ಮತ್ತು ಮಂಡ್ಯದಲ್ಲಿ ನೀರಗಂಟಿಯಾಗಿ ಕೆಲಸ ಮಾಡುತ್ತಿರುವ ವೆಂಕಟೇಶ್ ವಿರುದ್ಧ ಪ್ರಕರಣ ದಾಖಲಾಗಿದೆ.

2021ರ ಮಾರ್ಚ್ ತಿಂಗಳಲ್ಲಿ ದೂರುದಾರರಿಗೆ ಬೆಂಗಳೂರಿನ ಲೋಕೇಶ್ ಅವರನ್ನು ಪರಿಚಯಿಸಿದ್ದ ಆರೋಪಿ ವೆಂಕಟೇಶ್, ಹೊರಗುತ್ತಿಗೆ ನೌಕರರ ಕಾಯಂ ಸೇರಿದಂತೆ ಏನು ಕೆಲಸ ಬೇಕಾದರೂ ಮಾಡಿಸಿ ಕೊಡುತ್ತಾರೆ ಎಂದು ಬಿಲ್ಡಪ್ ಕೊಟ್ಟಿದ್ದರು. ಇದಾದ ಬಳಿಕ ದೂರುದಾರರ ನೇತೃತ್ವದಲ್ಲಿ ನೌಕರರು ಲೋಕೇಶ್ ಭೇಟಿ ಮಾಡಿದ್ದರು.

ನಗರದಲ್ಲಿ ಇಂದು

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

2024ನೇ ಸಾಲಿನ ಪ್ರಾಚಾರ್ಯರ ದಿನಚರಿ ಬಿಡುಗಡೆ: ಅತಿಥಿಗಳು: ರಘುನಾಥ್ ಚ.ಹ., ವೈ. ರಾಜಾರೆಡ್ಡಿ, ಅಧ್ಯಕ್ಷತೆ: ರಾಜು ಎನ್., ಉಪಸ್ಥಿತಿ: ಈರೇಗೌಡ ಜಿ.ಬಿ., ಆಯೋಜನೆ: ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲಾ ಪದವಿಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘ, ಸ್ಥಳ: ಅಕಾಡೆಮಿ ಫಾರ್ ಲರ್ನಿಂಗ್ ಪದವಿಪೂರ್ವ ಕಾಲೇಜು, ಚಿಕ್ಕಬಾಣಾವರ ರೈಲು ನಿಲ್ದಾಣದ ಸಮೀಪ, ಹೆಸರಘಟ್ಟ ಮುಖ್ಯರಸ್ತೆ, ಬೆಳಿಗ್ಗೆ 10

ಬೆನಕ–50 ವರ್ಷಗಳ ಯಶಸ್ವಿ ರಂಗಪಯಣ: ರಂಗ ಇತಿಹಾಸ–ವಸ್ತು ಪ್ರದರ್ಶನ ಉದ್ಘಾಟನೆ, ಉದ್ಘಾಟನೆ: ಧರಣೀದೇವಿ ಮಾಲಗತ್ತಿ, 'ಐದು ದಶಕಗಳ ಅನುಭವ ಕಥನ' ವಿಚಾರ ಸಂಕಿರಣ: ಶ್ರೀನಿವಾಸ್ ಜಿ. ಕಪ್ಪಣ್ಣ, ಜೆ. ಲೋಕೇಶ್, ಬಿ.ವಿ. ರಾಜಾರಾಂ, ಬಿ. ಜಯಶ್ರೀ, ಸಿ.ಕೆ. ಗುಂಡಣ್ಣ, ಆಯೋಜನೆ: ಬೆನಕ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30ರಿಂದ

ಕೆ. ಕೃಷ್ಣಮೂರ್ತಿ ಅವರ ಜನ್ಮಶತಮಾನೋತ್ಸವದ ಅಂಗವಾಗಿ 'ಅಲಂಕಾರಶಾಸ್ತ್ರಕ್ಕೆ ಕೆ. ಕೃಷ್ಣಮೂರ್ತಿ ಅವರ ಕೊಡುಗೆ' ರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನಾ ಭಾಷಣ: ಶ್ರೀನಿವಾಸ ವರಖೇಡಿ, ಅಧ್ಯಕ್ಷತೆ: ಎಸ್. ಅಹಲ್ಯಾ, ದಿಕ್ಸೂಚಿ ಭಾಷಣ: ಮಲ್ಲೇಪುರಂ ಜಿ. ವೆಂಕಟೇಶ್, ಅತಿಥಿಗಳು: ಎಸ್. ಆರ್. ನಿರಂಜನ, ಕೆ. ಲೀಲಾ ಪ್ರಕಾಶ್, ಆಯೋಜನೆ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ಓಪನ್ ಹಾರ್ಟ್–2024: ಅತಿಥಿ: ರಾಮನಾಥ್ ಕೋವಿಂದ, ಅಧ್ಯಕ್ಷತೆ: ಸ್ವೆಬರ್ಟ್ ಡಿಸಿಲ್ವಾ ಎಸ್.ಜೆ., ಆಯೋಜನೆ ಮತ್ತು ಸ್ಥಳ: ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ, ಲಾಲ್‌ಬಾಗ್ ರಸ್ತೆ, ಬೆಳಿಗ್ಗೆ 11.30

ಸಂಗೀತೋತ್ಸವ: ಗಾಯನ: ವಸುಧ ಶಾಸ್ತ್ರಿ, ಪಿಟೀಲು: ಎಸ್. ಅರುಣಾಚಲ ಕಾರ್ತಿಕ್, ಕೆ. ವಿಷ್ಣುವರ್ಧನ್, ಸುಮನ್, ಆಯೋಜನೆ: ಸದ್ಗುರು ಶ್ರೀ ತ್ಯಾಗಬ್ರಹ್ಮ ವೈದಿಕ ಆರಾಧನಾ ಕೈಂಕರ್ಯಂ ಟ್ರಸ್ಟ್, ಸ್ಥಳ: ಶೃಂಗೇರಿ ಶಂಕರಮಠ, ಚಾಮರಾಜಪೇಟೆ, ಸಂಜೆ 5ರಿಂದ

ಕರ್ಣಾಟಕ ಬ್ಯಾಂಕ್: ₹700 ಕೋಟಿ ಬಂಡವಾಳ ಸಂಗ್ರಹಕ್ಕೆ ಸಿದ್ಧತೆ

ಪ್ರಜಾವಾಣಿ ವಾರ್ತೆ


ಮಂಗಳೂರು: ಷೇರುಗಳ ಮಾರಾಟದ ಮೂಲಕ ₹700 ಕೋಟಿ ಬಂಡವಾಳ ಸಂಗ್ರಹಿಸಲು ಶನಿವಾರ ನಡೆದ ಕರ್ಣಾಟಕ ಬ್ಯಾಂಕ್‌ನ ನಿರ್ದೇಶಕ ಮಂಡಳಿ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ.

ಇದರಲ್ಲಿ ₹100 ಕೋಟಿಯನ್ನು ಆದ್ಯತಾ ಷೇರುಗಳ ಮೂಲಕ ಹಾಗೂ ಉಳಿದ ₹600 ಕೋಟಿಗಳನ್ನು ವಿವಿಧ ಹಂತಗಳಲ್ಲಿ ಷೇರು ಮಾರಾಟ ಮಾಡುವ ಮೂಲಕ ಸಂಗ್ರಹಿಸಲಾಗುವುದು ಎಂದು ಬ್ಯಾಂಕ್ ಪ್ರಕಟಣೆಯಲ್ಲಿ ತಿಳಿಸಿದೆ.

2023ರ ಸೆಪ್ಟೆಂಬರ್ ತಿಂಗಳಲ್ಲಿ ನಡೆದಿದ್ದ ನಿರ್ದೇಶಕ ಮಂಡಳಿ ಸಭೆಯಲ್ಲಿ ಒಟ್ಟಾರೆಯಾಗಿ ₹1500 ಕೋಟಿ ಬಂಡವಾಳ ಸಂಗ್ರಹಿಸಲು ಮಂಡಳಿ ಅನುಮತಿ ನೀಡಿತ್ತು. ಅದರಲ್ಲಿ ₹700 ಕೋಟಿಯನ್ನು ಈಗಾಗಲೇ ಸಂಗ್ರಹಿಸಲಾಗಿದ್ದು, ಉಳಿದ ಮೊತ್ತವನ್ನು ಸಂಗ್ರಹಿಸಲು ಶನಿವಾರ ಅನುಮತಿ ನೀಡಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಕೃಷ್ಣನ್ ಎಚ್., 'ಬ್ಯಾಂಕ್‌ನ ಅಭಿವೃದ್ಧಿ ಮತ್ತು ಸುಸ್ಥಿರತೆಯ ಮೌಲ್ಯವರ್ಧನೆಯಾಗಿ ಈ ಬಂಡವಾಳ ಕ್ರೋಡೀಕರಣ ನೆರವಾಗಲಿದೆ' ಎಂದಿದ್ದಾರೆ.

'ಉದ್ದೇಶಿತ ಬಂಡವಾಳ ಕ್ರೋಡೀಕರಣದಿಂದ ಬ್ಯಾಂಕ್‌ನ ಅಭಿವೃದ್ಧಿ ಮತ್ತು ಆವಿಷ್ಕಾರಗಳಿಗೆ ಇನ್ನಷ್ಟು ಚುರುಕು ದೊರೆಯಲಿದೆ' ಎಂದು ಕಾರ್ಯನಿರ್ವಾಹಕ ನಿರ್ದೇಶಕ ಶೇಖರ್ ರಾವ್ ಹೇಳಿದ್ದಾರೆ.



ಯೋಗ ಪ್ರದರ್ಶನ

ಬೆಂಗಳೂರಿನ ಇಂದಿರಾನಗರದಲ್ಲಿರುವ ಆಚಾರ್ಯ ಶ್ರೀರಾಕುಮ್ ಅಂಧರ ಶಾಲೆಯಲ್ಲಿ ಸಾಂಸ್ಕೃತಿಕ ಉತ್ಸವದಲ್ಲಿ ಅಂಧ ಮತ್ತು ಭಾಗಶಃ ಅಂಧ ಮಕ್ಕಳು ಆಕರ್ಷಕವಾಗಿ ಯೋಗ ಪ್ರದರ್ಶನ ಮಾಡಿದರು

ತುಮಕೂರಿಗೆ ಇಂದು ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ತುಮಕೂರು: ಸ್ಮಾರ್ಟ್ ಸಿಟಿ ಯೋಜನೆಯಡಿ ನಿರ್ಮಾಣವಾಗುತ್ತಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮೊದಲ ಹಂತದ ಕಾಮಗಾರಿ ಉದ್ಘಾಟನೆ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ (ಜ.29) ಚಾಲನೆ ನೀಡಲಿದ್ದಾರೆ.

ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಬೆಳಗ್ಗೆ 10.30 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಒಟ್ಟು ₹657 ಕೋಟಿ ವೆಚ್ಚದ ಕಾಮಗಾರಿಗಳಿಗೆ ಅವರು ಚಾಲನೆ ನೀಡಲಿದ್ದಾರೆ. ಸುಮಾರು 1 ಲಕ್ಷ ಜನ ಭಾಗವಹಿಸುವ ನಿರೀಕ್ಷೆ ಇದೆ.

ಜಿಲ್ಲೆಯ ವಿವಿಧ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಒಟ್ಟು 658 ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಲಿದ್ದಾರೆ. ಜಿಲ್ಲೆಯಲ್ಲಿ ಶಾಲಾ ಶಿಕ್ಷಣ ಇಲಾಖೆಯಿಂದ ನಿರ್ಮಿಸಿರುವ 'ವಿವೇಕ ಕೊಠಡಿ'ಗಳನ್ನು ಉದ್ಘಾಟಿಸಲಿದ್ದಾರೆ.

ತುಮಕೂರು ಗ್ರಾಮಾಂತರ, ತುರುವೇಕೆರೆ ಮತ್ತು ತಿಪಟೂರು ವ್ಯಾಪ್ತಿಯ ಕರ್ನಾಟಕ ಪಬ್ಲಿಕ್ ಶಾಲೆ, ವಿವೇಕ ಶಾಲಾ ಕೊಠಡಿ ಹಾಗೂ ಪದವಿ ಪೂರ್ವ ಕಾಲೇಜು ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಇದೇ ವೇಳೆ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಸೇರಿದಂತೆ ವಿವಿಧ ಯೋಜನೆಗಳ 30 ಸಾವಿರ ಫಲಾನುಭವಿಗಳಿಗೆ ವಿವಿಧ ಸವಲತ್ತುಗಳನ್ನು ವಿತರಿಸಲಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಜಿ.ಪರಮೇಶ್ವರ, ಕೆ.ಎನ್. ರಾಜಣ್ಣ, ರಾಮಲಿಂಗಾರೆಡ್ಡಿ, ಎಚ್.ಸಿ.ಮಹದೇವಪ್ಪ, ಕೃಷ್ಣ ಬೈರೇಗೌಡ, ಎನ್.ಚಲುವರಾಯಸ್ವಾಮಿ, ಎಚ್.ಕೆ.ಪಾಟೀಲ, ಕೆ.ಜೆ.ಜಾರ್ಜ್ ಇತರರು ಭಾಗವಹಿಸಲಿದ್ದಾರೆ.

ರಾಜಕೀಯ ಸ್ಥಾನಮಾನ: ನೇಕಾರರ ಒತ್ತಾಯ

ತೇರದಾಳ (ಬಾಗಲಕೋಟೆ ಜಿಲ್ಲೆ): 'ನೇಕಾರ ಸಮುದಾಯ ಸಂಘಟನೆ ಕೊರತೆಯಿಂದ ರಾಜಕೀಯ ಸ್ಥಾನಮಾನಗಳು ದೊರೆಯುತ್ತಿಲ್ಲ. ಇದರಿಂದ ಇಡೀ ನೇಕಾರ ಸಮುದಾಯಗಳ ಒಕ್ಕೂಟ ಅಭಿವೃದ್ಧಿ ವಂಚಿತವಾಗಿದೆ' ಎಂದು ಕರ್ನಾಟಕ ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್. ಸೋಮಶೇಖರ ಹೇಳಿದರು.

ತೇರದಾಳದ ಸ್ವಾಮಿ ವಿವೇಕಾನಂದ ಸಿಬಿಎಸ್‌ಇ ಶಾಲಾ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ಕರ್ನಾಟಕ ರಾಜ್ಯ ಲಿಂಗಾಯತ ನೀಲಗಾರ ಸಮಾವೇಶ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನೇಕಾರ ಸಮುದಾಯಗಳ ಒಕ್ಕೂಟಕ್ಕೆ ಲಿಂಗಾಯತ ನೀಲಗಾರ ಸಮಾಜವನ್ನು ಸೇರ್ಪಡೆಗೊಳಿಸಲು ಮುಂಬರುವ ಏಪ್ರಿಲ್ ತಿಂಗಳಲ್ಲಿ ಸಭೆ ಕರೆಯಲಿದ್ದು, ಸಮಾಜ ಮುಖಂಡರ ಸಮ್ಮುಖದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದರು.

'ರಾಜ್ಯದಲ್ಲಿ ಅತೀ ಹೆಚ್ಚು ನೇಕಾರರು ಇರುವ ಜಿಲ್ಲೆಯಾಗಿರುವ ಬಾಗಲಕೋಟೆಯಲ್ಲಿಯೂ ಸಮುದಾಯವನ್ನು ಪ್ರತಿನಿಧಿಸುವ ಶಾಸಕರು ಇಲ್ಲ. ನೇಕಾರರ 29 ಒಳಪಂಗಡಗಳು ಒಟ್ಟಿಗೆ ಸೇರಿ ಚುನಾವಣೆ ಎದುರಿಸಲು ಸನ್ನದ್ಧರಾಗೋಣ' ಎಂದರು.

ತೇರದಾಳ ಶಾಸಕ ಸಿದ್ದು ಸವದಿ, ಮತಕ್ಷೇತ್ರದ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಮಾತನಾಡಿದರು. ಸಮಾಜದ ಮುಖಂಡ ಚಂದ್ರಕಾಂತ ಹೊಸುರ ಪ್ರಾಸ್ತಾವಿಕವಾಗಿ ಮಾತನಾಡಿದರು. ಚಿಕ್ಕಾಲಗಂಡಿಯ ಶಿವಶರಣಾನಂದ ಶ್ರೀ ಕಾರ್ಯಕ್ರಮದ ಸಾನಿಧ್ಯ ವಹಿಸಿ, ಆಶೀರ್ವಚನ ನೀಡಿದರು.

ಮುರ್ಮುಗೆ ಏಕವಚನ ಬಳಸಿದ ಸಿ.ಎಂ

ಚಿತ್ರದುರ್ಗ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಏಕವಚನ ಬಳಕೆ ಮಾಡಿದ್ದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸೇರಿ ಅನೇಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಶೋಷಿತರ ಜಾಗೃತಿ ಸಮಾವೇಶದಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಶೋಷಿತ ಸಮುದಾಯಕ್ಕೆ ಸೇರಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವಳನ್ನು ನೂತನ ಸಂಸತ್ ಭವನ ಹಾಗೂ ಅಯೋಧ್ಯೆಯ ರಾಮಮಂದಿರದ ಉದ್ಘಾಟನೆಗೆ ಕರೆಯಲಿಲ್ಲ' ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದರು.

ಸಿದ್ದರಾಮಯ್ಯ ಭಾಷಣದ ತುಣುಕನ್ನು 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿರುವ ಎಚ್.ಡಿ. ಕುಮಾರಸ್ವಾಮಿ, 'ಗೌರವಾನ್ವಿತ ರಾಷ್ಟ್ರಪತಿ, ದೇಶದ ಪ್ರಥಮ ಪ್ರಜೆ ಆಗಿರುವ ದ್ರೌಪದಿ ಮುರ್ಮು ಅವರಿಗೆ ಸಿದ್ದರಾಮಯ್ಯ ಏಕವಚನ ಬಳಸಿದ್ದಾರೆ. ತುಚ್ಛವಾಗಿ ಸಂಭೋದಿಸಿದ ಕೀಳು, ವಿಕೃತ, ಹೀನ ನಾಲಿಗೆಯ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೂಡಲೇ ವಜಾಗೊಳಿಸಬೇಕು' ಎಂದು ಆಗ್ರಹಿಸಿದ್ದಾರೆ.

ವಿಷಾದ ವ್ಯಕ್ತಪಡಿಸಿದ ಮುಖ್ಯಮಂತ್ರಿ

ಚಿತ್ರದುರ್ಗ: 'ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನನ್ನಂತೆಯೇ ಶೋಷಿತ ಸಮಾಜದಿಂದ ಬಂದವರು. ಅವರ ಬಗ್ಗೆ ಅಪಾರ ಗೌರವವಿದೆ. ಅವರನ್ನು ಏಕವಚನದಲ್ಲಿ ಸಂಬೋಧಿಸಬಾರದಿತ್ತು. ಅಚಾತುರ್ಯದಿಂದ ಆಗಿರುವ ಈ ಪ್ರಮಾದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

'ಎಕ್ಸ್' ಖಾತೆಯಲ್ಲಿ ಈ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ದಲಿತ ಸಮುದಾಯಕ್ಕೆ ಸೇರಿದವರು ಎಂಬ ಕಾರಣಕ್ಕಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಂಸತ್ ಭವನ ಉದ್ಘಾಟನೆಗೆ ಆಹ್ವಾನ ನೀಡದೆ ಬಿಜೆಪಿ ನಾಯಕರು ಅವಮಾನಿಸಿರುವುದು ನನಗೆ ತೀವ್ರ ನೋವು ಉಂಟುಮಾಡಿತ್ತು. ಮಾತ್ರವಲ್ಲ ನನ್ನಲ್ಲಿ ಆಕ್ರೋಶ ಹುಟ್ಟಿಸಿತ್ತು' ಎಂದು ತಿಳಿಸಿದ್ದಾರೆ.

'ಶೋಷಿತರ ಜಾಗೃತಿ ಸಮಾವೇಶದಲ್ಲಿ ಸ್ವಲ್ಪ ಭಾವುಕನಾಗಿ ಈ ಆಕ್ರೋಶವನ್ನು ಹೊರಹಾಕುವ ಭರದಲ್ಲಿ ಬಾಯ್ತಪ್ಪಿನಿಂದ ರಾಷ್ಟ್ರಪತಿಯನ್ನು ಏಕವಚನದಲ್ಲಿ ಸಂಭೋದಿಸಿದೆ. ಗ್ರಾಮೀಣ ಪ್ರದೇಶದಿಂದ ಬಂದ ನನ್ನಂತಹವರು ಅಪ್ಪ-ಅಮ್ಮ ಸೇರಿದಂತೆ ಹಿರಿಯರನ್ನೂ ಏಕವಚನದಲ್ಲಿ ಸಂಭೋದಿಸುವುದು ರೂಢಿ' ಎಂದು ಸ್ಪಷ್ಟನೆ ನೀಡಿದ್ದಾರೆ.

'ರಾಷ್ಟ್ರಧ್ವಜಕ್ಕೆ ಅನುಮತಿ; ಹಾರಿಸಿದ್ದು ಕೇಸರಿ ಧ್ವಜ'

ಪ್ರಜಾವಾಣಿ ವಾರ್ತೆ

ತುಮಕೂರು: ಮಂಡ್ಯ ತಾಲ್ಲೂಕಿನ ಕೆರಗೋಡು ಗ್ರಾಮದಲ್ಲಿ ರಾಷ್ಟ್ರಧ್ವಜ ಹಾರಿಸಲು ಅನುಮತಿ ಪಡೆದು ಕೇಸರಿ ಧ್ವಜ ಹಾರಿಸಿದ್ದಾರೆ ಎಂದು ಗೃಹ ಸಚಿವ ಪರಮೇಶ್ವರ ತಿಳಿಸಿದ್ದಾರೆ.

ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಕೇಸರಿ ಧ್ವಜ ಹಾರಿಸಲು ಅನುಮತಿ ನೀಡಿರಲಿಲ್ಲ. ಹಾಗಾಗಿ ಪಂಚಾಯಿತಿ ಅಧಿಕಾರಿಗಳು ಕೇಸರಿ ಧ್ವಜ ತೆಗೆದು, ರಾಷ್ಟ್ರಧ್ವಜ ಹಾರಿಸಿದ್ದಾರೆ ಎಂದು ಸಮರ್ಥಿಸಿಕೊಂಡರು.

ಇದರಿಂದ ಗಲಾಟೆಯಾಗಿದ್ದು, ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದಾರೆ. ಬೇರೆ ಬೇರೆ ಕಡೆಯಲ್ಲಿ ಕೇಸರಿ ಧ್ವಜ ಹಾರಿಸಲು ಯಾರದ್ದು ತಕರಾರು ಇಲ್ಲ. ಆದರೆ ಸರ್ಕಾರಿ ಜಾಗದಲ್ಲಿ ಹಾರಿಸಬಾರದು. ಇದು ಸಮಾಜದಲ್ಲಿ ಶಾಂತಿ ಕದಡುವ ಕೆಲಸ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

'ಕಾಂಗ್ರೆಸ್‌ನವರು ಹಿಂದೂ ವಿರೋಧಿಗಳು ಎಂದು ಬಿಂಬಿಸಲು ಬಿಜೆಪಿಯವರು ಯತ್ನಿಸುತ್ತಿದ್ದಾರೆ. ನಾವು ಸಹ ಹಿಂದೂಗಳೇ, ನೀವು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಿ ಎಂದು ಹೇಳುತ್ತಿದ್ದೇವೆ. ರಾಜ್ಯದ ಕಾನೂನು ಮುರಿಯುವ ಕೆಲಸ ಮಾಡಬೇಡಿ ಅಂತ ಹೇಳಿದರೂ ಅವರು ರಾಜಕೀಯ ಪ್ರೇರಿತ ಹೇಳಿಕೆ ನೀಡುತ್ತಿದ್ದಾರೆ' ಎಂದು ಪರಮೇಶ್ವರ ಬೇಸರ ವ್ಯಕ್ತಪಡಿಸಿದರು.

ಅಶೋಕ ವಶಕ್ಕೆ

ಮಂಡ್ಯ: ತಾಲ್ಲೂಕಿನ ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜ ತೆರವು ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದ ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಸೇರಿದಂತೆ ಹಲವು ಬಿಜೆಪಿ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು.

ಗ್ರಾಮದಲ್ಲಿ ಪ್ರತಿಭಟನಕಾರರೊಂದಿಗೆ ಧ್ವಜಸ್ತಂಭ ಸ್ಥಳಕ್ಕೆ ತೆರಳಲು ಮುಂದಾದಾಗ ಪೊಲೀಸರು ತಡೆದರು. ಬ್ಯಾರಿಕೇಡ್ ತಳ್ಳಿ ಮುಂದಕ್ಕೆ ಬರುವಾಗ ಪೊಲೀಸರು ಅಶೋಕ, ಶಾಸಕ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಸೇರಿ ಹಲವರನ್ನು ವಶಕ್ಕೆ ಪಡೆದರು.

ಆಕ್ರೋಶ ವ್ಯಕ್ತಪಡಿಸಿದ ಅಶೋಕ, 'ಕಳ್ಳರ ರೀತಿಯಲ್ಲಿ ರಾತ್ರೋರಾತ್ರಿ ಹನುಮ ಧ್ವಜ ಇಳಿಸಿದ್ದಾರೆ. ರಾಜ್ಯ ಸರ್ಕಾರ ಹಿಂದೂ ವಿರೋಧಿ ನೀತಿ ಅನುಸರಿಸುತ್ತಿದ್ದು, ಸೋಮವಾರದಿಂದಲೇ (ಜ.29) ರಾಜ್ಯದಾದ್ಯಂತ ಹೋರಾಟ ಆರಂಭಿಸಲಾಗುವುದು. ಇದಕ್ಕೆ ಜೆಡಿಎಸ್ ಕೈಜೋಡಿಸಲಿದೆ' ಎಂದು ತಿಳಿಸಿದರು.

ಮುಖ್ಯಮಂತ್ರಿ ಪ್ರತಿಕ್ರಿಯೆ: ಘಟನೆಗೆ ಸಂಬಂಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯೆ ನೀಡಿದ್ದು, 'ನಿಯಮ ಉಲ್ಲಂಘನೆ ಕಾರಣಕ್ಕೆ ಜಿಲ್ಲಾಡಳಿತ ಧ್ವಜ ಇಳಿಸುವಂತೆ ಸೂಚಿಸಿದೆ. ಆದರೆ, ಜಿಲ್ಲಾಡಳಿತದ ಸೂಚನೆ ತಿರಸ್ಕರಿಸಿ ಬಿಜೆಪಿ ನಾಯಕರು ಉದ್ವಿಗ್ನ ಪರಿಸ್ಥಿತಿ ನಿರ್ಮಾಣ ಆಗುವಂತೆ ಮಾಡಿದ್ದಾರೆ' ಎಂದು ಕಿಡಿಕಾರಿದ್ದಾರೆ.

ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಹಾಕಿರುವ ಅವರು, 'ಉದ್ದೇಶಪೂರ್ವಕವಾಗಿ ನಿಯಮ ಉಲ್ಲಂಘಿಸಿ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವುದು ಬಿಜೆಪಿ ಹಾಗೂ ಸಂಘ ಪರಿವಾರದ ಪೂರ್ವಯೋಜಿತ ಕೃತ್ಯ. ಮಂಡ್ಯದಲ್ಲಿ ಕೋಮು ಗಲಭೆ ಎಬ್ಬಿಸುವ ಸಂಚು ರೂಪಿಸಿರುವುದು ಬಿಜೆಪಿ ನಾಯಕರು ಲೋಕಸಭೆ ಚುನಾವಣೆಗೆ ನಡೆಸಿರುವ ತಯಾರಿಯಾಗಿದೆ' ಎಂದು ಆರೋಪಿಸಿದ್ದಾರೆ.

ಫೆ. 9ಕ್ಕೆ ಮಂಡ್ಯ ಬಂದ್‌ಗೆ ಕರೆ

'ಹನುಮ ದೇವರಿಗೆ ಕಾಂಗ್ರೆಸ್ ಸರ್ಕಾರ ಅಪಮಾನ ಮಾಡಿದೆ' ಎಂದು ಆರೋಪಿಸಿರುವ ಬಜರಂಗದಳ ಫೆ.9ರಂದು ಮಂಡ್ಯ ನಗರ ಬಂದ್‌ಗೆ ಕರೆ ನೀಡಿದೆ.

ಹನುಮಧ್ವಜ ತೆರವು: ಉದ್ವಿಗ್ನ

ಒಂದನೇ ಪುಟದಿಂದ...

'ರಾಷ್ಟ್ರ ಧ್ವಜ, ಕನ್ನಡ ಧ್ವಜ ಹಾರಿಸುವ ಅನುಮತಿ ಪಡೆದು ಕೇಸರಿ ಧ್ವಜ ಹಾರಿಸಲಾಗಿದೆ, 60 ಅಡಿ ಸ್ತಂಭ ಸ್ಥಾಪಿಸುವ ಮಾಹಿತಿ ನೀಡಿ 108 ಅಡಿ ಸ್ಥಾಪಿಸಲಾಗಿದೆ' ಎಂದು ಆರೋಪಿಸಿ ದಲಿತ ಸಂಘರ್ಷ ಸಮಿತಿ ಸದಸ್ಯರು ಜಿಲ್ಲಾ ಪಂಚಾಯಿತಿ ಸಿಇಒಗೆ ದೂರು ನೀಡಿದ್ದರು.

ಶುಕ್ರವಾರ ಸ್ಥಳಕ್ಕೆ ಬಂದ ತಾ.ಪಂ. ಇಒ ಧ್ವಜಸ್ತಂಭ ತೆರವುಗೊಳಿಸುವಂತೆ ಕೆರಗೋಡು ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಸೂಚಿಸಿದ್ದರು. ಇದನ್ನು ವಿರೋಧಿಸಿದ ಸುತ್ತಮುತ್ತಲ ಹಳ್ಳಿಗಳ ಜನರು ಬಿಜೆಪಿ, ಜೆಡಿಎಸ್, ಬಜರಂಗದಳ, ವಿಶ್ವ ಹಿಂದೂ ಪರಿಷತ್ ಸದಸ್ಯರು ಶನಿವಾರ ಮಧ್ಯಾಹ್ನದಿಂದಲೇ ಪ್ರತಿಭಟನೆ ಆರಂಭಿಸಿದ್ದರು.

ಶನಿವಾರ ರಾತ್ರಿಯೇ ಸ್ತಂಭ ತೆರವುಗೊಳಿಸುತ್ತಾರೆ ಎಂಬ ಮಾಹಿತಿ ಇದ್ದ ಕಾರಣ ಕಾರ್ಯಕರ್ತರು ರಾತ್ರಿಯಿಡೀ ಪ್ರತಿಭಟಿಸಿದ್ದರು. ಮಧ್ಯಾರಾತ್ರಿಯಿಂದಲೇ ಸ್ಥಳದಲ್ಲಿ ಬಿಗುವಿನ ಪರಿಸ್ಥಿತಿ ಇತ್ತು. ಧ್ವಜಸ್ತಂಭದ ಎದುರು ಸಾವಿರಾರು ಕಾರ್ಯಕರ್ತರು 'ಜೈಶ್ರೀರಾಮ್' ಘೋಷಣೆ ಕೂಗುತ್ತಿದ್ದರು. ಸ್ತಂಭ ತೆರವುಗೊಳಿಸದಂತೆ ಒತ್ತಡ ಹೇರಿದರು.

ಅಧಿಕಾರಿಗಳು ಪೊಲೀಸ್ ಬಂದೋಬಸ್ತ್ ನಡುವೆ ಭಾನುವಾರ ಬೆಳಿಗ್ಗೆ ಧ್ವಜಸ್ತಂಭಕ್ಕೆ ಅಳವಡಿಸಲಾಗಿದ್ದ ಕೇಸರಿ ಧ್ವಜ ಇಳಿಸಿದರು. ಧ್ವಜ ಇಳಿಸುವಾಗ ಪೊಲೀಸರು ಹಾಗೂ ಪ್ರತಿಭಟನಕಾರರ ನಡುವೆ ನಡೆದ ಮಾತಿನ ಚಕಮಕಿ, ನೂಕಾಟದಲ್ಲಿ ಹಲವು ಕಾರ್ಯಕರ್ತರು ಗಾಯಗೊಂಡರು. ಧ್ವಜ ಇಳಿಸಿರುವ ಸುದ್ದಿ ತಿಳಿಯುತ್ತಿದ್ದಂತೆ ಹೊರ ಜಿಲ್ಲೆಗಳಿಂದಲೂ ಬಂದ ಕಾರ್ಯಕರ್ತರು ಪ್ರತಿಭಟನೆಯನ್ನು ಮತ್ತಷ್ಟು ತೀವ್ರಗೊಳಿಸಿದರು.

'ಧ್ವಜ ಇಳಿಸಲು ಕಾಂಗ್ರೆಸ್ ಸರ್ಕಾರದ ಹಿಂದೂ ವಿರೋಧಿ ನೀತಿಯೇ ಕಾರಣ. ಶಾಸಕ ಗಣಿಗ ರವಿಕುಮಾರ್ ಆಣತಿಯಂತೆ ಪೊಲೀಸರು ನಡೆದುಕೊಳ್ಳುತ್ತಿದ್ದಾರೆ' ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ರಾಷ್ಟ್ರ ಧ್ವಜಾರೋಹಣ, ಲಾಠಿ ಪ್ರಹಾರ; ಕೇಸರಿ ಧ್ವಜ ಇಳಿಸಿದ ನಂತರ ಅಧಿಕಾರಿಗಳು ಸ್ತಂಭಕ್ಕೆ ರಾಷ್ಟ್ರಧ್ವಜಾರೋಹಣ ಮಾಡಿದರು. ಈ ಸಂದರ್ಭದಲ್ಲಿ ತಮ್ಮತ್ತ ನುಗ್ಗಿ ಬಂದ ಪ್ರತಿಭಟನಕಾರರ ಮೇಲೆ ಪೊಲೀಸರು ಲಘು ಲಾಠಿ ಪ್ರಹಾರ ಮಾಡಿದರು.

ಸದ್ಯ ಧ್ವಜ ಸ್ತಂಭದ ಸುತ್ತಲೂ ಪೊಲೀಸ್ ಪಹರೆ ಹಾಕಲಾಗಿದೆ. ದಕ್ಷಿಣ ವಲಯ ಐಜಿಪಿ ಡಾ.ಬೋರಲಿಂಗಯ್ಯ, ಎಸ್‌ಪಿ ಎನ್.ಯತೀಶ್ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಮಾಡಲಾಗಿದೆ. ಗ್ರಾಮದಾದ್ಯಂತ ಪೊಲೀಸ್ ಪಹರೆ ಹಾಕಲಾಗಿದೆ.

'ರಾಷ್ಟ್ರ ಧ್ವಜಾರೋಹಣಕ್ಕೆ ನಮ್ಮ ವಿರೋಧವಿಲ್ಲ, ನಾವು ಸ್ಥಾಪಿಸಿರುವ ಸ್ತಂಭದಲ್ಲಿ ಹನುಮ ಧ್ವಜವನ್ನೇ ಹಾರಿಸಬೇಕು. ಮತ್ತೆ ಹನುಮ ಧ್ವಜ ಹಾರಿಸುವವರೆಗೂ ಹೋರಾಟ ಹಿಂಪಡೆಯುವುದಿಲ್ಲ' ಎಂದು ಪ್ರತಿಭಟನಕಾರರು ಎಚ್ಚರಿಕೆ ನೀಡಿದರು.

ಘಟನೆಯ ನಂತರ ಬಿಜೆಪಿ, ಜೆಡಿಎಸ್ ರಾಜ್ಯಮಟ್ಟದ ಮುಖಂಡರು ಭೇಟಿ ನೀಡಿ ಪ್ರತಿಭಟನಕಾರರಿಗೆ ಸಾಥ್ ನೀಡಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಶಾಸಕ ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಜೆಡಿಎಸ್ ಮುಖಂಡರಾದ ಡಿ.ಸಿ.ತಮ್ಮಣ್ಣ, ಸುರೇಶ್‌ಗೌಡ ಭೇಟಿ ನೀಡಿ ಅಹೋರಾತ್ರಿ ಧರಣಿಯನ್ನು ಬೆಂಬಲಿಸಿದ್ದಾರೆ.

ಜಾತಿಗಣತಿ ವರದಿ ಸ್ವೀಕಾರಕ್ಕೆ ಒತ್ತಾಯ



ಚಿತ್ರದುರ್ಗದಲ್ಲಿ ಭಾನುವಾರ ಆಯೋಜಿಸಿದ್ದ ಶೋಷಿತರ ಜಾಗೃತಿ ಸಮಾವೇಶದಲ್ಲಿ ಹಕ್ಕೊತ್ತಾಯಗಳಿಗೆ ಸಮ್ಮತಿ ಸೂಚಿಸಿದರು
ಪ್ರಜಾವಾಣಿ ಚಿತ್ರ– ವಿ.ಚಂದ್ರಪ್ಪ

ಒಂದನೇ ಪುಟದಿಂದ...

ಜಾತಿ ಗಣತಿ ವರದಿ ಜಾರಿಗೊಳಿಸುವ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆಂಬಲಕ್ಕೆ ನಿಲ್ಲುವುದಾಗಿ ಶೋಷಿತ ಸಮುದಾಯ ಭರವಸೆ ತುಂಬಿತು.

ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ. ರಾಮಚಂದ್ರಪ್ಪ ಸಮಾವೇಶದ 12 ಹಕ್ಕೊತ್ತಾಯಗಳನ್ನು ಮಂಡಿಸಿದಾಗ ಇಡೀ ಸಭಾಂಗಣ ಕರತಾಡನದೊಂದಿಗೆ ಸಮ್ಮತಿ ವ್ಯಕ್ತಪಡಿಸಿತು. ವೇದಿಕೆಯ ಮೇಲೆ ಆಸೀನರಾಗಿದ್ದ ಸಚಿವರೂ ಇದಕ್ಕೆ ಧ್ವನಿಗೂಡಿಸಿದರು. 'ಜಾತಿ ಗಣತಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಕೈಗೊಳ್ಳುವ ತೀರ್ಮಾನಗಳಿಗೆ ಬದ್ಧ' ಎಂದು ಸಚಿವರು ಆಶ್ವಾಸನೆ ನೀಡಿದರು.

ಜಾತಿ ವ್ಯವಸ್ಥೆ ಹಾಗೂ ಸಾಮಾಜಿಕ ಅಸಮಾನತೆಯ ಬಗ್ಗೆ ಸಮಾವೇಶ ತೀವ್ರ ಅಸಮಾಧಾನ ಹೊರಹಾಕಿತು. ಮೀಸಲಾತಿ ಕುರಿತು ಬಿಜೆಪಿ, ಆರ್‌ಎಸ್‌ಎಸ್ ತಳೆದಿರುವ ನಿಲುವುಗಳ ಹಿನ್ನೆಲೆಯನ್ನು ಬಿಚ್ಚಿಟ್ಟು ತರಾಟೆಗೆ ತೆಗೆದುಕೊಳ್ಳಲಾಯಿತು. ಶೋಷಿತ ಸಮುದಾಯಗಳ ನಡುವಿನ ಹೊಂದಾಣಿಕೆ ಕೊರತೆ ನೀಗಿಸಿಕೊಂಡು ರಾಜ್ಯಾಧಿಕಾರ ಹಿಡಿಯುವ ಬಗ್ಗೆ ಗಹನ ಚರ್ಚೆಗೆ ಸಮಾವೇಶ ವೇದಿಕೆ ಒದಗಿಸಿತು. ಪ್ರಬಲ ಜಾತಿಗಳಲ್ಲಿನ ಆರ್ಥಿಕ ದುರ್ಬಲ ವರ್ಗಗಳಿಗೆ (ಇಡಬ್ಲ್ಯುಎಸ್) ಕೇಂದ್ರ ಸರ್ಕಾರ ಕಲ್ಪಿಸಿದ ಮೀಸಲು ಸೌಲಭ್ಯದ ರದ್ದತಿಗೆ ಒತ್ತಾಯಿಸಿತು.

ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಸಿದ್ದರಾಮಯ್ಯ ಅವರಿಗೆ ಶಕ್ತಿ ತುಂಬುವಂತೆ ಸಚಿವರು ಮನವಿ ಮಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಬಗ್ಗೆ ಹಗುರವಾಗಿ ಮಾತನಾಡಿದ್ದ ಸಂಸದ ಅನಂತಕುಮಾರ್ ಹೆಗಡೆ ವಿರುದ್ಧ ಅನೇಕರು ವಾಗ್ದಾಳಿ ನಡೆಸಿದರು. ಚುನಾವಣೆಯಲ್ಲಿ ಪರಿಣಾಮ ಎದುರಿಸಬೇಕಾದೀತು ಎಂಬ ಎಚ್ಚರಿಕೆ ನೀಡಿದರು. ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಹೊರತುಪಡಿಸಿ ಅನ್ಯ ಪಕ್ಷದ ಯಾವೊಬ್ಬ ಪ್ರತಿನಿಧಿಯೂ ಸಮಾವೇಶದಲ್ಲಿ ಪಾಲ್ಗೊಂಡಿರಲಿಲ್ಲ.

ಸಚಿವರಾದ ಕೆ.ಎಚ್. ಮುನಿಯಪ್ಪ, ಎಚ್.ಸಿ. ಮಹದೇವಪ್ಪ, ದಿನೇಶ್ ಗುಂಡೂರಾವ್, ಮಧು ಬಂಗಾರಪ್ಪ, ಆರ್.ಬಿ. ತಿಮ್ಮಾಪುರ, ಶಿವರಾಜ ತಂಗಡಗಿ, ಸಂತೋಷ್ ಲಾಡ್, ಜಮೀರ್ ಅಹಮ್ಮದ್ ಖಾನ್, ಬೈರತಿ ಸುರೇಶ್, ಬಿ. ನಾಗೇಂದ್ರ, ರಹೀಂಖಾನ್, ಡಿ. ಸುಧಾಕರ್, ಬೋಸರಾಜ್ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

'ಜಾತಿಗಣತಿ ವರದಿ ಸ್ವೀಕರಿಸುವೆ'

'ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸಿದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ (ಜಾತಿ ಗಣತಿ) ವರದಿಯನ್ನು ಸ್ವೀಕರಿಸಲು ಸಿದ್ಧನಿದ್ದೇನೆ. ವರದಿಯಲ್ಲಿ ವ್ಯತ್ಯಾಸಗಳಿದ್ದರೆ ತಜ್ಞರ ಅಭಿಪ್ರಾಯ ಪಡೆದು ಮುಂದುವರಿಯಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

'ವರದಿಯನ್ನು ಯಾರೊಬ್ಬರೂ ನೋಡಿಲ್ಲ, ಓದಿಲ್ಲ. ಆದರೂ, ಸಮೀಕ್ಷೆ ಅವೈಜ್ಞಾನಿಕವಾಗಿ ನಡೆದಿದೆ ಎಂಬ ಆಕ್ಷೇಪ ಎತ್ತಿದ್ದಾರೆ. ವರದಿಯಲ್ಲಿ ಏನಿದೆ ಎಂಬುದನ್ನು ಅರಿಯದೇ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಆಯೋಗದ ಅಧ್ಯಕ್ಷರು ಸಲ್ಲಿಸುವ ವರದಿಯನ್ನು ಸಚಿವ ಸಂಪುಟದ ಮುಂದಿಟ್ಟು ಚರ್ಚಿಸುತ್ತೇನೆ. ಸರ್ವಾಧಿಕಾರಿಯ ರೀತಿಯಲ್ಲಿ ತೀರ್ಮಾನ ಕೈಗೊಳ್ಳುವುದಿಲ್ಲ. ಸದಾಕಾಲ ನಿಮ್ಮ ಪರವಾಗಿ ನಿಲ್ಲುವೆ' ಎಂದು ಹೇಳಿದಾಗ ಇಡೀ ಸಭಾಂಗಣ ಕರತಾಡನದೊಂದಿಗೆ ಸಮ್ಮತಿ ಸೂಚಿಸಿತು.

ಗಾಬರಿ ಬೇಡ: ಡಿ.ಕೆ. ಶಿವಕುಮಾರ್

'ಜಾತಿ ಗಣತಿ ವರದಿಗೆ ರಾಜ್ಯ ಸರ್ಕಾರ ಬದ್ಧವಾಗಿದೆ. ಯಾರೂ ಗಾಬರಿಯಾಗುವುದು ಬೇಡ. ಎಲ್ಲರೂ ಒಗ್ಗೂಡಿ ಮುನ್ನಡೆಯೋಣ. ಕಾಂಗ್ರೆಸ್ ನೇತೃತ್ವದ ಸರ್ಕಾರ ಎಲ್ಲರ ರಕ್ಷಣೆಗೆ ಬದ್ಧವಾಗಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಸಿ.ಎಂ 'ಕೈ' ಬಲಪಡಿಸಿ: ಜಾರಕಿಹೊಳಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 'ಕೈ' ಬಲಪಡಿಸಲು ಸೈನಿಕರಂತೆ ಕೆಲಸ ಮಾಡಬೇಕಿದೆ. ಅವರಿಗೆ ಶಕ್ತಿ ಕೊಟ್ಟಷ್ಟು ಶೋಷಿತ ಸಮುದಾಯಗಳಿಗೆ ಲಾಭವಾಗಲಿದೆ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ಲೋಕಸಭಾ ಚುನಾವಣೆಯಲ್ಲಿ ಧರ್ಮದ ಆಧಾರದಲ್ಲಿ ಮತ ಸೆಳೆಯುವ ಹುನ್ನಾರ ನಡೆಯಲಿದೆ. ವಂಚನೆಗೆ ಬಲಿಯಾಗದೆ ನಿರ್ಧಾರ ಕೈಗೊಳ್ಳಬೇಕು. ಸಿದ್ದರಾಮಯ್ಯ ಅವರ ಪರವಾಗಿ ನಿಲ್ಲಬೇಕು' ಎಂದು ಮನವಿ ಮಾಡಿದರು.

'ಕಲ್ಯಾಣ'ದ ಕೈ ಶಾಸಕರಿಗೆ ತಲಾ ₹5 ಕೋಟಿ

ಒಂದನೇ ಪುಟದಿಂದ...

ಹಾಗಾಗಿ, ಶಾಸಕರಿಗೆ ನೀಡಲು ಕೆಕೆಆರ್‌ಡಿಬಿ ಅನುದಾನದಿಂದ ₹90 ಕೋಟಿ ಪಡೆದುಕೊಳ್ಳಲಾಗಿದೆ. ಕೆಕೆಆರ್‌ಡಿಬಿ ಖಾತೆಯಲ್ಲಿರುವ ಬಡ್ಡಿ ಮೊತ್ತದಿಂದ ಉಳಿದ ₹10 ಕೋಟಿಯನ್ನು ಪಡೆದುಕೊಳ್ಳಲು ಯೋಜನೆ ಮತ್ತು ಸಾಂಖ್ಯಿಕ ಇಲಾಖೆಗೆ ಮುಖ್ಯಮಂತ್ರಿ ನಿರ್ದೇಶನ ನೀಡಿದ್ದಾರೆ ಎಂದು ಮುಖ್ಯಮಂತ್ರಿ ಸಚಿವಾಲಯದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಸೇರಿ ಏಳು ಜಿಲ್ಲೆಗಳ ವ್ಯಾಪ್ತಿಯಲ್ಲಿ ಒಟ್ಟು 41 ವಿಧಾನಸಭಾ ಕ್ಷೇತ್ರಗಳಿವೆ. ಈ ಪೈಕಿ, 26 ಕ್ಷೇತ್ರಗಳಲ್ಲಿ ಕಾಂಗ್ರೆಸ್, 10 ರಲ್ಲಿ ಬಿಜೆಪಿ, ಮೂರು ಕ್ಷೇತ್ರಗಳಲ್ಲಿ ಜೆಡಿಎಸ್, ಕಲ್ಯಾಣ ರಾಜ್ಯ ಪ್ರಗತಿ ಪಕ್ಷ (ಕೆಆರ್‌ಪಿಪಿ) ಮತ್ತು ಪಕ್ಷೇತರ ಒಬ್ಬರು ಶಾಸಕರಿದ್ದಾರೆ. ಕಾಂಗ್ರೆಸ್ ಶಾಸಕರು ಮತ್ತು ಪಕ್ಷೇತರ ಶಾಸಕಿಗೆ ಮಾತ್ರ ಅನುದಾನ ಹಂಚಲಾಗಿದೆ.

ಕಳೆದ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆದ ವಿಧಾನ ಮಂಡಲದ ಅಧಿವೇಶನದ ಸಂದರ್ಭದಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆಯಲ್ಲಿ ಪಕ್ಷದ ಎಲ್ಲ ಶಾಸಕರಿಗೂ ತಲಾ ₹25 ಕೋಟಿ ವಿಶೇಷ ಅನುದಾನ ನೀಡುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದರು. ಇದೀಗ, ಕಲ್ಯಾಣ ಕರ್ನಾಟಕ ಭಾಗದ ಪಕ್ಷದ ಶಾಸಕರಿಗೆ (ಸಚಿವರನ್ನು ಹೊರತುಪಡಿಸಿ) ಅವರು ತಮ್ಮ ವಿವೇಚನಾ ಕೋಟಾದ ನಿಧಿಯನ್ನು ಹಂಚಿದ್ದಾರೆ.

ಸಚಿವರಾದ ಪ್ರಿಯಾಂಕ್ ಖರ್ಗೆ (ಚಿತ್ತಾಪುರ), ಶರಣಪ್ರಕಾಶ ಪಾಟೀಲ (ಸೇಡಂ), ಶರಣಬಸಪ್ಪ ದರ್ಶನಾಪುರ (ಶಹಾಪುರ), ಶಿವರಾಜ ಎಸ್. ತಂಗಡಗಿ (ಕನಕಗಿರಿ), ಈಶ್ವರ ಖಂಡ್ರೆ (ಭಾಲ್ಕಿ), ರಹೀಂ ಖಾನ್ (ಬೀದರ್), ಬಿ. ನಾಗೇಂದ್ರ (ಬಳ್ಳಾರಿ) ಅವರನ್ನು ಬಿಟ್ಟು ಉಳಿದ 19 ಕಾಂಗ್ರೆಸ್ ಶಾಸಕರು ಮತ್ತು ಏಕೈಕ ಪಕ್ಷೇತರ ಶಾಸಕಿಗೆ ತಲಾ ₹5 ಕೋಟಿ ಹಂಚಿಕೆ ಮಾಡಲಾಗಿದೆ.

ಸಚಿವರ ವಿವೇಚನಾ ಕೋಟಕ್ಕೆ ಕತ್ತರಿ: ಕಳೆದ ಸಾಲಿನಲ್ಲಿ (2022-23) ಕೆಕೆಆರ್‌ಡಿಬಿಗೆ ಒದಗಿಸಿದ್ದ ₹3 ಸಾವಿರ ಕೋಟಿ ಅನುದಾನದಲ್ಲಿ ಮುಖ್ಯಮಂತ್ರಿಯ ವಿವೇಚನಾ ಕೋಟಾ ಶೇ 2, ಮಂಡಳಿ ಅಧ್ಯಕ್ಷರ ವಿವೇಚನಾ ಕೋಟಾ ಶೇ 3, ಸರ್ಕಾರದ ವಿವೇಚನಾ ಕೋಟಾ (ಯೋಜನಾ ಸಚಿವರ) ಶೇ 5 ಎಂದು ನಿಗದಿಪಡಿಸಲಾಗಿತ್ತು. ಯೋಜನಾ ಸಚಿವ ಡಿ. ಸುಧಾಕರ್ ಅಧ್ಯಕ್ಷತೆಯಲ್ಲಿ 2023ರ ಜುಲೈ 7ರಂದು ನಡೆದ ಕೆಕೆಆರ್‌ಡಿಬಿ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮುಖ್ಯಮಂತ್ರಿಯ ವಿವೇಚನಾ ಕೋಟಾವನ್ನು ಶೇ 3ಕ್ಕೆ ಏರಿಸಿ, ಮಂಡಳಿಯ ಅಧ್ಯಕ್ಷರ ವಿವೇಚನಾ ಕೋಟಾವನ್ನು ಶೇ 2ಕ್ಕೆ ಕಡಿಮೆ ಮಾಡಲಾಗಿತ್ತು. ಆದರೆ, ಜ. 9ರಂದು ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ನಡೆದ ಪ್ರಗತಿ ಪರಿಶೀಲನೆ ಸಭೆಯಲ್ಲಿ ಸರ್ಕಾರದ ವಿವೇಚನಾ ಕೋಟಾವನ್ನು (ಸಚಿವರ ಕೋಟಾ) ಶೇ 5 (ಅಂದರೆ, ₹ 150 ಕೋಟಿ) ನಿಗದಿಪಡಿಸಿರುವುದಕ್ಕೆ ಆ ಭಾಗದ ಸಚಿವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಹೀಗಾಗಿ, ಮುಖ್ಯಮಂತ್ರಿಯ ಸೂಚನೆಯಂತೆ ಈ ಕೋಟಾವನ್ನು ಶೇ 3ಕ್ಕೆ (₹90 ಕೋಟಿ) ಕಡಿತಗೊಳಿಸಲಾಗಿದೆ. ಇದರಿಂದಾಗಿ ಸಚಿವರ (ಡಿ. ಸುಧಾಕರ್) ವಿವೇಚನಾ ಕೋಟಾಕ್ಕೆ ಕತ್ತರಿ ಬಿದ್ದಂತಾಗಿದೆ.

ಸಿ.ಎಂ ಆಪ್ತ ರಾಯರಡ್ಡಿಗೆ ಬಂಪರ್

ಮುಖ್ಯಮಂತ್ರಿಯ ಸಲಹೆಗಾರ (ಆರ್ಥಿಕ ಮತ್ತು ತೆರಿಗೆ), ಯಲಬುರ್ಗಾ ಶಾಸಕ ಬಸವರಾಜ ರಾಯರಡ್ಡಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಂಪರ್ ಕೊಡುಗೆ ನೀಡಿದ್ದಾರೆ. ತಮ್ಮ ವಿವೇಚನಾ ನಿಧಿಯಿಂದ ₹5 ಕೋಟಿಯ ಜೊತೆಗೆ, ಹಿಂದಿನ ಸಾಲಿನ (2022–23) ಮುಖ್ಯಮಂತ್ರಿ ವಿವೇಚನಾ ನಿಧಿಯ ₹48.57 ಕೋಟಿ ಅನುದಾನವನ್ನು ಕಾಮಗಾರಿ ಬದಲಾವಣೆ ಮಾಡಿ ರಾಯರಡ್ಡಿ ಅವರಿಗೆ ನೀಡಿದ್ದಾರೆ.

ಹಿಂದಿನ ಸಾಲಿನ ಕ್ರಿಯಾಯೋಜನೆಯಲ್ಲಿ ₹48.57 ಕೋಟಿ ಅನುದಾನದಲ್ಲಿ ಕೊಪ್ಪಳ ಜಿಲ್ಲೆಯ ಕುಕನೂರು, ಯಲಬುರ್ಗಾ, ಗಜೇಂದ್ರಗಡ, ಗದ್ದನಕೇರಿ ರಾಷ್ಟ್ರೀಯ ಹೆದ್ದಾರಿ 367ಗೆ ಇಪಿಸಿ (ಎಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಆ್ಯಂಡ್ ಕನ್‌ಸ್ಟ್ರಕ್ಷನ್) ಮಾದರಿಯಲ್ಲಿ ಬೈಪಾಸ್ ರಸ್ತೆ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಅನುಮೋದನೆ ನೀಡಲಾಗಿತ್ತು. ಆದರೆ, ಆ ಕಾಮಗಾರಿ ಬೇರೆ ಅನುದಾನದಲ್ಲಿ ಕೈಗೆತ್ತಿಕೊಂಡ ಕಾರಣ, ಈ ವಿವೇಚನಾ ಕೋಟಾವನ್ನು ತಮ್ಮ ಕ್ಷೇತ್ರದ ಯಲಬುರ್ಗಾ ಮತ್ತು ಕುಕನೂರು ತಾಲ್ಲೂಕುಗಳಲ್ಲಿ ಒಟ್ಟು 11 ಕಾಮಗಾರಿಗಳನ್ನು ಕೈಗೊಳ್ಳಲು, ಕಾಮಗಾರಿ ಬದಲಾವಣೆ ಮಾಡಿಕೊಡುವಂತೆ ಸಿದ್ದರಾಮಯ್ಯ ಅವರಿಗೆ ರಾಯರಡ್ಡಿ ಮನವಿ ಸಲ್ಲಿಸಿದ್ದರು. ಅದಕ್ಕೆ ಮುಖ್ಯಮಂತ್ರಿ ಒಪ್ಪಿಗೆ ಸೂಚಿಸಿದ್ದಾರೆ.

ಹೀಗಾಗಿ, ಈ ಹಿಂದೆ ಅನುಮೋದನೆ ನೀಡಿದ್ದ ಕಾಮಗಾರಿಯನ್ನು ಬದಲಿಸಿ, ಹೊಸತಾಗಿ ಅನುಮೋದನೆ ನೀಡಿ ಯೋಜನಾ ಇಲಾಖೆ ನ. 16ರಂದೇ ಆದೇಶ ಹೊರಡಿಸಿದೆ ಎಂದು ಕೆಕೆಆರ್‌ಡಿಬಿ ಮೂಲಗಳು ತಿಳಿಸಿವೆ.

ತೋಟಗಾರಿಕೆ ಮೂಲಕ 'ಪ್ರಕೃತಿ ಚಿಕಿತ್ಸೆ'

ಒಂದನೇ ಪುಟದಿಂದ...

2023 ನವೆಂಬರ್‌ನಲ್ಲಿ ಈ ಕೇಂದ್ರವನ್ನು ಉದ್ಘಾಟಿಸಲಾಗಿತ್ತು.

'ಮಾನಸಿಕ ಅಸ್ವಸ್ಥರು, ಅಂಗವಿಕಲರು ಹಾಗೂ ಅಪರಾಧ ಕೃತ್ಯ ಎಸಗಿರುವ ಮಕ್ಕಳು ತೋಟಗಾರಿಕೆ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದರಿಂದ ಪ್ರಕೃತಿಯ ಜೊತೆಗೆ ಬೆರೆತು ಮಾನಸಿಕ ಅಸ್ವಸ್ಥತೆ ನಿವಾರಣೆಗೆ ಸಹಕಾರಿಯಾಗಲಿದೆ. ಔಷಧೀಯ ಸಸ್ಯಗಳನ್ನು ಸ್ಪರ್ಶಿಸುವುದರಿಂದ, ಅವುಗಳ ಸುವಾಸನೆಯನ್ನು ಆಘ್ರಾಣಿಸುವುದರಿಂದ ಅವರಲ್ಲಿ ಮಾನಸಿಕವಾಗಿ ಬದಲಾವಣೆ ಆಗಲಿದೆ. ಒತ್ತಡ ನಿವಾರಣೆ ಹಾಗೂ ಆರೋಗ್ಯ ಸುಧಾರಣೆಗೆ ಸಹಕಾರಿಯಾಗಲಿದೆ' ಎಂದು ಎಪಿಡಿ ಸಂಸ್ಥೆಯ ರೇಣುಕಾ ಸಿದ್ಧಸಮುದ್ರಾ ಮಾಹಿತಿ ನೀಡಿದರು.

'ಇಂತಹ ಜನರು ಸ್ವಾವಲಂಬಿಗಳಾಗಿ ಜೀವನ ನಡೆಸಲು ಈ ಯೋಜನೆ ಸಹಕಾರಿಯಾಗಲಿದೆ. ಇವರ ಶ್ರಮದಿಂದ ಈಗಾಗಲೇ ಒಂದು ಕೈತೋಟವೂ ನಿರ್ಮಾಣವಾಗಿದೆ. ಅದರಲ್ಲಿ ಹೂವಿನ ಗಿಡಗಳು ಹಾಗೂ 65 ಬಗೆಯ ಔಷಧೀಯ ಸಸ್ಯಗಳನ್ನು ನೆಡಲಾಗಿದೆ. ಟೊಮೆಟೊ, ಬದನೆಕಾಯಿ, ಪಾಲಕ್, ಮೆಣಸಿನಕಾಯಿ ಹಾಗೂ ಕೊತ್ತಂಬರಿ ಸೊಪ್ಪು ಮುಂತಾದವುಗಳನ್ನು ಬೆಳೆಸಿ ಮಾರಾಟ ಮಾಡಿ ₹3 ಸಾವಿರ ಆದಾಯವನ್ನು ಪಡೆಯಲಾಗಿದೆ' ಎಂದು ವಿವರಿಸಿದರು.

> ಮಾನಸಿಕ ಅಸ್ವಸ್ಥರ ಆರೋಗ್ಯ ಸುಧಾರಿಸಲು, ಪ್ರಕೃತಿ ಚಿಕಿತ್ಸೆ ನೀಡಲಾಗುತ್ತಿದೆ, ಇದು ಸಹಕಾರಿಯಾಗಿದೆ
> **ಎಸ್. ಸಿದ್ರಾಮಣ್ಣ,** ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ


ಪ್ರಾಯೋಗಿಕ ತರಬೇತಿ: ಸಸ್ಯಗಳು ಮತ್ತು ಅವುಗಳ ಅಗತ್ಯ, ತೋಟಗಾರಿಕೆ ಉಪಕರಣಗಳ ಪರಿಚಯ, ಕಳೆ ತೆಗೆಯುವುದು, ತರಕಾರಿ ಬೆಳೆಯುವುದು ಮತ್ತು ಔಷಧೀಯ ಸಸ್ಯಗಳ ಪರಿಚಯ, ಪುಷ್ಪಗುಚ್ಛಗಳನ್ನು ತಯಾರಿಸುವ ವಿಧಾನ, ರಾಸಾಯನಿಕ ಗೊಬ್ಬರದ ಬಳಕೆ, ಉದ್ಯಾನದ ನಿರ್ವಹಣೆ, ಸಸಿಗಳ ಪೋಷಣೆ ಮಾಡುವುದು ಸೇರಿದಂತೆ ಸಮಗ್ರ ತೋಟಗಾರಿಕೆ ಕೃಷಿ ಚಟುವಟಿಕೆಗಳ ಕುರಿತು ಪ್ರಾಥಮಿಕ ತಿಳಿವಳಿಕೆ ನೀಡಲಾಗುತ್ತಿದೆ.



ಬೆಂಗಳೂರಿನ ಸಮನ್ವಯ ಸುಸ್ಥಿರ ತೋಟಗಾರಿಕೆ ಕೇಂದ್ರದಲ್ಲಿ ಮಾನಸಿಕ ಅಸ್ವಸ್ಥರಿಂದ ತೋಟಗಾರಿಕೆ ಕೃಷಿ ಚಟುವಟಿಕೆ
–ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

'ಕಹಿ ಘಟನೆಗಳನ್ನು ಮರೆಯಲು ಸಹಕಾರಿ'

'ಮಾನಸಿಕ ಅಸ್ವಸ್ಥರು ಪ್ರತಿನಿತ್ಯ ಎರಡು ಗಂಟೆ ತೋಟಗಾರಿಕೆ ತರಬೇತಿಯಲ್ಲಿ ಪಾಲ್ಗೊಳ್ಳುವುದರಿಂದ ಅವರಲ್ಲಿ ನವಚೈತನ್ಯ, ಜೀವನೋತ್ಸಾಹ, ಆಶಾಭಾವನೆ ಮೂಡುತ್ತದೆ. ಅವರ ಜೀವನದಲ್ಲಿ ನಡೆದ ಕಹಿ ಘಟನೆಗಳನ್ನು ಮರೆಯಲು ಸಹಕಾರಿಯಾಗಿದ್ದು, ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗುತ್ತಾರೆ. ತೋಟದಲ್ಲಿ ಕೆಲಸ ಮಾಡುವುದರಿಂದ ಚೆನ್ನಾಗಿ ಊಟ ಮತ್ತು ನಿದ್ದೆ ಮಾಡುತ್ತಾರೆ' ಎಂದು ರೇಣುಕಾ ಸಿದ್ಧಸಮುದ್ರಾ ತಿಳಿಸಿದರು.



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

47) ಪ್ಲಾಸಿ ಕದನದ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ

ಉತ್ತರ:– ಬಂಗಾಳದ ನವಾಬನಾದ ಅಲಿವರ್ದಿ ಖಾನನು 1756ರಲ್ಲಿ ನಿಧನನಾದನು. ನಂತರ ಅವನ ಮೊಮ್ಮಗನಾದ ಸಿರಾಜ್-ಉದ್-ದೌಲನು ಅಧಿಕಾರಕ್ಕೆ ಬಂದನು. ಯುವ ನವಾಬನಾದ ಸಿರಾಜ್-ಉದ್-ದೌಲನಿಗೂ ಮತ್ತು ಬ್ರಿಟಿಷರಿಗೂ 1757ರಲ್ಲಿ ಇತಿಹಾಸ ಪ್ರಸಿದ್ಧ ಪ್ಲಾಸಿ ಕದನ ನಡೆಯಿತು.

ಮೊದಲು ನವಾಬನ ವಿರೋಧಿಗಳಾದ ಮಾಣಿಕ್‌ಚಂದ್, ನೇಮಿಚಂದ್, ಜಗತ್‌ಸೇಠ್ (ಬಂಗಾಳದ ಲೇವಾದೇವಿಗಾರ) ಮೊದಲಾದ ಶ್ರೀಮಂತರನ್ನು ತನ್ನತ್ತ ಸೆಳೆದುಕೊಂಡನು. ನಂತರ ಸಿರಾಜನ ಸೇನಾಪತಿಯಾದ ಮೀರ್ ಜಾಫರನಿಗೆ ನವಾಬನನ್ನಾಗಿ ಮಾಡುವ ಆಮಿಷವೊಡ್ಡಿ ಯುದ್ಧದಲ್ಲಿ ತಟಸ್ಥವಾಗಿರಲು ರಾಜ್ಯವನ್ನು ಒಪ್ಪಿಸಿದನು. ಇದರಿಂದ ಧೈರ್ಯಗೊಂಡ ರಾಬರ್ಟ್ ಕ್ಲೈವನು 1757 ಜೂನ್ 23ರಂದು ಸಿರಾಜ್-ಉದ್-ದೌಲನ ಮೇಲೆ ಕದನ ಸಾರಿದನು. ಪ್ಲಾಸಿ ಎಂಬಲ್ಲಿ ನಡೆದ ಕದನದಲ್ಲಿ ಕ್ಲೈವನು ಯೋಜಿಸಿದಂತೆಯೇ ಎಲ್ಲವೂ ನಡೆಯಿತು. ಯುದ್ಧ ಭೂಮಿಯಿಂದ ತಪ್ಪಿಸಿಕೊಂಡ ಸಿರಾಜ್-ಉದ್-ದೌಲನನ್ನು ಸೆರೆಹಿಡಿದು ಕೊಲ್ಲಲಾಯಿತು

48) ಅರಣ್ಯಗಳ ಸಂರಕ್ಷಣೆಯ ವಿಧಾನಗಳನ್ನು ತಿಳಿಸಿ.

ಉತ್ತರ: ಅರಣ್ಯ ಸಂರಕ್ಷಣಾ ವಿಧಾನಗಳು:

(1) ಕಾಡ್ಗಿಚ್ಚು ಉಂಟು ಮಾಡುವ ಘರ್ಷಿತ ಮರಗಳನ್ನು ತೆಗೆಯುವುದು.

(2) ಅರಣ್ಯದ ಮರಗಳಿಗೆ ತಗಲುವ ರೋಗಗಳನ್ನು ನಿಯಂತ್ರಿಸುವುದು.

(3) ಅರಣ್ಯಗಳಲ್ಲಿ ಸಾಕು ಪ್ರಾಣಿಗಳ ಮೇಯಿಸುವಿಕೆಯನ್ನು ನಿಯಂತ್ರಿಸುವುದು

(4) ಸಾರ್ವಜನಿಕರನ್ನು ಮರ ನೆಡಲು ಪ್ರೋತ್ಸಾಹಿಸುವುದು ಮತ್ತು ಅವುಗಳ ಪ್ರಾಮುಖ್ಯತೆಯ ಬಗ್ಗೆ ತಿಳುವಳಿಕೆ ನೀಡಿ ರಕ್ಷಣೆಗೆ ಪ್ರೇರೇಪಿಸುವುದು.

(5) ಸಾಮಾಜಿಕ ಅರಣ್ಯ ಯೋಜನೆಯನ್ನು ತ್ವರಿತವಾಗಿ ಯಶಸ್ವಿಯಾಗಿ ಕಾರ್ಯಗತಗೊಳಿಸುವುದು. ಇತ್ಯಾದಿ

49) ಅಸ್ಪೃಶ್ಯತೆ ಆಚರಣೆಯಂತಹ ಸಾಮಾಜಿಕ ಪಿಡುಗನ್ನು ನಿವಾರಿಸಲು ನಿಮ್ಮ ಸಲಹೆಗಳೇನು?

ಉತ್ತರ:. ಅಸ್ಪೃಶ್ಯತೆ ಹಿಂದು ಧರ್ಮಕ್ಕಂಟಿದ ಒಂದು ಶಾಪ ಇದನ್ನು ತೊಲಗಿಸಲು ಪ್ರತಿಯೊಬ್ಬರೂ ಮುಂದಾಗಬೇಕು. ದೇವಾಲಯ, ಅಂಗಡಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕು. ಜಾತ್ರೆ, ಉತ್ಸವ, ರಾಷ್ಟ್ರೀಯ ಹಬ್ಬ, ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಬೇಕು. ಸಹಪಂಕ್ತಿ ಭೋಜನಕ್ಕೆ ಅವಕಾಶ ಮಾಡಿಕೊಡಬೇಕು. ವ್ಯಕ್ತಿಯನ್ನು ಅವನ ಜಾತಿಯಿಂದ ಅಳೆಯಬಾರದು. ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಸಮಾನವಾದ ಅವಕಾಶಗಳನ್ನು ಒದಗಿಸಿಕೊಡಬೇಕು.

50) ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆ ಏನು?

ಉತ್ತರ:– ಇವರ ಕಾಲದಲ್ಲಿ ಅಭಿವೃದ್ಧಿ ಕಾರ್ಯವು ಹೆಚ್ಚಿತು. ಚಿನ್ನದ ಗಣಿ ಸುಧಾರಣೆ, ಕಾಲೇಜು ಸ್ಥಾಪನೆ, ಮಾರಿಕಣಿವೆ ಜಲಾಶಯ ನಿರ್ಮಾಣ, ರೈಲು ಮಾರ್ಗ ನಿರ್ಮಾಣ, ಆಸ್ಪತ್ರೆ ಸ್ಥಾಪನೆ ಹಾಗೂ ಕಾವೇರಿ ಜಲಪಾತವನ್ನು ಉಪಯೋಗಿಸಿಕೊಂಡು ಶಿವನ ಸಮುದ್ರದಲ್ಲಿ ಜಲ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಕಾರ್ಯಗಳು ಆರಂಭವಾದವು. ಈ ವಿದ್ಯುತ್ ಕೇಂದ್ರದಿಂದ ಕೋಲಾರದ ಚಿನ್ನದ ಗಣಿಗೂ ನಂತರ ಬೆಂಗಳೂರಿಗೂ ವಿದ್ಯುತ್ ಸರಬರಾಜು ಮಾಡಲಾಯಿತು. ಭಾರತದಲ್ಲಿ ವಿದ್ಯುತ್ ಪಡೆದ ನಗರಗಳಲ್ಲಿ ಬೆಂಗಳೂರೇ ಮೊದಲನೆಯದು.

ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿಯೂ ಶಿಕ್ಷಣ ಶುಲ್ಕವನ್ನು ರದ್ದು ಮಾಡಲಾಯಿತು. ಇದರಿಂದ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಏಳಿಗೆಗೆ ನೆರವು ಸಿಕ್ಕಿತು. ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿಸಲಾಯಿತು. ವಿದೇಶ ವಿದ್ಯಾಭ್ಯಾಸಕ್ಕೆ ಹೋಗುವವರಿಗೆ ವಿದ್ಯಾರ್ಥಿ ವೇತನ ನೀಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು 1905ರಲ್ಲಿ ಟಾಟಾರವರ ಬೆಂಬಲದಿಂದ ಸ್ಥಾಪಿಸಲಾಯಿತು. ನೀರಾವರಿ ಸೌಲಭ್ಯಗಳನ್ನೊದಗಿಸಲು ವಿಶೇಷ ಗಮನ ಕೊಡಲಾಯಿತು. ಬೆಳಗೊಳದ ಹತ್ತಿರ ಕಾವೇರಿ ನದಿಗೆ ಅಣೆಕಟ್ಟು ಒಂದನ್ನು ಕಟ್ಟಲಾಯಿತು. ಹೊಸ ರೈಲು ಮಾರ್ಗಗಳನ್ನು ನಿರ್ಮಿಸಲಾಯಿತು. ಅನೇಕ ದೊಡ್ಡ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲಾಯಿತು. ಅವುಗಳಲ್ಲಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ಕಾಗದ ಕಾರ್ಖಾನೆ, ಮಂಡ್ಯದ ಸಕ್ಕರೆ ಕಾರ್ಖಾನೆ, ಮೈಸೂರಿನ ಗಂಧದ ಎಣ್ಣೆ ಕಾರ್ಖಾನೆ, ಬೆಂಗಳೂರಿನ ಸಾಬೂನು ಕಾರ್ಖಾನೆ, ಬೆಳಗೊಳದ ರಾಸಾಯನಿಕ ವಸ್ತುಗಳ ಮತ್ತು ಕೃತಕ ಗೊಬ್ಬರಗಳ ಕಾರ್ಖಾನೆ ಮುಂತಾದವುಗಳು. ನ್ಯಾಯ ವಿಧಾಯಕ ಸಭೆಯನ್ನು ರಚಿಸಲಾಯಿತು. ರಾಜ್ಯಾಂಗದ ಬದಲಾವಣೆಯಲ್ಲಿ ಇದೊಂದು ದೊಡ್ಡ ಹೆಜ್ಜೆಯಾಯಿತು. ಕೃಷ್ಣರಾಜ ಒಡೆಯರು ಸರಳರೂ, ಸಾತ್ವಿಕ ಸ್ವಭಾವದವರೂ, ಸಮರ್ಥ ಆಡಳಿತಗಾರರೂ ಮತ್ತು ವಿದ್ಯಾಪಕ್ಷಪಾತಿಗಳೂ ಆಗಿದ್ದರು. ಅವರಿಗೆ ಲಲಿತಕಲೆಗಳಲ್ಲಿ ತುಂಬಾ ಅಭಿರುಚಿ ಇತ್ತು. ಸಂಗೀತ ವಿದ್ವಾಂಸರುಗಳಿಗೆ ಪ್ರೋತ್ಸಾಹ ನೀಡಿದ್ದರು

51) ಕಳ್ಳ ಸಾಗಾಣಿಕೆ ಎಂದರೇನು? ನಿಯಂತ್ರಣಕ್ಕೆ ನಿಮ್ಮ ಸಲಹೆಗಳೇನು?

ಉತ್ತರ : ಸರ್ಕಾರಕ್ಕೆ ಯಾವುದೇ ಆಮದು ಸುಂಕವನ್ನು ನೀಡದೇ ಗುಪ್ತವಾಗಿ ವಿದೇಶಗಳಿಂದ ವಸ್ತುಗಳನ್ನು ತರಿಸಿಕೊಳ್ಳುವುದನ್ನು ಕಳ್ಳ ಸಾಗಾಣಿಕೆ' ಎಂದು ಕರೆಯುತ್ತಾರೆ.

ನಿಯಂತ್ರಣ ಮಾಡಲು ಕೈಗೊಳ್ಳಬಹುದಾದ ಕ್ರಮಗಳು:

1. ದೇಶದೊಳಗೆಯೇ ಪರ್ಯಾಯ ವಸ್ತುಗಳ ಪೂರೈಕೆಯಿಂದಾಗಿ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಬಹುದು.
2. ರಾಷ್ಟ್ರದ ಆಂತರಿಕ ಮಾರುಕಟ್ಟೆಯಲ್ಲಿ ಬೆಲೆಯನ್ನು ನಿಯಂತ್ರಿಸುವುದು, ಯೋಗ್ಯ ಆಮದು-ರಫ್ತು ಧೋರಣೆ, ಕಟ್ಟುನಿಟ್ಟಿನ ಕರಾವಳಿ ಗಸ್ತು ಪಡೆಯ ಕಾರ್ಯಾಚರಣೆ, ಆರ್ಥಿಕ ಅಪರಾಧಕ್ಕೆ ಕಠಿಣ ಶಿಕ್ಷೆ ವಿಧಿಸುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಬೇಕು
3. ಅಂತಾರಾಷ್ಟ್ರೀಯ ಹಾಗೂ ಆಂತರಿಕ ರಾಜ್ಯಗಳ ಪರಸ್ಪರ ವ್ಯಾಪಾರ ಒಪ್ಪಂದಗಳ ಮೂಲಕ ಕಳ್ಳ ಸಾಗಾಣಿಕೆಯನ್ನು ನಿಯಂತ್ರಿಸಬಹುದಾಗಿದೆ.
4. ಕಳ್ಳ ಸಾಗಾಣಿಕೆಯ ವಸ್ತುಗಳನ್ನು ಸಾಮಾಜಿಕವಾಗಿ ಬಹಿಷ್ಕರಿಸುವುದರ ಮೂಲಕವೂ ಇದನ್ನು ಸಾಕಷ್ಟು ನಿಯಂತ್ರಿಸಬಹುದು.

52) ಬಬರ್ ಮಣ್ಣು ಎಲ್ಲಿ ನೋಡಬಹುದಾದಿದೆ?

ಉತ್ತರ:– ಹಿಮಾಲಯದ ತಪ್ಪಲಿನಲ್ಲಿ ನದಿಗಳು ಮೈದಾನವನ್ನು ಪ್ರವೇಶಿಸುವ ಕಡೆ ಅವುಗಳು ಹೊತ್ತು ತಂದ ದಪ್ಪ ಶಿಲಾ ಚೂರುಗಳನ್ನು ಸಂಚಯಿಸಿದೆ. ಇದನ್ನೆ ಬಬರ್ ಎಂದು ಕರೆಯುವರು. ಹೀಗಾಗಿ ಇಲ್ಲಿಯೇ ಬಬರ್ ಮಣ್ಣನ್ನು ನೋಡಬಹುದಾಗಿದೆ.

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC BIOLOGY

REVISION : MODEL QUESTIONS

26) How do baculoviruses help in integrated pest management?


Ans;- Baculoviruses bring many benefits and allow reduced use of synthetic insecticides when included in integrated pest management (IPM). They are specific to their target pest and thus do not have any negative effects on plants, mammals, and non-target insects including natural enemies and pollinators

27) Ecological pyramids have limitations. Justify the statement with two reasons

Ans:- The decomposers which are a major part of the food chain, are not given any place in any trophic level. The organisms from the same species may be present in one or more trophic level but are considered in the same level.

28) Draw a neat and labelled diagram of the human sperm.

Ans:- Human sperm




29) What is Placenta?

Ans:- Placenta is an organic connection between the developing feotus and the uterine wall of the mother for purposes of physiological exchange. The whole structure of the placenta is in the form of a large disc, hence it is called metadiscoidal. The embryo is attached to the placenta through a tube called umbilical cord.

30) Draw a neat diagram of the female reproductive system and label the parts associated with the following –

(a) Production of gametes,
(b) Site of fertilization
(c) Site of implantation,
(d) Birth canal


Ans:-



a) Ovary - Production of gametes.
b) Site of Fertilization - Ampulla-Isthmus junction.
c) Site of Implantation - Endometrium.
d) Birth Cannel - Cervical canal and vaginal canal.

31) Draw a neat and labelled diagram of the Graafian follicle.

Ans:- Graafian follicle



(Contd..............)

ಮೊಬೈಲ್ ಫೋನ್
ಅತಿ ಬಳಕೆ ನಿಯಂತ್ರಿಸಲೂ ಆ್ಯಪ್ !

ನಾಗೇಶ ಜಿ. ವೈದ್ಯ

ಮೊಬೈಲ್ ಫೋನ್‌ರಹಿತ ಪ್ರಪಂಚವನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಆರಂಭದಲ್ಲಿ ಮೊಬೈಲ್ ಬಳಕೆ ಒಂದು ಹವ್ಯಾಸವಾಗಿ, ನಂತರ ಬಿಟ್ಟಿರಲಾರದ ಆಕರ್ಷಣೆಯಾಗಿ ಬಿಡುತ್ತದೆ. ಓದುವಾಗ ವಿದ್ಯಾರ್ಥಿಗಳನ್ನು ಅತಿಯಾಗಿ ಕಾಡುವುದು ಕೂಡ ಇದೇ. ಈ ಆಕರ್ಷಣೆಯಿಂದಾಗಿ, ಓದಿನ ಮೇಲೆ ಮನಸ್ಸನ್ನು ಕೇಂದ್ರೀಕರಿಸುವುದು ಕಷ್ಟವಾಗುತ್ತದೆ.

ವಿದ್ಯಾರ್ಥಿಗಳು ಓದಿಗಾಗಿ ಗಾಳಿ, ಬೆಳಕು, ಶಾಂತ ವಾತಾವರಣವಿರುವ ಸ್ಥಳವನ್ನು ಆಯ್ದುಕೊಂಡರೆ ಸಾಕಾಗದು. ಏಕಾಗ್ರತೆಯೂ ಬೇಕು. ಓದಿನ ಸಮಯದಲ್ಲಿ ಮೊಬೈಲ್ ಫೋನ್ ದೂರವಿಡಲು ದೃಢ ಸಂಕಲ್ಪ ಮಾಡಿದ್ದರೂ, ಆಗಾಗ ಬರುವ ಕರೆಗಳು ಹಾಗೂ ಸಂದೇಶಗಳು ಕಿರಿಕಿರಿಯನ್ನುಂಟು ಮಾಡುತ್ತವೆ. ಇದು ಅಧ್ಯಯನದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಮೊಬೈಲ್ ಫೋನ್ ಬಿಟ್ಟುಬಿಡುವುದು ಸುಲಭವಲ್ಲ. ಸಾಧುವೂ ಅಲ್ಲ. ಬದಲಿಗೆ, ಅದು ವಿದ್ಯಾರ್ಥಿಯ ಓದನ್ನು ವಿಚಲಿತಗೊಳಿಸದಂತೆ ನಿಭಾಯಿಸುವುದು ಜಾಣತನ. ಅದಕ್ಕೆ ಬೇಕಿರುವುದು ಇಚ್ಛಾಶಕ್ತಿ ಮತ್ತು ಸ್ವಯಂ ನಿಯಂತ್ರಣ. ಹಾಗಾಗಿ, ಓದುವ ಸಮಯದಲ್ಲಿ, ಮೊಬೈಲ್ ಫೋನ್ ಅನ್ನು ಸ್ವಿಚ್ ಆಫ್ ಮಾಡುವುದು, ಕೈಗೆ ಸಿಗದಂತೆ ದೂರ ಇರಿಸುವುದು, ಇಟ್ಟುಕೊಳ್ಳಲೇಬೇಕಾದ ಅನಿವಾರ್ಯ ಇದ್ದಲ್ಲಿ, ಏರೋಪ್ಲೇನ್ ಮೋಡ್‌ನಲ್ಲಿ ಇರಿಸುವುದು, ಮೊಬೈಲ್ ಫೋನ್ ಪರದೆಯ ಬೆಳಕು ವಿಚಲಿತಗೊಳಿಸದಂತೆ ಅದನ್ನು ತಲೆಕೆಳಗಾಗಿ ಇಡುವಂತಹ ಕ್ರಮಗಳನ್ನು ರೂಢಿಸಿಕೊಳ್ಳಬಹುದು.

ಇವುಗಳು ಸಾಧ್ಯವಾಗದಿದ್ದರೆ, ಚಿಂತೆ ಬೇಡ. ವಿಚಲಿತರಾಗದೇ ಓದನ್ನು ಮುಂದುವರಿಸಲು ಹಾಗೂ ಸ್ವಯಂ ನಿಯಂತ್ರಣದ ಕೊರತೆಯಿಂದ ವಿದ್ಯಾರ್ಥಿಗಳು ಅನಗತ್ಯ ಒತ್ತಡಕ್ಕೆ ಒಳಗಾಗುವುದನ್ನು ತಪ್ಪಿಸಲು ಕೆಲವು ಆ್ಯಪ್‌ಗಳಿವೆ.

ಫಾರೆಸ್ಟ್ : ಓದಿನ ಮೇಲೆ ನಿಮ್ಮ ಗಮನವನ್ನು ಕೇಂದ್ರೀಕರಿಸಲು ಫಾರೆಸ್ಟ್ ಒಂದು ಅತ್ಯುತ್ತಮ ಆ್ಯಪ್. ಇದರಲ್ಲಿ ನಿಮ್ಮ ಓದಿನ ಸಮಯವನ್ನು ಟೈಮರ್‌ಗೆ ಹೊಂದಿಸಬಹುದು. ಇದರಲ್ಲೊಂದು ಸಾಮಾಜಿಕ ಕಾರ್ಯವೂ ಇದೆ. ನೀವು ಆ್ಯಪ್ ಬಳಸಿದಾಗ, ಮರಗಳನ್ನು ನೆಡುವುದಕ್ಕೆ ಕಾರಣವಾಗುತ್ತೀರಿ! ಟೈಮರ್ ಅವಧಿಗಿಂತ ಮೊದಲೇ ನೀವು ಫೋನನ್ನು ಉಪಯೋಗಿಸಿದರೆ, ಮರ ಸಾಯುತ್ತದೆ. ನಿರ್ಬಂಧಿತ ಸಮಯದಲ್ಲಿ ನೀವು ಫೋನನ್ನು ಬಳಸದಿದ್ದರೆ, ನಿಮಗೆ ವರ್ಚುವಲ್ ನಾಣ್ಯಗಳು ದೊರೆಯುತ್ತದೆ. ಅದನ್ನು ನೀವು ಫಾರೆಸ್ಟ್ ಆ್ಯಪ್‌ನ ಪಾಲುದಾರಿಕೆ ಸಂಸ್ಥೆಗೆ ನೀಡಿದರೆ, ಆ ಸಂಸ್ಥೆ ನಿಮ್ಮ ಹೆಸರಲ್ಲಿ ಮರವನ್ನು ನೆಡುತ್ತದೆ. ಕ್ರಮೇಣ ನೀವು ಒಂದು ಅರಣ್ಯವನ್ನೇ ಬೆಳೆಸುತ್ತೀರಿ.

ಲೀಚ್ ಬ್ಲಾಕ್ : ಈ ಆ್ಯಪ್‌ನಲ್ಲಿ ಹಲವಾರು ಆಯ್ಕೆಗಳಿವೆ. ನೀವು ನಿಗದಿತ ಜಾಲತಾಣಗಳನ್ನು ನಿರ್ಬಂಧಿಸಬಹುದು ಅಥವಾ ನಿರ್ದಿಷ್ಟ ಸಮಯದಲ್ಲಿ ಮಾತ್ರ ಆ್ಯಪ್‌ಗಳು ಲಭ್ಯವಾಗುವಂತೆ ಸಂಯೋಜಿಸಬಹುದು. ಉದಾಹರಣೆಗೆ ಮುಂಜಾನೆ 6 ರಿಂದ 8ರವರೆಗೆ ಓದುತ್ತೀರಿ, ಆ ಬಳಿಕ ಮಧ್ಯಂತರದಲ್ಲಿ 10 ನಿಮಿಷ ವಾಟ್ಸ್ ಆ್ಯಪ್, ಫೇಸ್‌ಬುಕ್ ನೋಡಲು ಬಯಸುತ್ತೀರಿ ಎಂದಿಟ್ಟುಕೊಳ್ಳೋಣ. ಅದನ್ನು ಹಾಗೇ ಸೆಟ್ ಮಾಡಲು ಅವಕಾಶವಿದೆ. ಆ ಹತ್ತು ನಿಮಿಷಗಳ ನಂತರ ಹಿಂದೆ ನಿರ್ಧರಿಸಿದ್ದ ನಿರ್ಬಂಧಗಳು ಮುಂದುವರಿಯುತ್ತವೆ.


ಸೆಲ್ಫ್ ಕಂಟ್ರೋಲ್ : ಉಳಿದವುಗಳಿಗಿಂತ ಭಿನ್ನವಾಗಿರುವ ಈ ಆ್ಯಪ್. ಒಮ್ಮೆ ನಿರ್ಬಂಧನೆಯನ್ನು ಸೆಟ್ ಮಾಡಿದ ನಂತರ, ಅದನ್ನು ಅಳಿಸಿಹಾಕಲು ಸಾಧ್ಯವೇ ಇಲ್ಲ (ಮ್ಯಾಕೋಸ್ ಅನ್ನು ಸಂಪೂರ್ಣವಾಗಿ ಮರುಸ್ಥಾಪಿಸುವುದನ್ನು ಬಿಟ್ಟು). ಹಾಗಾಗಿ ಇದು ಕಟ್ಟು ನಿಟ್ಟಿನ ಓದನ್ನು ಪ್ರತಿಪಾದಿಸುತ್ತದೆ. ಆಗಾಗ್ಗೆ ಮೊಬೈಲ್ ಫೋನ್ ಉಪಯೋಗಿಸಲು ವಿಚಲಿತರಾಗುವವರಿಗೆ ಇದು ಹೇಳಿ ಮಾಡಿಸಿದ್ದು.

ಪಾವ್ ಬ್ಲಾಕ್ : ಓದಿಗಾಗಿ ನೀವು ನಿರ್ಧರಿಸಿರುವ ಅವಧಿಯಲ್ಲಿ ಜಾಲತಾಣಗಳಿಗೆ ಭೇಟಿ ನೀಡಿದರೆ, ದುಃಖದಲ್ಲಿರುವ ಪ್ರಾಣಿಯ ಚಿತ್ರವನ್ನು ನಿಮಗೆ ತೋರಿಸಲಾಗುತ್ತದೆ. ಮುಂದುವರಿಯಲು ಅಥವಾ ತೊರೆಯಲು ಕೆಲವು ಸೆಕೆಂಡುಗಳ ಕಾಲ ಸಮಯ ನೀಡಲಾಗುತ್ತದೆ. ನೀವು ಜಾಲತಾಣವನ್ನು ತೊರೆಯಲು ನಿರ್ಧರಿಸಿದರೆ, ಸಂತೋಷದ ಭಾವವಿರುವ ಪ್ರಾಣಿಯ ಚಿತ್ರವನ್ನು ನೋಡುತ್ತೀರಿ. ಇದು ಮಾನಸಿಕವಾಗಿ ನೀವು ಓದಿನ ಸಮಯದಲ್ಲಿ ಜಾಲತಾಣಗಳಿಗೆ ಭೇಟಿಕೊಡುವುದನ್ನು ತಡೆಯುತ್ತದೆ.

ಹೆಲ್ಪ್ ಮೀ ಫೋಕಸ್ : ಈ ಆ್ಯಪ್ ಕೂಡ ನಿಗದಿತ ಸಮಯದಲ್ಲಿ ಮೊಬೈಲ್ ಫೋನ್ ನಿಮ್ಮ ಏಕಾಗ್ರತೆಗೆ ಭಂಗ ಬರದಂತೆ ತಡೆಯುತ್ತದೆ. ಒಂದು ವೇಳೆ ನಡುವೆಯೇ ನೀವು ಫೋನನ್ನು ಕೈಗೆತ್ತಿಕೊಂಡರೆ, ಗಮನವನ್ನು ಕೇಂದ್ರೀಕರಿಸಲು ಪ್ರೇರೇಪಿಸುವ ನುಡಿಗಳನ್ನು ಪ್ರದರ್ಶಿಸುತ್ತದೆ.

ಬ್ರೇಕ್ ಫ್ರೀ : ಅಧ್ಯಯನ ಸಮಯದಲ್ಲಿ ಇಂಟರ್‌ನೆಟ್‌ಗೆ ನಿಮ್ಮ ಪ್ರವೇಶವನ್ನು ನೇರವಾಗಿ ನಿರ್ಬಂಧಿಸುವ ಈ ಆ್ಯಪ್, ನೀವು ಪ್ರತಿಯೊಂದು ಆ್ಯಪ್‌ಗಳನ್ನು ಬಳಸಿದ ಸಮಯದ ವಿವರ ಹಾಗೂ ಎಚ್ಚರಿಕೆಯನ್ನೂ ನೀಡುತ್ತದೆ. ಜೊತೆಗೆ, ನಿರ್ಬಂಧಿತ ಅವಧಿಯಲ್ಲಿ ಬರುವ ಕರೆಗಳಿಗೆ ನೀವು ಪ್ರಸ್ತುತ ಕಾರ್ಯನಿರತರಾಗಿದ್ದೀರಿ ಎಂಬ ಸ್ವಯಂಪ್ರೇರಿತ ಸಂದೇಶವನ್ನೂ ಕಳಿಸುತ್ತದೆ.

ಈ ಆ್ಯಪ್‌ಗಳನ್ನು ವಿದ್ಯಾರ್ಥಿಗಳಷ್ಟೇ ಅಲ್ಲದೇ ಮೊಬೈಲ್ ಫೋನ್ ಅತಿಯಾದ ಬಳಕೆಯನ್ನು ನಿಯಂತ್ರಿಸಬಯಸುವವರೂ ಬಳಸಬಹುದು.





ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ನಮ್ಮ ಬದುಕಿಗೆ ಒಳ್ಳೆಯ ಸ್ನೇಹಿತರು ವರವಾಗುತ್ತಾರೆ, ಕೆಟ್ಟ ಸ್ನೇಹಿತರು ಶಾಪವಾಗುತ್ತಾರೆ.

-ಹಾ.ಮಾ.ನಾಯಕ

ವೃತ್ತಿಪರ ಟೆನಿಸ್ ಕಣದಲ್ಲಿ ಕನ್ನಡಿಗ ರೋಹನ್ ಮೇರುಸಾಧನೆ

ಕನ್ನಡಿಗ ರೋಹನ್ ಬೋಪಣ್ಣ ಈಗ ವಿಶ್ವದ ಗಮನ ಸೆಳೆದಿದ್ದಾರೆ. ಈ ಟೆನಿಸ್ ಆಟಗಾರ ವೃತ್ತಿಜೀವನದ ಸಂಧ್ಯಾಕಾಲದಲ್ಲಿಯೂ ಪ್ರಖರವಾಗಿ ಬೆಳಗುತ್ತಿದ್ದಾರೆ. ಮೆಲ್ಬರ್ನ್‌ನಲ್ಲಿ ನಡೆದ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಕೊಡಗಿನ ಕಲಿ ರೋಹನ್ ಅವರು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೊತೆಗೂಡಿ ಪುರುಷರ ಡಬಲ್ಸ್ ಪ್ರಶಸ್ತಿ ಜಯಿಸಿದ್ದಾರೆ. ಅಲ್ಲದೆ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ಗ್ರ್ಯಾನ್‌ಸ್ಲಾಮ್ ಟೆನಿಸ್‌ನಲ್ಲಿ ಈ ಸಾಧನೆ ಮಾಡಿದ ಅತ್ಯಂತ ಹಿರಿಯ ವಯಸ್ಸಿನ ಆಟಗಾರನೆಂಬ ಗೌರವಕ್ಕೂ ಅವರು ಪಾತ್ರರಾಗಿದ್ದಾರೆ. 43ನೇ ವಯಸ್ಸಿನಲ್ಲಿಯೂ ಅವರು ಪಾದರಸದಂತೆ ಆಡುವ ರೀತಿ ಯುವ ಆಟಗಾರರಿಗೆ ಮಾದರಿ. ರಾಡ್ ಲೇವರ್ ಟೆನಿಸ್ ಅಂಗಳದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಇಟಲಿಯ ಸಿಮೊನ್ ಬೊಲೆಲಿ ಹಾಗೂ ಆ್ಯಂಡ್ರಿಯಾ ವಾವಸೋರಿಯವರು ಕಠಿಣ ಪೈಪೋಟಿಯೊಡ್ಡಿದ್ದರು. ರೋಹನ್ ಮತ್ತು ಮ್ಯಾಥ್ಯೂ ಜೋಡಿಯು ಅದನ್ನು ಮೀರಿ ನಿಂತಿತು. 21 ವರ್ಷಗಳಿಂದ ವೃತ್ತಿಪರ ಟೆನಿಸ್ ಆಡುತ್ತಿರುವ ರೋಹನ್, ಇದೇ ಮೊದಲ ಬಾರಿ ಪುರುಷರ ಡಬಲ್ಸ್‌ನಲ್ಲಿ ಪ್ರಶಸ್ತಿ ಜಯಿಸಿದ್ದಾರೆ. 2010 ಮತ್ತು 2023ರಲ್ಲಿ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಡಬಲ್ಸ್ ಫೈನಲ್ ಪ್ರವೇಶಿಸಿದ್ದರು. ಆದರೆ, ಗೆಲುವು ಸಾಧ್ಯವಾಗಿರಲಿಲ್ಲ. ಈ ಬಾರಿ ಅವರ ಛಲ, ತಾಳ್ಮೆ ಮತ್ತು ಕಠಿಣ ಪರಿಶ್ರಮಕ್ಕೆ ತಕ್ಕ ಫಲ ಲಭಿಸಿತು. ಈ ಸಾಧನೆ ಮಾಡಿದ ಭಾರತದ ನಾಲ್ಕನೇ ಟೆನಿಸ್ ತಾರೆಯೆಂಬ ಹೆಗ್ಗಳಿಕೆಯೂ ಅವರದ್ದಾಗಿದೆ. ಈ ಹಿಂದೆ ಪುರುಷರ ವಿಭಾಗದಲ್ಲಿ ಲಿಯಾಂಡರ್ ಪೇಸ್, ಮಹೇಶ್ ಭೂಪತಿ ಹಾಗೂ ಮಹಿಳೆಯರ ವಿಭಾಗದಲ್ಲಿ ಸಾನಿಯಾ ಮಿರ್ಜಾ ಡಬಲ್ಸ್ ಪ್ರಶಸ್ತಿ ಜಯಿಸಿದ್ದರು. ರೋಹನ್ ಅವರಿಗೆ ಒಟ್ಟಾರೆ ಇದು ಎರಡನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯಾಗಿದೆ. 2017ರಲ್ಲಿ ಅವರು ಫ್ರೆಂಚ್ ಓಪನ್ ಮಿಶ್ರ ಡಬಲ್ಸ್‌ನಲ್ಲಿ ಕೆನಡಾದ ಗ್ಯಾಬ್ರಿಲಾ ದಬ್ರೊವಸ್ಕಿ ಅವರೊಂದಿಗೆ ಕಿರೀಟ ಧರಿಸಿದ್ದರು.



ರೋಹನ್ ಬೋಪಣ್ಣ ಅವರು 43ನೇ ವಯಸ್ಸಿನಲ್ಲಿಯೂ ದೊಡ್ಡ ಸಾಧನೆ ಮಾಡಿ ಯುವಪೀಳಿಗೆಗೆ ಪ್ರೇರಣೆಯಾಗಿದ್ದಾರೆ

ವೈಯಕ್ತಿಕ ಕ್ರೀಡೆಗಳಲ್ಲಿ ದೀರ್ಘ ಕಾಲದವರೆಗೆ ದೈಹಿಕ ಕ್ಷಮತೆ ಮತ್ತು ಮಾನಸಿಕ ದೃಢತೆ ಕಾಪಾಡಿಕೊಳ್ಳುವುದು ಸುಲಭದ ಮಾತಲ್ಲ. ಅದರಲ್ಲೂ ಹಲವಾರು ಟೂರ್ನಿಗಳ ಪ್ರಮುಖ ಘಟ್ಟಗಳಲ್ಲಿ ಹೆಚ್ಚು ಸೋಲುಗಳ ಕಹಿಯುಂಡ ಮೇಲೆಯೂ ಎದೆಗುಂದದ ರೋಹನ್ ಅವರ ತಾಳ್ಮೆ ಮತ್ತು ಏಕಾಗ್ರತೆಯು ಶ್ರೇಷ್ಠ ಮಟ್ಟದ್ದು ಎನ್ನುವುದರಲ್ಲಿ ಅನುಮಾನವೇ ಇಲ್ಲ. ಕ್ರಿಕೆಟ್ ಆಟಕ್ಕೆ ಅಭಿಮಾನದ ಮಹಾಪೂರವೇ ಹರಿಯುವ ಭಾರತದಲ್ಲಿ ಇನ್ನುಳಿದ ಕ್ರೀಡೆಗಳಲ್ಲಿ ಎತ್ತರದ ಸಾಧನೆ ಮಾಡುವುದು ಸುಲಭವಲ್ಲ. ಅಂತಹ ಎಲ್ಲ ಸವಾಲುಗಳನ್ನೂ ಎದುರಿಸಿರುವ ರೋಹನ್ ಈ ಎತ್ತರಕ್ಕೆ ಬೆಳೆದಿದ್ದಾರೆ. ಹಾಕಿ ಕ್ರೀಡೆಯು ಕೊಡಗಿನಲ್ಲಿ ಕೌಟುಂಬಿಕ ಸಂಸ್ಕೃತಿಯಾಗಿದೆ. ಆದರೆ ರೋಹನ್ ಅವರು ಟೆನಿಸ್ ಆಟದತ್ತ ಒಲವು ತೋರಿದ್ದು ವಿಶೇಷ. ವೃತ್ತಿಜೀವನದುದ್ದಕ್ಕೂ ಗಾಯದ ಸಮಸ್ಯೆ, ಒತ್ತಡಗಳನ್ನು ಎದುರಿಸಿಯೂ ಅವರು ಈ ಎತ್ತರಕ್ಕೇರಿದ್ದಾರೆ. ಅವರ ಸಾಧನೆ ಮತ್ತು ವ್ಯಕ್ತಿತ್ವವು ಮತ್ತಷ್ಟು ಪ್ರತಿಭಾವಂತರು ಟೆನಿಸ್ ಕ್ರೀಡೆಯತ್ತ ಬರಲು ಪ್ರೇರಣೆಯಾಗಬೇಕು. ಈ ದಿಸೆಯಲ್ಲಿ ಅಖಿಲ ಭಾರತ ಟೆನಿಸ್ ಸಂಸ್ಥೆ (ಎಐಟಿಎ) ಒಂದಿಷ್ಟು ಉತ್ತಮ ಯೋಜನೆಗಳನ್ನು ಹಮ್ಮಿಕೊಳ್ಳಬೇಕು. ದುಬಾರಿ ಕ್ರೀಡೆಯೆಂದೇ ಹೇಳಲಾಗುವ ಟೆನಿಸ್ ಆಟವನ್ನು ಸಾಮಾನ್ಯರ ಕೈಗೆಟುಕುವಂತೆ ಮಾಡಲು ಇದು ಸಕಾಲ. ರೋಹನ್ ಅವರು ಇತ್ತೀಚೆಗಷ್ಟೇ ಡೇವಿಸ್ ಕಪ್ ಟೆನಿಸ್‌ನಿಂದ ವಿದಾಯ ಘೋಷಿಸಿದ್ದರು. ಇನ್ನೇನು ವೃತ್ತಿಪರ ಟೆನಿಸ್‌ನಿಂದಲೂ ನಿವೃತ್ತಿಯಾಗುವ ಯೋಚನೆಯಲ್ಲಿದ್ದರು. ಇದೀಗ ಅವರಿಗೆ ಈ ಗೆಲುವು ಮತ್ತಷ್ಟು ಕಾಲ ಟೆನಿಸ್ ಕಣದಲ್ಲಿ ಉಳಿಯಲು ಸ್ಫೂರ್ತಿಯಾಗಬಹುದು.

ದಿನದ ಟ್ವೀಟ್

ಯಾರು ಆಷಾಢಭೂತಿ?!



ನಿತೀಶ್ ಕುಮಾರ್ ಆಷಾಢಭೂತಿಯಲ್ಲ. ಅವರ ಸಿದ್ಧಾಂತ ಸ್ಪಷ್ಟವಾಗಿದೆ- ‘ಅಧಿಕಾರದಲ್ಲಿರಲು ಏನು ಮಾಡಬೇಕೋ ಅದನ್ನು ಮಾಡು’. ಅವರ ಹಿಂದಿನ ಯು ಟರ್ನ್ ಬಗ್ಗೆ ಮೌನ ವಹಿಸುತ್ತಾ ಅಥವಾ ಅದನ್ನು ಪ್ರಶಂಸಿಸುತ್ತಾ ಈಗಿನ ಯು ಟರ್ನ್ ವಿಷಯದಲ್ಲಿ ಅವರ ಸೈದ್ಧಾಂತಿಕ ಬದ್ಧತೆಯನ್ನು ಪ್ರಶ್ನಿಸುತ್ತಿರುವವರೇ ನಿಜವಾದ ಆಷಾಢಭೂತಿಗಳು.

ಅಜಯ್ ರೊಟ್ಟಿ, ತೆರಿಗೆ ಸಲಹೆಗಾರ

ಕಿಡಿನುಡಿ



ಜೆಡಿಎಸ್ ಯಾರ ಜೊತೆ ಹೊಂದಾಣಿಕೆ ಮಾಡಿಕೊಳ್ಳುತ್ತದೆಯೋ ಅವರಿಗೆ ಸುಖ ಇಲ್ಲ. ಅವರ ಸ್ನೇಹದಿಂದ ಗುಂಡಿಗೆ ಹೋಗುತ್ತಾರೆಯೇ ವಿನಾ ಉದ್ಧಾರ ಆಗುವುದಿಲ್ಲ. ಒಂದು ವೇಳೆ ಬಿಜೆಪಿ ಉದ್ಧಾರ ಆಗುವುದಿದ್ದರೆ ಆಗಲಿ.

ಎಂ.ವೀರಪ್ಪ ಮೊಯಿಲಿ, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಶುಕ್ರವಾರ, 29-1-1999

- **ಗ್ರಾಮ ಪಂಚಾಯಿತಿ ಕಾಯ್ದೆ ತಿದ್ದುಪಡಿ: ಸುಗ್ರೀವಾಜ್ಞೆ ಜಾರಿ**

ಬೆಂಗಳೂರು, ಜ. 28– ಗ್ರಾಮ ಪಂಚಾಯಿತಿಗಳನ್ನು ಪುನರ್‌ರಚಿಸುವ ಸಂಬಂಧ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ–1993ಕ್ಕೆ ಕೆಲವು ತಿದ್ದುಪಡಿಗಳನ್ನು ಸೂಚಿಸಿ ರಾಜ್ಯಪಾಲ ಖುರ್ಷಿದ್ ಆಲಂ ಖಾನ್ ಅವರು ಇಂದು ಸುಗ್ರೀವಾಜ್ಞೆ ಹೊರಡಿಸಿದ್ದಾರೆ.

ಈ ಸಂಬಂಧ ರಾಜ್ಯ ಸಚಿವ ಸಂಪುಟ ಸಭೆ ಮಾಡಿದ ಶಿಫಾರಸಿಗೆ ಅನುಗುಣವಾಗಿ ರಾಜ್ಯಪಾಲರು ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಸುಗ್ರೀವಾಜ್ಞೆ–1999ಕ್ಕೆ ಇಂದು ತಮ್ಮ ಅಂಕಿತ ಹಾಕಿದ್ದಾರೆ.

ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ಸೂಚಿಸಿ ರಾಜ್ಯಪಾಲರು ಸುಗ್ರೀವಾಜ್ಞೆ ಹೊರಡಿಸಿರುವ ಹಿನ್ನೆಲೆಯಲ್ಲಿ, ಪ್ರತಿ ಗ್ರಾಮ ಪಂಚಾಯಿತಿ ಕ್ಷೇತ್ರದ ವಿಸ್ತೀರ್ಣ ಮತ್ತು ಜನಸಂಖ್ಯಾ ಪ್ರಮಾಣ ಹೆಚ್ಚಾಗಲಿದೆ. ಅಲ್ಲದೆ, ಕ್ಷೇತ್ರಗಳ ಪುನರ್‌ವಿಂಗಡಣೆ, ಹೊಸ ಮತದಾರರ ಪಟ್ಟಿ ಹಾಗೂ ಕ್ಷೇತ್ರಗಳ ಮೀಸಲಾತಿಯು ಹೊಸದಾಗಿ ನಿಗದಿಯಾಗಬೇಕಿದೆ.

- **ಸೋನಿಯಾ ಗಾಂಧಿ ‘ಹಿಂದೂ’ ವಿವಾದ**

ತಿರುಪತಿ, ಜ. 28 (ಪಿಟಿಐ)– ತಿರುಪತಿ ತಿರುಮಲ ದೇವಾಲಯದ ನಿಯಮದಂತೆ, ಹಿಂದೂಗಳಲ್ಲದವರ ಪ್ರವೇಶಕ್ಕಾಗಿ ಸಲ್ಲಿಸಬೇಕಾದ ಪ್ರಮಾಣಪತ್ರಕ್ಕೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಸಹಿ ಪಡೆಯುವ ಯತ್ನ ಇಂದು ಸಣ್ಣ ಗದ್ದಲಕ್ಕೆ ಕಾರಣವಾಯಿತು.

ಸೋನಿಯಾ ಗಾಂಧಿ ಅವರು ನೆಹರೂ ಕುಟುಂಬಕ್ಕೆ ಸೇರಿದ ಕಾರಣ ಅವರು, ಹಿಂದೂ ಅಲ್ಲದವರು ಸಲ್ಲಿಸಬೇಕಾದ ಪ್ರಮಾಣಪತ್ರಕ್ಕೆ ಸಹಿ ಹಾಕಬೇಕಾದ ಅಗತ್ಯವಿಲ್ಲ ಎಂದು ಕಾಂಗ್ರೆಸ್ ನಾಯಕರು ವಾದಿಸಿದ ನಂತರ ಸೋನಿಯಾ ಅವರಿಗೆ ದೇವಾಲಯ ಪ್ರವೇಶಕ್ಕೆ ಅವಕಾಶ ನೀಡಲಾಯಿತು. ಸಾಮಾನ್ಯರಂತೆ ಸಾಲಿನಲ್ಲಿ ನಿಂತು ಸೋನಿಯಾ ಅವರು ವೆಂಕಟೇಶ್ವರನ ದರ್ಶನ ಪಡೆದರು.

50 ವರ್ಷಗಳ ಹಿಂದೆ

ಮಂಗಳವಾರ, 29-1-1974

- **‘ವೈದ್ಯಕೀಯ ಸಮಸ್ಯೆಗಳ ಪರಿಶೀಲನೆಗೆ ಉನ್ನತ ಮಟ್ಟದ ಮಂಡಲಿ ರಚನೆ’**

ನವದೆಹಲಿ, ಜ. 28– ವೈದ್ಯಕೀಯ ರಂಗದ ಎಲ್ಲ ಸಮಸ್ಯೆಗಳನ್ನೂ ರಾಷ್ಟ್ರೀಯ ಆಧಾರದ ಮೇಲೆ ಪರಿಶೀಲಿಸಲು ಉನ್ನತಾಧಿಕಾರದ ವೈದ್ಯಕೀಯ ಶಿಕ್ಷಣ ಮಂಡಲಿಯೊಂದನ್ನು ರಚಿಸುವ ಬಗ್ಗೆ ಸರ್ಕಾರವು ತೀವ್ರವಾಗಿ ಪರಿಶೀಲಿಸುತ್ತಿದೆ.

ಈ ಮಂಡಲಿಯು ವೈದ್ಯಕೀಯ ಶಿಕ್ಷಣವನ್ನು ಪ್ರಿ-ಮೆಡಿಕಲ್ ಹಂತದಿಂದ ಸ್ನಾತಕೋತ್ತರ ಪದವಿಯವರೆಗೆ ಪುನರ್‌ರೂಪಿಸುವ ವಿವಿಧ ಅಂಶಗಳನ್ನು ಅಧ್ಯಯನ ಮಾಡಲಿದೆ.

- **ಅಹಮದಾಬಾದ್‌ನಲ್ಲಿ ಶಾಂತಿ, ಕಾನೂನು ಪಾಲನೆ ಕಾರ್ಯ ಸೇನೆಯಿಂದ ಆರಂಭ**

ಅಹಮದಾಬಾದ್, ಜ. 28– ಬೆಲೆ ಏರಿಕೆ ವಿರುದ್ಧ ನಡೆದ ಚಳವಳಿಯಲ್ಲಿ ಹಿಂಸಾ ಕೃತ್ಯಗಳಿಗೆ ತುತ್ತಾದ ಇಡೀ ಅಹಮದಾಬಾದ್ ನಗರದಲ್ಲಿ ಕಾನೂನು, ಶಾಂತಿ ಪಾಲನೆಯ ವ್ಯವಸ್ಥೆಯನ್ನು ಇಂದು ಮಧ್ಯಾಹ್ನ ಸೇನೆ ವಹಿಸಿಕೊಂಡಿತು.

ಪುರಸಭೆ ವ್ಯಾಪ್ತಿಗೆ ಸೇರಿದ ಇಡೀ ಪ್ರದೇಶದಲ್ಲಿ ಅನಿರ್ದಿಷ್ಟ ಕಾಲದ ಕರ್ಫ್ಯೂ ಜಾರಿಗೆ ತರಲಾಗಿದೆ.

- **ಶ್ರೀಗಂಧದ ಮರ ಕಳ್ಳಸಾಗಾಣಿಕೆ: ಕೈಗಾರಿಕೆಗೆ ಬಿಕ್ಕಟ್ಟು**

ಬೆಂಗಳೂರು, ಜ. 28– ಕೇರಳ ರಾಜ್ಯಕ್ಕೆ ವ್ಯವಸ್ಥಿತವಾಗಿ ಶ್ರೀಗಂಧದ ಮರಗಳನ್ನು ಕದ್ದು ಸಾಗಿಸುತ್ತಿರುವ ಪರಿಣಾಮವಾಗಿ, ಕರ್ನಾಟಕ ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆಗಳು ತೀವ್ರ ಮುಗ್ಗಟ್ಟನ್ನು ಎದುರಿಸಬೇಕಾಗಿ ಬಂದಿದೆಯಲ್ಲದೆ, ಸರ್ಕಾರ ತನ್ನ ಒಂದು ಘಟಕವನ್ನು ಮುಚ್ಚುವ ಪರಿಸ್ಥಿತಿ ಬರಬಹುದು ಎಂದು ಆತಂಕಪಡಲಾಗಿದೆ.

ಕಳೆದ ವರ್ಷ ಗಂಧದ ಮರದ ಅಭಾವದಿಂದ, ಪ್ರತಿ ತಿಂಗಳು ಉತ್ಪಾದನೆಯಾಗುತ್ತಿದ್ದ ಗಂಧದ ಎಣ್ಣೆ ಪ್ರಮಾಣ ಹತ್ತು ಸಾವಿರ ಕಿಲೊ ಗ್ರಾಂನಿಂದ ಏಳು ಸಾವಿರ ಕಿಲೊ ಗ್ರಾಂಗಳಿಗೆ ಇಳಿಯಿತು. ಮೈಸೂರು ಮತ್ತು ಶಿವಮೊಗ್ಗದಲ್ಲಿರುವ ಕಾರ್ಖಾನೆಗಳಿಗೆ 2900 ಟನ್ ಮರ ಬೇಕಾಗಿದ್ದರೆ, ದೊರೆತದ್ದು ಕೇವಲ 2000 ಟನ್. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಗಂಧದೆಣ್ಣೆಗೆ ಬೇಡಿಕೆ ಹಾಗೂ ಬೆಲೆ ಹೆಚ್ಚಿದೆಯಾದರೂ, ಉತ್ಪಾದನೆ ಇಳಿಮುಖ ಆಗಿರುವುದರಿಂದ ರಾಜ್ಯಕ್ಕೆ ಹೆಚ್ಚಿನ ಲಾಭ ದೊರಕದಂತಾಗಿದೆ.

ಹಿಂದುಳಿದ ವರ್ಗಗಳ ಹೊಸ ಚಲನೆಗಳ ಹರಿಕಾರನಿಗೆ ಭಾರತರತ್ನದ ಹೊಳಪು...

ಕರ್ಪೂರಿ ಠಾಕೂರ್ ಮತ್ತು ಬಿಹಾರ ರಾಜಕಾರಣ



ವಿಶ್ಲೇಷಣೆ

ನಟರಾಜ್ ಹುಳಿಯಾರ್

ದೇಶದ ಮುಂಚೂಣಿ ಸಮಾಜವಾದಿ ನಾಯಕರಲ್ಲಿ ಒಬ್ಬರಾಗಿದ್ದ ಕರ್ಪೂರಿ ಠಾಕೂರ್ (1924-1988) ಅವರಿಗೆ ಕೇಂದ್ರ ಸರ್ಕಾರ ‘ಭಾರತರತ್ನ’ ಗೌರವ ಘೋಷಿಸಿದೆ. ಎಪ್ಪತ್ತರ ದಶಕದಲ್ಲಿ ಬಿಹಾರ ರಾಜಕಾರಣ ಹಾಗೂ ಸಮಾಜದ ಚಹರೆ ಬದಲಿಸಲೆತ್ನಿಸಿದ ಕರ್ಪೂರಿಯವರ ನೂರೊಂದನೆಯ ಹುಟ್ಟುಹಬ್ಬದ ದಿನವೇ ಭಾರತದ ಅತ್ಯುನ್ನತ ಪ್ರಶಸ್ತಿ ಪ್ರಕಟವಾಯಿತು.

ಪ್ರಶಸ್ತಿಯ ಬೆನ್ನಿಗೇ ಬಿಹಾರದಲ್ಲಿ ನಡೆದ ರಾಜಕೀಯ ಬೆಳವಣಿಗೆಗಳನ್ನು ನೋಡಿದರೆ, ಆ ರಾಜ್ಯದಲ್ಲಿ ಕಳೆದು ಹೋಗಿದ್ದ ನೆಲೆಯನ್ನು ಮರಳಿ ಪಡೆಯುವ ಬಿಜೆಪಿಯ ಗುಪ್ತ ಉದ್ದೇಶ ಸ್ಪಷ್ಟವಾಗಿದೆ. ಜಾತಿ ಜನಗಣತಿಯ ಮೂಲಕ ರಾಜ್ಯ ರಾಜಕಾರಣದ ಮೇಲೆ ಹಿಡಿತ ಸಾಧಿಸಲೆತ್ನಿಸಿದ್ದ ಜೆಡಿಯು–ಆರ್‌ಜೆಡಿ ನೇತೃತ್ವದ ಸರ್ಕಾರಕ್ಕೆ ಟಾಂಗ್ ಕೊಡುವ ಬಿಜೆಪಿಯ ಉಪಾಯ ಕುರಿತ ಗುಮಾನಿ ಭಾರತರತ್ನ ಘೋಷಣೆಯಾದ ದಿನವೇ ನಮ್ಮಂಥವರಲ್ಲಿ ಹುಟ್ಟಿತ್ತು. ಗುಮಾನಿ ನಿಜವಾಗಿದೆ. ನಿತೀಶ್ ಕುಮಾರ್ ಮತ್ತೆ ಆರ್‌ಜೆಡಿಗೆ ಕೈಕೊಟ್ಟಿದ್ದಾರೆ.

ಇದು, ಜೆಡಿಯು ಪಕ್ಷವನ್ನೇ ಒಡೆಯಲು ಯತ್ನಿಸಿದ್ದ ಬಿಜೆಪಿಗೇ ಮಂಕುಬೂದಿ ಎರಚಿದ ನಿತೀಶ್ ಆಟವೋ? ಹೆಚ್ಚಿನ ಲೋಕಸಭಾ ಸೀಟುಗಳಿಗಾಗಿ ಆರ್‌ಜೆಡಿಯನ್ನು ಬ್ಲ್ಯಾಕ್‌ಮೇಲ್ ಮಾಡುತ್ತಲೇ ನಡೆದ ಸಮಯಸಾಧಕ ಜಗಿತವೋ? ಅಂತೂ ಭಾರತದ ಅತ್ಯುನ್ನತ ಪ್ರಶಸ್ತಿ ಕ್ಷುದ್ರ ರಾಜಕಾರಣದ ಭಾಗವಾಗಿಬಿಟ್ಟಿತು; ಬಿಹಾರ ರಾಜಕೀಯದ ‘ಒಡಕಲು ಬಿಂಬ’ಗಳಿಂದಾಗಿ, ಹಿಂದುಳಿದ ವರ್ಗಗಳ ದೊಡ್ಡ ನಾಯಕನಿಗೆ ಸಿಕ್ಕ ಭಾರತರತ್ನದ ಸಂಭ್ರಮ ಕರಗಿಹೋಯಿತು.

ಅದೇನೇ ಇರಲಿ, ಎಪ್ಪತ್ತರ ದಶಕದಲ್ಲಿ ಜಯಪ್ರಕಾಶ ನಾರಾಯಣ ಅವರ ಜೊತೆಗೂಡಿ ಕಾಂಗ್ರೆಸ್ಸೇತರ ಪಕ್ಷಗಳನ್ನು ಒಗ್ಗೂಡಿಸುವ ‘ಸಮನ್ವಯ’ ರಾಜಕಾರಣ ಮಾಡಿದ್ದ ಕರ್ಪೂರಿ ಠಾಕೂರ್ ಥರದವರಿಂದ ಕೂಡ ಬಿಜೆಪಿ ಇವತ್ತು ಅಧಿಕಾರದಲ್ಲಿದೆ. ಕರ್ಪೂರಿಯವರಿಗೆ ಬಿಜೆಪಿ ಮಾಡಿದ ‘ಋಣಸಂದಾಯ’ದ ಒಳ ಉದ್ದೇಶಗಳೇನೇ ಇರಲಿ, ಭಾರತರತ್ನವು ಕರ್ಪೂರಿ ಠಾಕೂರರ ಕಮಿಟೆಡ್ ಸಮಾಜವಾದಿ ರಾಜಕಾರಣಕ್ಕೆ ಅರ್ಹ ಗೌರವ ಎಂದೇ ತಿಳಿಯಬೇಕು.

ಬಿಹಾರದಲ್ಲಿ ಪ್ರಬಲ ಹಿಂದುಳಿದ ವರ್ಗಗಳ ರಾಜಕಾರಣಕ್ಕೆ ಭದ್ರ ತಳಹದಿ ಹಾಕಿದವರು ಕರ್ಪೂರಿ ಠಾಕೂರ್. ಹಿಂದುಳಿದ ವರ್ಗಗಳ ರಾಜಕಾರಣದ ತಾತ್ವಿಕತೆ, ಸಾಧ್ಯತೆಗಳನ್ನು ವಿಸ್ತರಿಸಿದ ಅವರು ಹಿಂದುಳಿದವರು ಅಧಿಕಾರ ಹಿಡಿಯುವ ಸಮೀಕರಣಗಳನ್ನು ರೂಪಿಸಿದರು. ಅರವತ್ತರ ದಶಕದಲ್ಲಿ ಭಾರತೀಯ ಸಮಾಜವಾದದ ತಾತ್ವಿಕ ಚೌಕಟ್ಟುಗಳನ್ನು ರೂಪಿಸುತ್ತಿದ್ದ ರಾಮಮನೋಹರ ಲೋಹಿಯಾ, ಚುನಾವಣಾ ರಾಜಕಾರಣದ ಮೂಲಕ ಸಮಾಜವಾದಿ ಚಿಂತನೆಗಳನ್ನು ಕಾರ್ಯರೂಪಕ್ಕೆ ಇಳಿಸಬಲ್ಲ ನಾಯಕರನ್ನು ಹುಡುಕುತ್ತಿದ್ದರು. ಆಗ ಲೋಹಿಯಾಗೆ ಸಿಕ್ಕ ಕರ್ಪೂರಿ ಠಾಕೂರ್, ಲೋಹಿಯಾ ಪ್ರತಿಪಾದಿಸಿದ ಶೂದ್ರ ರಾಜಕಾರಣದ ತಾತ್ವಿಕತೆಯ ಫಲವಾಗಿಯೂ ಮುಖ್ಯಮಂತ್ರಿಯಾದರು; ‘ಜನನಾಯಕ’ನೆಂದೇ ಜನಪ್ರಿಯರಾದರು.

ಬಡ ಕ್ಷೌರಿಕ ಕುಟುಂಬದಿಂದ ಬಂದು 1971ರಲ್ಲಿ ಐದು ತಿಂಗಳು ಹಾಗೂ 1977-79ರ ನಡುವೆ ಒಂದೂವರೆ ವರ್ಷ ಬಿಹಾರದ ಮುಖ್ಯಮಂತ್ರಿಯಾಗಿದ್ದ ಕರ್ಪೂರಿ ಠಾಕೂರ್ ಎರಡನೆಯ ಸಲ ಅಧಿಕಾರದಲ್ಲಿದ್ದಾಗ ಲೋಹಿಯಾ ಕನಸಿನ ಸಮಾಜವಾದಿ ಪಕ್ಷದ ಪ್ರಣಾಳಿಕೆಯ ಕೆಲವಾದರೂ ಯೋಜನೆಗಳನ್ನು, ಜೆ.ಪಿ.ಯವರ ‘ಅಂತ್ಯೋದಯ’ ಕಾರ್ಯಕ್ರಮವನ್ನು ಜಾರಿಗೊಳಿಸಿದರು. ಜಾತಿ ಆಧಾರಿತ ಅಸಮಾನತೆಯನ್ನು ತೊಡೆಯದ ರಾಜಕೀಯವು ಅರ್ಥಹೀನ ಎಂದು ಲೋಹಿಯಾ ಅವರಂತೆಯೇ ನಂಬಿದ್ದ ಕರ್ಪೂರಿ, ಸಮಾಜವಾದಿ ಸಿದ್ಧಾಂತದ ಯೋಜನೆಗಳನ್ನು ರೂಪಿಸಿದರು. ಆದರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕೊಟ್ಟಾಗ, ತಮ್ಮದೇ ಜನತಾಪಕ್ಷದಲ್ಲಿದ್ದ ಪ್ರಬಲ ಜಾತಿಗಳು ಹಾಗೂ ಜನ ಸಂಘದ ಚಿತಾವಣೆಯಿಂದ ಅಧಿಕಾರ ಕಳೆದುಕೊಂಡರು.

ಇವತ್ತಿನ ಅವಕಾಶವಾದಿ ರಾಜಕಾರಣವನ್ನು ನೋಡಿ ಅಸಹ್ಯಗೊಂಡವರಿಗೆ ಕರ್ಪೂರಿ ಠಾಕೂರ್ ರಾಜಕಾರಣ ಗತಕಾಲದ ಆದರ್ಶದಂತೆ ಕಾಣತೊಡಗುತ್ತದೆ.

ಹದಿಹರೆಯದ ಕರ್ಪೂರಿ, ಗಾಂಧೀಜಿ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಚಳವಳಿಗೆ ಧುಮುಕಿ ಭೂಗತ ಹೋರಾಟಕ್ಕಿಳಿದರು. ಸಾಮಾಜಿಕ ಬದಲಾವಣೆಯ ರಾಜಕಾರಣದ ಪಾಠಗಳನ್ನು ಕಲಿತರು. ಒಮ್ಮೆ ಕರ್ಪೂರಿ ಎಂಬ ತರುಣನ ಜಬರ್‌ದಸ್ತ್ ಭಾಷಣ ಕೇಳಿದ ನಾಯಕರೊಬ್ಬರು ಅವರನ್ನು ‘ಠಾಕೂರ್’ ಎಂದರು. ಅವತ್ತಿನಿಂದ ಅವರು ಕರ್ಪೂರಿ ಠಾಕೂರ್ ಆದರು. 1952ರಲ್ಲಿ ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಿ ಬಿಹಾರದ ಪ್ರಥಮ ವಿಧಾನಸಭೆಗೆ ಆಯ್ಕೆಯಾದ ಕರ್ಪೂರಿ ಠಾಕೂರ್, ಚುನಾವಣೆಯಲ್ಲಿ ಒಮ್ಮೆ ಮಾತ್ರ ಸೋತರು. ಕೊನೆಯವರೆಗೂ ಬಿಹಾರ ವಿಧಾನಸಭೆ ಅಥವಾ ಲೋಕಸಭೆಗೆ ವಿವಿಧ ಕ್ಷೇತ್ರಗಳಿಂದ ಗೆಲ್ಲುತ್ತಲೇ ಇದ್ದರು.

ಜಾತಿಯ ಬಲವಿಲ್ಲದೆ ಸರಳ ವ್ಯಕ್ತಿತ್ವ, ಕಾರ್ಯಕರ್ತನ ನಮ್ರತೆ, ಅಧಿಕಾರದ ಒಳ-ಹೊರಗಿದ್ದಾಗ ಮಾಡಿದ ಜನಹಿತದ ಕೆಲಸಗಳ ಬಲದಿಂದಲೇ ಚುನಾವಣೆ ಗೆಲ್ಲುತ್ತಿದ್ದರು. ಅಧಿಕಾರದಲ್ಲಿದ್ದಾಗ ಕರ್ಪೂರಿ ಠಾಕೂರ್ ಜಾರಿಗೆ ತಂದ ಸಮಾಜವಾದಿ ಕಾರ್ಯಕ್ರಮಗಳು ಬಿಹಾರದ ತಬ್ಬಲಿ ಜಾತಿಗಳ ಬದುಕಿನ ದಿಕ್ಕುದೆಸೆಗಳನ್ನು ನಿರ್ಣಾಯಕವಾಗಿ ಬದಲಿಸಿದವು. ಅವರು ದೇಶದಲ್ಲೇ ಮೊದಲ ಬಾರಿಗೆ ಹಿಂದುಳಿದ ವರ್ಗ ಹಾಗೂ ಅತಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ತಂದರು. ಶಾಲಾ-ಕಾಲೇಜುಗಳಲ್ಲಿ ಎಲ್ಲ ವಿಷಯಗಳಲ್ಲೂ ಒಳ್ಳೆಯ ಅಂಕ ಪಡೆದು, ಇಂಗ್ಲಿಷಿನಲ್ಲಿ ಫೇಲಾಗುತ್ತಿದ್ದ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ‘ಪಾಸ್ ವಿಥೌಟ್ ಇಂಗ್ಲಿಷ್’ ಎಂಬ ಅವಕಾಶ ಮಾಡಿಕೊಟ್ಟರು. ಸಮಾಜವಾದವನ್ನು ನಡೆ ನುಡಿ, ಸಂವೇದನೆಗಳಲ್ಲಿ ರೂಢಿಸಿಕೊಂಡಿದ್ದರು. ಕಾವ್ಯ, ರಾಜಕಾರಣ, ಸಮಾಜ ಕುರಿತ ಪುಸ್ತಕಗಳನ್ನು ಕೊಂಡು ಓದುತ್ತಿದ್ದರು. ಕ್ಷೇತ್ರವಾರು ಜಾತಿ ಸಮೀಕರಣಗಳು, ಪಕ್ಷಗಳ ವೋಟುಗಳ ಅಂಕಿ ಅಂಶಗಳು ಅವರ ನಾಲಗೆಯ ತುದಿಯಲ್ಲಿ ಇರುತ್ತಿದ್ದವು.



ಸರ್ಕಾರಗಳು ಉರುಳಿ, ತಮ್ಮ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಮಂತ್ರಿ ಸ್ಥಾನಗಳ ಕಾಲ ಮುಗಿದು ವಿರೋಧ ಪಕ್ಷದಲ್ಲಿ ಕೂತ ತಕ್ಷಣ ಕರ್ಪೂರಿ ಹೊಸ ಪಾತ್ರಕ್ಕೆ ಸಜ್ಜಾಗುತ್ತಿದ್ದರು. ವಿರೋಧ ಪಕ್ಷದ ನಾಯಕನಾದಾಗಲೂ ಜನನಾಯಕನ ಜವಾಬ್ದಾರಿಯಿಂದಲೇ ಕೆಲಸ ಮಾಡುತ್ತಿದ್ದರು. ‘ನಾವು ವಿರೋಧ ಪಕ್ಷದಲ್ಲಿದ್ದಾಗ ಮಾಡುವ ಡಿಮ್ಯಾಂಡುಗಳಲ್ಲೂ ನೈತಿಕತೆ ಇರಬೇಕು; ಸರ್ಕಾರ ಈ ಬೇಡಿಕೆಗಳನ್ನು ಈಡೇರಿಸದಿದ್ದರೆ, ಮುಂದೆ ನಾವು ಅಧಿಕಾರಕ್ಕೆ ಬಂದಾಗ ಜಾರಿಗೊಳಿಸಬಲ್ಲಂಥ ಬೇಡಿಕೆಗಳನ್ನಷ್ಟೇ ಮಂಡಿಸಬೇಕು’ ಎನ್ನುತ್ತಿದ್ದರು. ಜನತಾಪಕ್ಷದಿಂದ ಲೋಕದಳಕ್ಕೆ ಹೋಗಿ, ಲೋಕದಲ ಬಿಟ್ಟು, ತಮ್ಮದೇ ಲೋಕದಳವನ್ನೂ ಕಟ್ಟಿದ್ದ ಕರ್ಪೂರಿ, ‘ಪಕ್ಷಾಂತರಿ’ ಎಂಬ ಟೀಕೆಗೊಳಗಾಗಿದ್ದರು. ಆದರೆ ಅವರ ಪಕ್ಷ ಬದಲಾವಣೆ ಸಮಾಜವಾದಿ ತತ್ವಗಳಿಗೆ ಹತ್ತಿರವಿದ್ದ ವಿರೋಧಪಕ್ಷಗಳ ಜೊತೆಗಷ್ಟೇ ನಡೆಯುತ್ತಿತ್ತು. ಅದು, ನಿತೀಶ್ ಥರದ ಅಧಿಕಾರದಾಹದ ಲಜ್ಜೆಗೇಡಿ ಕೂಡಾವಳಿಯಾಗಿರಲಿಲ್ಲ.

ಆದರೆ ಕರ್ಪೂರಿಯವರಿಗೆ ಭಾರತರತ್ನ ಬರುವಲ್ಲಿ ತನ್ನ ಪಾಲೂ ಇತ್ತೆಂದು ಹೇಳಿಕೊಳ್ಳಲು ಹೊರಟ ನಿತೀಶ್ ಅವರಿಂದ ಕರ್ಪೂರಿಯವರ ಆದರ್ಶ ರಾಜಕಾರಣದ ಚರ್ಚೆಯೇ ಹಿನ್ನೆಲೆಗೆ ಸರಿದುಹೋಯಿತು. ಪ್ರಶಸ್ತಿಯ ತೆರೆಮರೆ ಬಳಸಿಕೊಂಡು ಎನ್‌ಡಿಎಗೆ ಹಾರಲೆತ್ನಿಸಿದ ನಿತೀಶ್, ‘ನಾನು ಎಷ್ಟು ಕೇಳಿಕೊಂಡರೂ ಯುಪಿಎ ಸರ್ಕಾರ ಕರ್ಪೂರಿಯವರಿಗೆ ಭಾರತರತ್ನ ಕೊಟ್ಟಿರಲಿಲ್ಲ’ ಎಂದು ತಿವಿದರು. ‘ಕರ್ಪೂರಿಯವರು ಎಂದೂ ಕುಟುಂಬ ರಾಜಕಾರಣ ಮಾಡಲಿಲ್ಲ’ ಎಂದು ಅಭಿನಂದಿಸುತ್ತಲೇ ಕುಟುಂಬ ರಾಜಕಾರಣವನ್ನು ಕುಟುಕುವ ಮೂಲಕ ಒಂದು ಬಾಣವನ್ನು ಕಾಂಗ್ರೆಸ್ ಕಡೆಗೂ ಮತ್ತೊಂದು ಬಾಣವನ್ನು ಲಾಲೂ, ತೇಜಸ್ವಿ ಯಾದವರ ಕಡೆಗೂ ಬಿಟ್ಟರು. ನಾಲ್ಕೇ ದಿನಗಳಲ್ಲಿ ಬಾಣಸಮೇತ ಎನ್‌ಡಿಎಗೆ ಹಾರಿಬಿಟ್ಟರು. ಈ ಬಾಣಕ್ಕೆ ಮುಂದೆ ಕರ್ಪೂರಿ ಠಾಕೂರರ ಬಿಹಾರವೇ ತಿರುಗುಬಾಣವಾಗಬಹುದು. ಬಿಹಾರದಲ್ಲಷ್ಟೇ ಕೈ ಕೊಡುತ್ತಿದ್ದ ನಿತೀಶ್ ಈಗ ಇಡೀ ದೇಶದ ವಿರೋಧ ಪಕ್ಷಗಳ ಸಮೂಹಕ್ಕೇ ಕೈ ಕೊಟ್ಟಿರುವುದರಿಂದ ಇದು ಅವರ ಕೊನೆಯಾಟವೂ ಆಗಬಹುದು!

ಲೋಹಿಯಾ, ಜೆ.ಪಿ., ಕರ್ಪೂರಿ ಠಾಕೂರ್ ಹೆಸರು ಹೇಳುತ್ತಲೇ ಕುಟಿಲ ರಾಜಕಾರಣ ಮಾಡುವ ನಿತೀಶ್ ವರಸೆ ಕಂಡು, ಭಾರತರತ್ನ ಪಡೆದು ಹಿಗ್ಗಿದ್ದ ಕರ್ಪೂರಿಯವರ ಸಮಾಜವಾದಿ ಆತ್ಮ ವಿಷಾದದಿಂದ ಕುಗ್ಗಿರಬಹುದು! ಆದರೂ ಕರ್ಪೂರಿ ಠಾಕೂರ್ ‘ಭಾರತರತ್ನ’ ಆದ ಸಂದರ್ಭದಲ್ಲಿ ಲೋಹಿಯಾ-ಜೆ.ಪಿ-ಕರ್ಪೂರಿಯವರ ಸಮಾಜವಾದಿ ರಾಜಕಾರಣದ ಅಗತ್ಯ, ಮಹತ್ವದ ಬಗ್ಗೆ ಚರ್ಚಿಸಬೇಕು; ಹೊಸ ತಲೆಮಾರುಗಳಿಗೆ ಸಮಾಜವಿಭಜಕ ರಾಜಕಾರಣಕ್ಕಿಂತ ಸಂಪೂರ್ಣ ಭಿನ್ನವಾದ ಸಮಾಜ ನಿರ್ಮಾಣ ರಾಜಕಾರಣದ ಅರಿವನ್ನಾದರೂ ಮೂಡಿಸಬೇಕು.

ಚುರುಮುರಿ



ಮರಳಿ ಮನೆಗೆ!

• ಗುರು ಪಿ.ಎಸ್.

‘ನಾ ಬಂದೆ, ನಾ ಬಂದೆ’ ಖುಷಿಯಿಂದ ಒಳಬಂದ ಮುದ್ದಣ್ಣ.

‘ದೆಹಲಿಗೆ ಹೋಗಿ ಬಂದಾಗೊಮ್ಮೆ ಬೇರೆ ಬೇರೆ ಕಲರ್ ಶರ್ಟ್ ಹಾಕ್ಕೊಂಡು ಬರ್ತೀಯಲ್ಲಣ್ಣ, ಕಲರ್‌ಫುಲ್ ಪೊಲಿಟೀಷಿಯನ್ ಬಿಡಣ್ಣ ನೀನು’ ಹೊಗಳತೊಡಗಿದ ಪಿಎ ವಿಜಿ.

‘ನಾವೆಲ್ಲಿ ಇರ್ತೀವೋ ಅಲ್ಲಿ ನಮ್ಮತನ ತೋರಿಸಬೇಕು ವಿಜಿ, ಅದೇ ಸಂಸ್ಕಾರ, ಸಂಸ್ಕೃತಿ’.

‘ಅಣ್ಣಾ, ಈ ಪಾರ್ಟಿಗೆ ಬರೋದು ಗ್ಯಾರಂಟಿ ಅಂದ್ಮೇಲೆ ಆ ಪಾರ್ಟಿಗೇಕೆ ಹೋಗಿದ್ರಿ?’

‘ಬದಲಾವಣೆ ಜಗದ ನಿಯಮ. ಆಗ ನನಗೆ ಅವಮಾನವಾಗಿತ್ತು, ಗೌರವದಿಂದ ನಡೆಸಿಕೊಂಡಿರಲಿಲ್ಲ, ಅದಕ್ಕೆ ಹೊರಹೋಗಿದ್ದೆ’.

‘ಈಗ ಗೌರವ ವಾಪಸ್ ಕೊಟ್ರಾ ಅಣ್ಣ?’

‘ಕೊಡುತ್ತೇವೆ ಅಂತ ಹೇಳಿದ್ದಾರೆ. ನಾನ್ಯಾವಾಗಲೂ ಏನನ್ನೂ ಕೇಳುವವನಲ್ಲ. ಅದರಲ್ಲಿಯೂ ತ್ಯಾಗ ನನ್ನ ಹುಟ್ಟುಗುಣ’.

‘ಈಗೇನಣ್ಣ ತ್ಯಾಗ ಮಾಡಿದ್ರಿ?’

‘ಎಂಎಲ್‌ಸಿ ಸ್ಥಾನವನ್ನೇ ತ್ಯಾಗ ಮಾಡಿಲ್ವ’.

‘ಯಾರಿಗಾಗಿ, ಯಾವುದಕ್ಕಾಗಿ ಇಂಥ ತ್ಯಾಗ?’

‘ದೇಶಕ್ಕಾಗಿ, ಪಕ್ಷಕ್ಕಾಗಿ’ ಎಂದು ಜೋರಾಗಿ ಹೇಳಿದ ಮುದ್ದಣ್ಣ, ‘ನನಗಾಗಿ, ನನ್ನ ಕುಟುಂಬಕ್ಕಾಗಿ’ ಎಂದು ಮನಸ್ಸಲ್ಲೇ ಗುನುಗಿಕೊಂಡ.

‘ಈಗ ನಾನೇನು ಮಾಡಬೇಕಣ್ಣ?’

‘ಏನಿಲ್ಲ, ಆ ಭಾಷಣ ಬರೆದಿದ್ದ ಕಾಗದಗಳನ್ನೆಲ್ಲ ಬಿಸಾಕು. ಹೊಗಳಬೇಕಾದವರು, ಬೈಯಬೇಕಾದವರ ಪಟ್ಟಿಯನ್ನು ಅದಲು ಬದಲು ಮಾಡು, ಸಿದ್ಧಾಂತವನ್ನೂ ಬದಲಿಸಿ ಭಾಷಣ ಬರೆದಿಡು’.

‘ಅಣ್ಣ, ಇ.ಡಿ, ಐ.ಟಿ, ಸಿಬಿಐನವರಿಗೆ ಬೈತಿದ್ರಲ್ಲ, ಅದನ್ನೂ ಬದಲಿಸಬೇಕಾ?’

‘ಹೌದು, ಆ ಸಾಲುಗಳನ್ನೆಲ್ಲ ಹೊಗಳಿಕೆಯ ಪಟ್ಟಿಯಲ್ಲಿಡು’.

‘ಅಣ್ಣ, ಲೋಕಸಭೆ ಚುನಾವಣೆಗೂ ಟಿಕೆಟ್ ಕೊಡದೆ, ನಿಮ್ಮ ಗೌರವವನ್ನು ವಾಪಸ್ ಕಸಿದುಕೊಂಡುಬಿಟ್ರೆ...?’

‘ನನ್ನನ್ನ ಯಾರು ಪ್ರಧಾನಿ ಮಾಡ್ತಾರೋ ಆ ಕಡೆ ನನ್ನ ಪಯಣ’.

‘ತಗೊಳ್ಳಣ್ಣ, 28 ಬೇರೆ ಬೇರೆ ಕಲರ್ ಶರ್ಟ್‌ಗಳನ್ನ ತರಿಸಿದೀನಿ’ ಬಟ್ಟೆ ಚೀಲವನ್ನಿಟ್ಟು ಹೋದ ವಿಜಿ.

ಸಂಗತ

ಗಾಂಧಿಸ್ಮೃತಿ ಎಂಬ ಸಾತ್ವಿಕಪ್ರಜ್ಞೆ

ಗಾಂಧಿ ಎಂಬ ಅರಿವಿನ ಬೆಳಕಿನಲ್ಲಿ ನಾವೆಲ್ಲ ಆತ್ಮಾನುಸಂಧಾನದ ಮತ್ತು ಆತ್ಮಶುದ್ಧಿಯ ದಿವ್ಯಮಾರ್ಗವನ್ನು ಅರಸಬೇಕಾಗಿದೆ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಮತ್ತೆಮತ್ತೆ ಸಂದಿಗ್ಧಗೊಳ್ಳುವ ಜಗತ್ತು ಬಿಡುಗಡೆಗೆ ಮುಖ ಮಾಡುವುದು ಆ ಕಡೆಗೇ... ‘ನನ್ನ ಜೀವನವೇ ನನ್ನ ಸಂದೇಶ’ ಎಂಬ ಮಾತನ್ನು ಕೃತಿಯಲ್ಲಿಯೂ ನಿರೂಪಿಸಿ, ಸಮಕಾಲೀನ ಜಾಗತಿಕ ಸ್ಮೃತಿಯಲ್ಲಿ ಅಚ್ಚೊತ್ತಿದ ಅಪರೂಪದ ದಾರ್ಶನಿಕನತ್ತ... ಹೌದು, ಇಂದು ಸಾರ್ವಕಾಲಿಕ ಶ್ರೇಷ್ಠ ಮಾನವೀಯ ಸಂತ ಮಹಾತ್ಮ ಗಾಂಧಿ ಅವರನ್ನು ಜಗತ್ತು ಮತ್ತೊಮ್ಮೆ ಎದೆಯೊಳಗೆ ಬೆಳಕಾಗಿ ತಂದುಕೊಳ್ಳುತ್ತಿದೆ. ಸರಳತೆಯ ತತ್ವಗಳು ಮತ್ತು ಅಹಿಂಸಾಚರಣೆಯ ಬದ್ಧತೆಗಳನ್ನು ಹಾಗೆಲ್ಲಾ ಪರಿಪೂರ್ಣವಾಗಿ ಬಾಳಿ, ಬೋಧಿಸಿ, ಜನ ಸಾಮಾನ್ಯನೊಬ್ಬ ವಿಶ್ವಚರಿತ್ರೆಯಲ್ಲಿ ಅಸಾಮಾನ್ಯನಾಗಿ ಬೆಳೆದುನಿಂತ ಪರಿಯೇ ಕಾಲದ ಅಚ್ಚರಿ.

‘ನನ್ನೊಟ್ಟಿಗಿರುವ ಎಲ್ಲರಿಗೂ ಕನಿಷ್ಠ ಅಗತ್ಯಗಳು ದೊರಕುವವರೆಗೂ ನಾನು ಸರಳವಾಗಿ ಬದುಕುತ್ತೇನೆ...’ ಅಂದುಕೊಂಡ ಗಾಂಧಿ ನಿಲುವಿಗಿಂತ ದೊಡ್ಡ ಅಧ್ಯಾತ್ಮ ಏನಿದೆ ಈ ಜಗತ್ತಿನಲ್ಲಿ? ಕುಟುಂಬದೊಟ್ಟಿಗಿದ್ದು, ಜೀವನ ಸಂಗ್ರಾಮವನ್ನು ಕಂಡುಂಡು ಲೌಕಿಕದ ಲೋಭವನ್ನು ಅಂಟಿಸಿಕೊಳ್ಳದೆ, ‘ಇರಬೇಕು ಇಲ್ಲದಂತಿರಬೇಕು’ ಎಂಬಂತೆ ಸಾರ್ವಜನಿಕ ಬದುಕಲ್ಲಿ ತಾತ್ವಿಕತೆಯ ದೀಪ ಧಾರಿಯಾಗಿ ಸದಾ ಉಳಿದಿರುವುದೂ ‘ಗಾಂಧಿ’ ಎಂಬ ಸೋಜಿಗವೇ. ಬದುಕಿನುದ್ದಕ್ಕೂ ಆಡಂಬರಕ್ಕಿಂತ ಆಚರಣೆಗೆ, ವಿಜೃಂಭಣೆಗಿಂತ ವಿಚಾರಗಳಿಗೆ ಪ್ರಾಶಸ್ತ್ಯ ಸಿಗಬೇಕು, ‘ಅದ್ದೂರಿಯ ನೆಪದಲ್ಲಿ ಮಿತಿರಹಿತವಾಗಿ, ಮತಿರಹಿತವಾಗಿ ಮಾಡುವ ದುಂದುವೆಚ್ಚ ಮತ್ತು ವಸ್ತುಗಳನ್ನು ಅರ್ಧಂಬರ್ಧ ಬಳಸಿ ಬಿಸಾಕುವ ಪ್ರವೃತ್ತಿಗಳು ಅಪಾಯಕಾರಿ’ ಎಂದು ಎಚ್ಚರಿಸಿದ್ದರು ಗಾಂಧಿ.

ಗೀತೆ, ಕುರಾನ್, ಬೈಬಲ್, ಟಾಲ್‌ಸ್ಟಾಯ್ ಮತ್ತು ರಸ್ಕಿನ್‌ರ ಕೃತಿಗಳ ಆಳ ಅಧ್ಯಯನದಲ್ಲಿ ಮಾನವ ಜಗತ್ತಿನ ಅಭ್ಯುದಯವನ್ನು ಕಂಡುಕೊಂಡರು ಗಾಂಧೀಜಿ. ಬರೀ ಸ್ವಾತಂತ್ರ್ಯ ಹೋರಾಟಕ್ಕಷ್ಟೇ ಸೀಮಿತವಾಗದ ಅವರ ವ್ಯಕ್ತಿತ್ವವು ಅಸ್ಪೃಶ್ಯತೆ ನಿವಾರಣೆ, ನೀಲಿ ಬೆಳೆಗಾರರ ಸಂಕಷ್ಟ ನಿವಾರಣೆ, ಗ್ರಾಮೋದ್ಧಾರ, ಶಿಕ್ಷಣ, ಆರ್ಥಿಕತೆ, ಪರಿಸರ ರಕ್ಷಣೆ, ಪತ್ರಿಕಾರಂಗ, ಮೌಲ್ಯಗಳ ಮರುಸ್ಥಾಪನೆಯಂತಹ ಕಾರ್ಯಗಳನ್ನೂ ಒಳಗೊಂಡಿದ್ದು, ಅವರ ಪ್ರಭಾವಗಳು ಢಾಳಾಗಿವೆ.

ನೈಸರ್ಗಿಕ ಸಂಪನ್ಮೂಲಗಳನ್ನು ಹಿತಮಿತವಾಗಿ ಮತ್ತು ಜಾಗರೂಕವಾಗಿ ಬಳಸಬೇಕೆಂದು ಕರೆ ಕೊಡುತ್ತಾ ತಮ್ಮ ದೂರದೃಷ್ಟಿಯ ಚಿಂತನೆಯನ್ನು ತೆರೆದಿಟ್ಟಿದ್ದರು. ‘ಪ್ರಕೃತಿಗೆ ಮನುಷ್ಯನೂ ಸೇರಿದಂತೆ ಎಲ್ಲ ಜೀವ ರಾಶಿಗಳ ಅವಶ್ಯಕತೆಗಳನ್ನು ಪೂರೈಸುವ ಶಕ್ತಿಯಿದ್ದರೂ ದುರಾಸೆಗಳನ್ನು ಪೂರೈಸಲು ಸಾಧ್ಯವಾಗುವುದಿಲ್ಲ’ ಎಂಬ ಅವರ ದಿವ್ಯಸಂದೇಶದಲ್ಲಿ ಜೀವಪರತೆ ಧ್ವನಿಸುತ್ತದೆ. ಪ್ರಸ್ತುತ ಯಾಂತ್ರೀಕೃತ ಜಗತ್ತು ಎದುರಿಸುತ್ತಿರುವ ಸಂಕೀರ್ಣ ಸಮಸ್ಯೆಗಳೆಲ್ಲಾ ಸಂಪತ್ತಿನ ಕ್ರೋಡೀಕರಣ ಮತ್ತು ದುರಾಸೆಯ ಫಲ ಎಂದೂ ಎಚ್ಚರಿಸಿದ್ದರು.

ಪರಿಸರ ಪ್ರಜ್ಞೆಯೆಂಬುದೇ ಹುಟ್ಟಿರದ ಕಾಲದಲ್ಲಿ ‘ಪಶ್ಚಿಮದ ಆಧುನಿಕ ನಾಗರಿಕತೆ’ಯು ಉಳಿದ ಜಗತ್ತನ್ನು ತನ್ನ ಅನುಭೋಗಕ್ಕಿರುವ ಭೌತವಸ್ತು ಎಂಬಂತೆ ಪರಿಗಣಿಸುವ ಮೂಲಕ ಅವುಗಳ ಆಧ್ಯಾತ್ಮಿಕ ಅಸ್ತಿತ್ವವನ್ನೇ ನಿರ್ಲಕ್ಷಿಸುತ್ತದೆ’ ಎಂಬ ಕಟುಸತ್ಯವನ್ನು ಮನವರಿಕೆ ಮಾಡಲೆತ್ನಿಸಿದ್ದರು. ಅವರಲ್ಲಿ ಪ್ರಕೃತಿಯೊಟ್ಟಿಗಿನ ನವಿರು ಸಂಬಂಧಕ್ಕೂ ಸಕಲಜೀವರಾಶಿಗಳಲ್ಲಿನ ದೈವತ್ವಭಾವಕ್ಕೂ ಪ್ರಾಧಾನ್ಯ ಇತ್ತು. ಆತ್ಮವಿಕಸನದ ಅದ್ಭುತ ಮಾದರಿಯಂತಿದ್ದ ಅವರು ‘ನೈತಿಕ ಪ್ರಜ್ಞೆ ಇರುವ ವ್ಯಕ್ತಿಗೆ ಅಪಾರ ಶಕ್ತಿ ಪ್ರಾಪ್ತವಾಗುತ್ತದೆ’ ಎಂದೂ ನಂಬಿದ್ದರು.

ಹಳ್ಳಿಗಳು ಒಂದು ವಲಯವಾಗಿ ರೂಪುಗೊಂಡು ಸ್ವಯಂಆಡಳಿತ, ಶಾಲೆ, ಸಹಕಾರಸಂಘ, ಬ್ಯಾಂಕ್‌ಗಳನ್ನು ನಿರ್ವಹಿಸುತ್ತಾ ದೇಶ ಕಟ್ಟುವ ಇಟ್ಟಿಗೆಗಳಾಗಬೇಕು ಎಂಬುದು ರಾಷ್ಟ್ರಪಿತನ ಬಯಕೆಯಾಗಿತ್ತು. ಗ್ರಾಮೋದ್ಯೋಗವನ್ನು ಹುಟ್ಟುಹಾಕಿ ಗ್ರಾಮೋದ್ಧಾರದ ಕಲ್ಪನೆಯನ್ನೂ ರಾಮರಾಜ್ಯದ ವಾಸ್ತವಿಕ ಮಾದರಿಯನ್ನೂ ಕಟ್ಟಿಕೊಟ್ಟರು. ನಮ್ಮ ಪ್ರಕೃತಿ- ಸಂಸ್ಕೃತಿಗಳನ್ನು ಉಳಿಸಲು ಸ್ವದೇಶಿ ಕೈಉತ್ಪನ್ನಗಳನ್ನು ಬೆಂಬಲಿಸಬೇಕಾದ ಹೊತ್ತಿನಲ್ಲಿ ‘ನನ್ನನ್ನು ವಿದೇಶಿಯರು ಆಳುವುದಲ್ಲ...!’ ಎಂದೂ ಮಾರ್ಮಿಕವಾಗಿ ಎಚ್ಚರಿಸಿದ್ದರು. ಅದೀಗ ‘ಗಾಂಧಿಪ್ರಣೀತ ಆರ್ಥಿಕತೆ’ ಎಂಬ ಅಭಿವೃದ್ಧಿಯ ಅನನ್ಯ ಮಾದರಿಯಾಗಿ ಅಲ್ಲಲ್ಲಿ ಮರುಹುಟ್ಟು ಕಾಣುತ್ತಿದೆ.



ಗಾಂಧೀಜಿ ಬೋಧಿಸಿದ ದುಡಿಮೆರಹಿತ ಸಂಪತ್ತು, ಆತ್ಮಸಾಕ್ಷಿರಹಿತ ಭೋಗ, ನೀತಿರಹಿತ ವಾಣಿಜ್ಯ, ತತ್ವರಹಿತ ರಾಜಕೀಯ, ಶೀಲವಿಲ್ಲದ ಶಿಕ್ಷಣ, ತ್ಯಾಗವಿಲ್ಲದ ಪೂಜೆ, ಮಾನವೀಯತೆ ಇಲ್ಲದ ವಿಜ್ಞಾನ ಎಂಬ ಏಳು ಸಾಮಾಜಿಕ ಪಾಪಗಳನ್ನು ಜಗತ್ತು ಮರೆತರೆ ಅಪಾಯ. ಯುವಮನಸುಗಳ ಎದೆಯೊಳಗೆ ಗಾಂಧಿ-ಚಿಂತನೆಯನ್ನು ಬಿತ್ತಬೇಕಾದದ್ದು ಇಂದಿನ ಜರೂರು.

ಜಗತ್ತಿನ ಬಹುತೇಕ ದೇಶಗಳಲ್ಲಿನ ರಸ್ತೆ, ಸ್ಮಾರಕ, ಸಂಸ್ಥೆಗಳಿಗೆ ಗಾಂಧಿಯ ಹೆಸರಿಟ್ಟಿರುವುದು, ವಿವಿಧ ದೇಶಗಳ ಪ್ರಮುಖ 270 ವಿಶ್ವವಿದ್ಯಾಲಯಗಳಲ್ಲಿ ಗಾಂಧಿ ಅಧ್ಯಯನ ಕೇಂದ್ರಗಳಿರುವುದು ಅವರ ಪ್ರಸ್ತುತತೆಗೆ ಸಾಕ್ಷಿ. ಗಾಂಧೀಜಿ ಬೋಧನೆ, ತತ್ವಾದರ್ಶಗಳಿಗೆ ಸಾರ್ವಕಾಲಿಕ ಮಹತ್ವವಿದೆ. ಇತರ ದೇಶಗಳೆಲ್ಲಾ ತಮ್ಮಲ್ಲಿಗೆ ಭೇಟಿ ನೀಡುವ ಗಾಂಧಿದ್ವೇಷಿಗಳನ್ನೂ ‘ಗಾಂಧಿ ನಾಡಿನಿಂದ ಬಂದವರು’ ಎಂದೇ ಆದರಣೀಯವಾಗಿ ನಡೆಸಿಕೊಳ್ಳುತ್ತವೆ!

ಗಾಂಧಿ ಎಂಬ ಅರಿವಿನ ಬೆಳಕಿನಲ್ಲಿ ನಾವೆಲ್ಲ ಆತ್ಮಾನುಸಂಧಾನದ ಮತ್ತು ಆತ್ಮಶುದ್ಧಿಯ ದಿವ್ಯಮಾರ್ಗವನ್ನು ಅರಸಬೇಕಾದದ್ದು, ಅನುಸರಿಸಬೇಕಾದದ್ದು ಅಗತ್ಯ. ಗಾಂಧಿಸ್ಮೃತಿಯು ಸಾತ್ವಿಕಪ್ರಜ್ಞೆಯಾಗಿ, ಆತ್ಮಸಾಕ್ಷಿಯಾಗಿ ಎಲ್ಲಕಾಲಕ್ಕೂ ಉಳಿದಿರುತ್ತದೆ. ಹುತಾತ್ಮರಾದ ಎಪ್ಪತ್ತೈದು ವರ್ಷಗಳ ನಂತರವೂ ಮತ್ತೆಮತ್ತೆ ಜಗದಾತ್ಮವನ್ನು ಪ್ರಚೋದಿಸುತ್ತಾ, ಪ್ರಭಾವಿಸುತ್ತಲೇ ಇರುವ ಗಾಂಧಿ ಎಂಬ ವಿಶ್ವಚೇತನದ ನೆನಕೆಯಲ್ಲಿ...

ವಾಚಕರ ವಾಣಿ

ರಾಷ್ಟ್ರೀಯ ಹೂವಿಗೂ ರಾಜಕೀಯ ಬಣ್ಣ!

ಅರಸೀಕೆರೆಯಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಚಿಹ್ನೆಗಳನ್ನು ಬಳಸಿಕೊಂಡು ನೃತ್ಯ ಮಾಡುತ್ತಿದ್ದ ಶಾಲಾ ಮಕ್ಕಳು, ಅದರಂತೆ ಭಾರತದ ರಾಷ್ಟ್ರೀಯ ಹೂವಾದ ಕಮಲದ ಚಿಹ್ನೆಯನ್ನು ಪ್ರದರ್ಶಿಸಿದಾಗ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಆಕ್ಷೇಪ ವ್ಯಕ್ತಪಡಿಸಿದ್ದು ವರದಿಯಾಗಿದೆ (ಪ್ರ.ವಾ., ಜ. 27). ಕಮಲದ ಹೂವು ಒಂದು ಪಕ್ಷದ ಚಿಹ್ನೆಯಾಗಿರುವುದರಿಂದ ಅದನ್ನು ಸರ್ಕಾರಿ ಕಾರ್ಯಕ್ರಮಗಳಲ್ಲಿ ಬಿಂಬಿಸಬಾರದು ಎಂಬ ತಗಾದೆ ಅವರದು.

ಕಮಲವು ಬಿಜೆಪಿಯ ಚಿಹ್ನೆಯಾಗಿರಬಹುದು. ಆದರೆ, ಅದೊಂದು ರಾಷ್ಟ್ರೀಯ ಹೂವು ಎಂಬುದರ ಅರಿವು ಶಾಸಕರಿಗೆ ಇದ್ದಂತಿಲ್ಲ. ಅವರು ಪ್ರತಿನಿಧಿಸುತ್ತಿರುವ ಕಾಂಗ್ರೆಸ್ ಪಕ್ಷದ ಚಿಹ್ನೆ ಹಸ್ತ. ಇದು ಮಾನವನ ಅಂಗಗಳಲ್ಲಿ ಒಂದಾಗಿರುವುದರಿಂದ, ಕಾರ್ಯಕ್ರಮಗಳಲ್ಲಿ ಕೈ ಪ್ರದರ್ಶನ ಮಾಡಬಾರದೆಂದು ಹೇಳಿದರೆ ಹಾಸ್ಯಾಸ್ಪದ ಆಗುವುದಿಲ್ಲವೇ?

ಲಕ್ಷ್ಮೀಕಾಂತರಾಜು ಎಂ.ಜಿ., ಮಠಗ್ರಾಮ, ಗುಬ್ಬಿ

ವಸ್ತ್ರಸಂಹಿತೆಗೆ ಮಾನದಂಡವೇನು?

ಹಂಪಿಯ ವಿರೂಪಾಕ್ಷ ದೇವಸ್ಥಾನವನ್ನು ಪ್ರವೇಶಿಸುತ್ತಿದ್ದ ವ್ಯಕ್ತಿಯೊಬ್ಬರಿಗೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಅವರು ಪಂಚೆ ಉಡಿಸುವ ಮೂಲಕ ವಸ್ತ್ರಸಂಹಿತೆ ಜಾರಿ ಮಾಡಿರುವುದು ವರದಿಯಾಗಿದೆ. ವಸ್ತ್ರಸಂಹಿತೆ ಎಂದರೆ ಪಂಚೆಯೇ ಎಂದು ನಿಗದಿಪಡಿಸಿದವರು ಯಾರು? ಜೀನ್ಸ್ ಪ್ಯಾಂಟ್ ತೊಡುವುದು ಯಾವ ರೀತಿಯಲ್ಲಿ ವಸ್ತ್ರಸಂಹಿತೆಯ ಉಲ್ಲಂಘನೆಯಾಗುತ್ತದೆ? ದೇಶವಿದೇಶಗಳ ಪ್ರವಾಸಿಗರು ಹಂಪಿಗೆ ಭೇಟಿ ನೀಡುತ್ತಾರೆ. ಅವರವರ ಉಡುಗೆ ಉಟ್ಟು ಬರುತ್ತಾರೆ. ಅದರಿಂದ ದೇವಸ್ಥಾನದ ಪಾವಿತ್ರ್ಯಕ್ಕೆ ಧಕ್ಕೆ ಉಂಟಾಗುತ್ತದೆ ಎಂಬ ಹೇಳಿಕೆ ಅಸಂಬದ್ಧವಾಗಿದೆ. ದೇವಸ್ಥಾನಕ್ಕೆ ಹೋಗುವವರು ದೇವರ ದರ್ಶನಕ್ಕೆ ಹೋಗುತ್ತಾರೆಯೇ ವಿನಾ ಇತರರ ಉಡುಗೆ ನೋಡುವುದಕ್ಕಲ್ಲ. ಇಲ್ಲಿ ಪಂಚೆ ಉಡಿಸುತ್ತಿರುವ ಜಿಲ್ಲಾಧಿಕಾರಿಯೇ ಪಂಚೆ ಉಡದೇ ದೇವಸ್ಥಾನದ ಆವರಣ ಪ್ರವೇಶಿಸಿದ್ದಾರೆ!

ನಿಜವಾಗಿಯೂ ದೇವರಿಗೆ ಅಪಮಾನವಾಗುವುದು ಪಂಕ್ತಿಭೇದ ಮಾಡುವಾಗ, ಒಂದು ಸಮುದಾಯದ ಜನರಿಗೆ ದೇವಸ್ಥಾನ ಪ್ರವೇಶ ನಿರಾಕರಿಸಿದಾಗ, ದಲಿತರ ಮಗುವೊಂದು ಅಕಸ್ಮಾತ್ ದೇವಸ್ಥಾನ ಪ್ರವೇಶಿಸಿದ್ದರಿಂದ ಅದರ ಪೋಷಕರಿಗೆ ದಂಡ ವಿಧಿಸಿದಾಗ, ದೇವರ ಹೆಸರಿನಲ್ಲಿ ಮೋಸ, ವಂಚನೆ ಮಾಡಿದಾಗ, ಅನ್ಯಧರ್ಮೀಯರು ದೇವಸ್ಥಾನದ ಆವರಣದಲ್ಲಿ ವ್ಯಾಪಾರ ಮಾಡಬಾರದು ಎಂದಾಗ... ಕೆಲವು ಪ್ರಮುಖ ದೇವಾಲಯಗಳಲ್ಲಿ ‘ಶರ್ಟ್ ತೆಗೆದು ಒಳಗೆ ಬನ್ನಿ’ ಎನ್ನುವ ಭದ್ರತಾ ಸೇವಕರು ಸ್ವತಃ ಶರ್ಟ್ ತೊಟ್ಟಿರುತ್ತಾರೆ. ತುಂಡು ಉಡುಗೆ ಬಗ್ಗೆ ಮಾತನಾಡುವ ಸಂದರ್ಭದಲ್ಲಿ, ಮೇಲುಡುಪನ್ನೇ ಹಾಕದ ಅರ್ಚಕರ ಉಡುಗೆಯ ಬಗ್ಗೆಯೂ ಮಾತನಾಡಬೇಕಾಗುತ್ತದೆ ಅಲ್ಲವೇ? ಇಂತಹ ಅನೇಕ ವಿವಾದಗಳನ್ನು ಈಗಾಗಲೇ ಸೃಷ್ಟಿಸಲಾಗಿದೆ. ಇಲ್ಲಿ ಒಬ್ಬರಿಗೆ ಒಂದು ನ್ಯಾಯ, ಮತ್ತೊಬ್ಬರಿಗೆ ಇನ್ನೊಂದು ನ್ಯಾಯ ಎನ್ನುವಂತಹ ನಡವಳಿಕೆಗಳು ಕಂಡುಬರುತ್ತಿವೆ. ಈ ಕಾರಣದಿಂದ, ಸರ್ಕಾರ ಮತ್ತು ಅಧಿಕಾರಿಗಳು ವಸ್ತ್ರಸಂಹಿತೆ ಎಂಬ ಅನಗತ್ಯ ವಿವಾದದಿಂದ ದೂರವಿದ್ದು, ಜನರ ಸಮಸ್ಯೆಗಳ ಕಡೆಗೆ ಗಮನಹರಿಸುವುದು ಸೂಕ್ತ.

ಈ.ಬಸವರಾಜು, ಸಿದ್ದರಾಮರೆಡ್ಡಿ ಇಟಗಿ, ಡಾ. ಟಿ.ಗೋವಿಂದರಾಜು, ಜಗದೀಶ್, ಬೆಂಗಳೂರು

‘ಒಂದು ರಾಜ್ಯ...’ ಘೋಷವಾಕ್ಯವಷ್ಟೇ ಆಗದಿರಲಿ

ರಾಜ್ಯದ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರಿಗೆ ಸೌಲಭ್ಯ ಕಲ್ಪಿಸುವ ಬಗ್ಗೆ ಅಸಡ್ಡೆ ತೋರುವುದರ ಕುರಿತ ವರದಿಯನ್ನು (ಪ್ರ.ಜಾ., ಜ. 28) ಓದಿ ಬೇಸರವಾಯಿತು. ‘ಒಂದು ರಾಜ್ಯ ಹಲವು ಜಗತ್ತು’ ಎನ್ನುವುದು ಬರೀ ಘೋಷವಾಕ್ಯಕ್ಕೆ ಸೀಮಿತವಾಗಿದೆ. ರಾಜ್ಯದಲ್ಲಿರುವ ಬಹುತೇಕ ಪ್ರವಾಸಿ ತಾಣಗಳಲ್ಲಿ ಕನಿಷ್ಠ ಮೂಲ ಸೌಲಭ್ಯಗಳಾದ ಶುದ್ಧ ಕುಡಿಯುವ ನೀರು, ಆಹಾರದ ವ್ಯವಸ್ಥೆಯೂ ಇಲ್ಲದಿರುವಂತಹ ವಾತಾವರಣ ಇದೆ. ಅದರಲ್ಲೂ ಯುನೆಸ್ಕೊ ಸಂಭವನೀಯ ಸ್ಮಾರಕ ಸ್ಥಳಗಳ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಬೀದರ್ ಕೋಟೆಯಲ್ಲೂ ಇದೇ ಸ್ಥಿತಿ ಇರುವುದು ವಿಷಾದನೀಯ.

ಇನ್ನು ಚಿತ್ರದುರ್ಗದ ಕೋಟೆ, ಹಳೇಬೀಡು, ಬೇಲೂರು ದೇವಸ್ಥಾನಗಳಂತಹ ಕಡೆಯೂ ಪ್ರವಾಸಿಗರು ಮೂಲ ಸೌಲಭ್ಯಗಳಿಗಾಗಿ ಪರದಾಡಬೇಕಿರುವುದು, ಕೆಲವು ಸ್ಮಾರಕ ಸ್ಥಳಗಳಲ್ಲಿ ಹಸು, ಎಮ್ಮೆಗಳನ್ನು ಕಟ್ಟುತ್ತಿರುವಂತಹ ಸನ್ನಿವೇಶಗಳು ಕಂಡುಬರುತ್ತಿರುವುದು ದುರದೃಷ್ಟಕರ. ಶಿಲ್ಪಕಲೆಗಳ ನಾಡಾದ ನಮ್ಮ ಕರ್ನಾಟಕದಲ್ಲಿ ಇಂತಹ ಅವ್ಯವಸ್ಥೆಗಳಿಂದ ನೂರಾರು ದೇವಾಲಯಗಳು ನಶಿಸುವ ಹಂತವನ್ನು ತಲುಪುತ್ತಿವೆ. ಪ್ರವಾಸೋದ್ಯಮ ಇಲಾಖೆ ಇತ್ತ ಗಮನಹರಿಸಿ ತುರ್ತಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.

ಅಂಬಿಕಾ ಬಿ.ಟಿ., ಹಾಸನ

ಪ್ರಮುಖ ನಾಯಕನನ್ನು ಮರೆತದ್ದೇಕೆ?

ದಲಿತ ಸಂಘರ್ಷ ಸಮಿತಿಗೆ 50 ವರ್ಷ ತುಂಬಿದ್ದನ್ನು ಸ್ಮರಿಸಿರುವ ಗುರುಪ್ರಸಾದ್ ಕಂಟಲಗೆರೆ ಅವರ ಲೇಖನ (ಪ್ರ.ವಾ., ಜ. 24), ಸಮಿತಿಯ ಈ ಸುದೀರ್ಘ ನಡಿಗೆಯಲ್ಲಿ ಹೆಜ್ಜೆ ಗುರುತು ಮೂಡಿಸಿರುವ ಪ್ರಮುಖರಲ್ಲಿ ಒಬ್ಬರಾದ ಸಾಹಿತಿ ದೇವನೂರ ಮಹಾದೇವ ಅವರನ್ನು ಕೃತಜ್ಞತಾಪೂರ್ವಕವಾಗಿಯೂ ನೆನಪು ಮಾಡಿಕೊಳ್ಳದೇ ಇರುವುದು ದುರದೃಷ್ಟಕರ. ದಸಂಸದ ಸಾಮಾಜಿಕ ತೇರಿಗೆ ದೇವನೂರ ಅವರ ಕಾಣ್ಕೆ, ಶ್ರಮ, ತ್ಯಾಗ ಐವತ್ತರಷ್ಟೇ ಉದ್ದ, ಅಗಲವಿದೆ. ದಸಂಸವನ್ನು ಮುನ್ನಡೆಸಲು ಬಿ.ಕೃಷ್ಣಪ್ಪ ಅವರ ನಂತರ ಅಂತಃಕರಣದ, ತಾಯಿ ಹೃದಯದ ಇನ್ನೊಬ್ಬ ನಾಯಕ ಸಿಗದ ಕಾರಣ ಚಳವಳಿ ದಿಕ್ಕುತಪ್ಪಿತು ಎಂದು ಲೇಖಕರು ಹೇಳಿದ್ದಾರೆ. ದಸಂಸದ ಜತೆಗೆ ಮಾತ್ರವಲ್ಲದೆ ರಾಜಕೀಯದಲ್ಲೂ ಬರವಣಿಗೆಯಲ್ಲೂ ಸಕ್ರಿಯವಾಗಿರುವ ದೇವನೂರ ಅವರು ದಸಂಸದ ಅಂತಃಕರಣ ಅಲ್ಲವೇ? ಒಳಗೊಳ್ಳುವಿಕೆಯ ನಾಯಕ ಅಲ್ಲವೇ?


ದಲಿತ ಸಂಘರ್ಷ ಸಮಿತಿಯನ್ನು ಬಿ.ಕೃಷ್ಣಪ್ಪ ಅವರು ಹುಟ್ಟುಹಾಕಿರಬಹುದು. ಆ ಹುಟ್ಟನ್ನು ದೇವನೂರ ಮಹಾದೇವ ಅವರು ಕೈ ಹಿಡಿದು ಅಂಬೆಗಾಲಿನಿಂದ ದಾಪುಗಾಲಿನವರೆಗೂ ನಡೆಸಿಲ್ಲವೇ? ಆ ನಡಿಗೆಯ ತೂಕವನ್ನು ಲೇಖಕರು ಅರ್ಥಮಾಡಿಕೊಳ್ಳಬೇಕಿತ್ತು.

ವರಹಳ್ಳಿ ಆನಂದ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಎಲ್ಲಿದ್ದರೂ ನಿತೀಶ್ ಅವರೇ ಮುಖ್ಯಮಂತ್ರಿ

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಟೀಕಿಸುವಾಗ ಎದುರಾಳಿ ನಾಯಕರು 'ಪಲ್ಟು ಕುಮಾರ್' ಎಂದೇ ಕರೆಯುತ್ತಾರೆ. ಪದೇ–ಪದೇ ಮೈತ್ರಿಕೂಟವನ್ನು ಬದಲಿಸುವುದರಿಂದಲೇ ಈ ಗುಣನಾಮ ಅವರಿಗೆ ಬಂದೊದಗಿದೆ. ಕಳೆದ 11 ವರ್ಷಗಳಲ್ಲಿ ಅವರು ಒಟ್ಟು ನಾಲ್ಕು ಬಾರಿ ಮೈತ್ರಿಕೂಟವನ್ನು ಬದಲಿಸಿದ್ದಾರೆ. ಸೈದ್ಧಾಂತಿಕವಾಗಿ ಪರಸ್ಪರ ಸಂಬಂಧವೇ ಇಲ್ಲದಂತಹ ಪಕ್ಷಗಳ ಜತೆಗೆ ಮೈತ್ರಿ ಮಾಡಿಕೊಂಡಿದ್ದಾರೆ. ತಮಗೆ ಬೇಡವಾದಾಗ ಮೈತ್ರಿಯನ್ನು ಕಿತ್ತೊಗೆದಿದ್ದಾರೆ. ಈ ಹಿಂದಿನ ಮೂರು ವಿಧಾನಸಭಾ ಚುನಾವಣೆಗಳಲ್ಲೂ ಅವರ ಪಕ್ಷ ಬಹುಮತ ಪಡೆದಿಲ್ಲ. ಆದರೂ ನಿತೀಶ್ ಅವರೇ ಮುಖ್ಯಮಂತ್ರಿ. 2015ರಿಂದ ಈಚೆಗೆ ಬಿಹಾರದಲ್ಲಿ ಐದು ಸರ್ಕಾರಗಳು ಬದಲಾಗಿವೆ. ಐದೂ ಸರ್ಕಾರಗಳಲ್ಲಿ ಮುಖ್ಯಮಂತ್ರಿಯಾಗಿದ್ದು ನಿತೀಶ್ ಮಾತ್ರ. 2022ರಲ್ಲಿ ಬಿಜೆಪಿಯ ಸಖ್ಯ ಬಿಡುವಾಗ ಪ್ರಧಾನಿ ನರೇಂದ್ರ ಮೋದಿ ಅವರನ್ನು ನಿತೀಶ್ ಟೀಕಿಸಿದ್ದರು, ಈಗ ಮೋದಿ ಅವರನ್ನು ಹೊಗಳುತ್ತಾ ಬಿಜೆಪಿಯನ್ನು ಅಪ್ಪಿಕೊಂಡಿದ್ದಾರೆ



2013: 2014ರ ಲೋಕಸಭಾ ಚುನಾವಣೆಗೆ, ಗುಜರಾತಿನ ಅಂದಿನ ಮುಖ್ಯಮಂತ್ರಿ ನರೇಂದ್ರ ಮೋದಿ ಅವರನ್ನು ಪ್ರಧಾನಿ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಲಾಯಿತು. ಈ ಬಳಿಕ ಜೆಡಿಯು ತನ್ನ 17 ವರ್ಷದ ಸ್ನೇಹವನ್ನು ಕಿತ್ತೆಸೆದು, ಎನ್‌ಡಿಎ ಮೈತ್ರಿಕೂಟದಿಂದ ಹೊರಬಂದಿತು. 'ಶೇ 16.4ರಷ್ಟಿರುವ ಮುಸ್ಲಿಂ ಮತಬ್ಯಾಂಕ್ ಅನ್ನು ಓಲೈಸಲು ನಿತೀಶ್ ಅವರು ಎನ್‌ಡಿಎ ಮೈತ್ರಿಕೂಟ ತೊರೆದಿದ್ದಾರೆ' ಎಂದು ಆರ್‌ಜೆಡಿ ಮುಖ್ಯಸ್ಥ ಲಾಲೂ ಪ್ರಸಾದ್ ದೂರಿದ್ದರು

ನಿತೀಶ್ ಹೇಳಿದ್ದು: ಮೈತ್ರಿಕೂಟವನ್ನು ತೊರೆಯಲು ನಾವು ಕಾರಣರಲ್ಲ. ನಮಗೆ ಬೇರೆ ದಾರಿ ಇರಲಿಲ್ಲ. ಪಕ್ಷದ ಮೂಲ ಸಿದ್ಧಾಂತದ ವಿಚಾರವಾಗಿ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಬಿಜೆಪಿಯಲ್ಲಿ 'ಹೊಸ ಯುಗ' ಆರಂಭವಾಗಿದೆ. ಅಡ್ವಾಣಿ ಅವರಂಥ ಹಿರಿಯ ನಾಯಕರನ್ನು ಕಡೆಗಣಿಸಲಾಗುತ್ತಿದೆ

2015: ಮಹಾಮೈತ್ರಿಕೂಟ ರಚನೆ

2014–2015: ಎನ್‌ಡಿಎ ಜೊತೆಗಿನ ಮೈತ್ರಿಯನ್ನು ತೊರೆದ ಬಳಿಕ, ಲೋಕಸಭೆ ಚುನಾವಣೆಯಲ್ಲಿ ಜೆಡಿಯು ಪಕ್ಷವು ಬಿಹಾರದಲ್ಲಿ ಕಡಿಮೆ ಸ್ಥಾನಗಳನ್ನು ಗೆದ್ದಿತು. ಇದರ ಹೊಣೆಹೊತ್ತು ನಿತೀಶ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಜಿತಿನ್ ರಾಮ್ ಮಾಂಝಿ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದರು. ಆರ್‌ಜೆಡಿಯ ಬೆಂಬಲದೊಂದಿಗೆ ಮಾಂಝಿ ಅವರು ಬಹುಮತ ಸಾಬೀತು ಪಡಿಸಿದರು. ಇದೇ ವೇಳೆ, ಆರ್‌ಜೆಡಿ ಹಾಗೂ ಕಾಂಗ್ರೆಸ್‌ನೊಂದಿಗೆ ಜೆಡಿಯು 'ಮಹಾಮೈತ್ರಿಕೂಟ' ಮಾಡಿಕೊಂಡಿತು. ನಂತರ, 2015ರಲ್ಲಿ ನಡೆದ ಚುನಾವಣೆಯಲ್ಲಿ ಈ ಮೈತ್ರಿಯು ಭಾರಿ ಬಹುಮತ ಗಳಿಸಿತು.

ನಿತೀಶ್ ಹೇಳಿದ್ದು: ಜೆಡಿಯು ಒಂದು ಜಾತ್ಯತೀತ ಪಕ್ಷವಾಗಿದೆ. ಎಲ್ಲ ಒಳ್ಳೆಯ ಜನರಿಗೆ ಜೆಡಿಯುನ ಬಾಗಿಲು ಸದಾ ತೆರೆದೇ ಇರುತ್ತದೆ.

2017: ಮಹಾಮೈತ್ರಿ ಬಿಟ್ಟು ಬಿಜೆಪಿಗೆ ಮಣೆ

2017: ಪ್ರಧಾನಿ ನರೇಂದ್ರ ಮೋದಿ ಅವರು 2016ರಲ್ಲಿ ನೋಟು ರದ್ದತಿಯನ್ನು ಘೋಷಿಸಿದ್ದರು. ಇದೇ ವರ್ಷದಲ್ಲಿ ಜಿಎಸ್‌ಟಿಯನ್ನೂ ಜಾರಿಗೆ ತಂದರು. ಪ್ರಧಾನಿ ಮೋದಿ ಅವರು ಈ ನಡೆಗಳನ್ನು ನಿತೀಶ್ ಕುಮಾರ್ ಅವರು ಹೊಗಳಿದರು. ಆರ್‌ಜೆಡಿ ಜೊತೆಯಲ್ಲಿ ಅಸಮಾಧಾನವೂ ಹೆಚ್ಚುತ್ತಲೇ ಹೋಯಿತು. ಇದೇ ಹೊತ್ತಿನಲ್ಲಿ ಲಾಲು ಪ್ರಸಾದ್ ಹಾಗೂ ಅವರ ಕುಟುಂಬದವರಿಗೆ ಜಾರಿ ನಿರ್ದೇಶನಾಲಯವು ನೋಟಿಸ್ ನೀಡಿತು. ಈ ಎಲ್ಲದರಿಂದ ತಾನು ದೂರ ಇದ್ದೇನೆ ಹಾಗೂ ಜೊತೆಗೆ ತನ್ನದು 'ಸ್ವಚ್ಛ' ವ್ಯಕ್ತಿತ್ವ ಎಂದು ಸಾಬೀತು ಪಡಿಸಿಕೊಳ್ಳಲು, ನಿತೀಶ್ ಅವರು ಮಹಾಮೈತ್ರಿಕೂಟದಿಂದ ಹೊರಬಂದರು ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು.

ನಿತೀಶ್ ಹೇಳಿದ್ದು: ಭ್ರಷ್ಟಾಚಾರದ ವಿಚಾರದಲ್ಲಿ ರಾಜಿ ಮಾಡಿಕೊಳ್ಳಲು ಸಾಧ್ಯವೇ ಇಲ್ಲ. ಕೇಂದ್ರ ಸರ್ಕಾರದ ಸಹಯೋಗದಲ್ಲಿ ರಾಜ್ಯವು ಅಭಿವೃದ್ಧಿ ಕಾಣಲಿದೆ

2020: ಬಿಜೆಪಿ, 2022: ಮಹಾಮೈತ್ರಿ ಕೂಟ

2020–2022: 2020ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಗೆ ಹೆಚ್ಚು ಸ್ಥಾನಗಳು ಬಂದಿದ್ದವು. ಜೆಡಿಯು–ಬಿಜೆಪಿ ಒಟ್ಟಾಗಿ ಚುನಾವಣೆ ಎದುರಿಸಿದ್ದವು. ನಿತೀಶ್ ಕುಮಾರ್ ಅವರೇ ಮುಖ್ಯಮಂತ್ರಿ ಆಗಿದ್ದರು. ಬಿಜೆಪಿಗೆ ಹೆಚ್ಚು ಸ್ಥಾನ ಬಂದ ಕಾರಣ, ಬಿಜೆಪಿಯ ಇಬ್ಬರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಲಾಗಿತ್ತು. ರಾಜ್ಯದಲ್ಲಿ ಬಿಜೆಪಿಯ ಖ್ಯಾತಿಯು ಹೆಚ್ಚಾಗ ತೊಡಗಿತ್ತು, ಇದು ನಿತೀಶ್ ಕುಮಾರ್ ಅವರಿಗೆ ಹಿಡಿಸಲಿಲ್ಲ ಎನ್ನುವುದು ವಿಶ್ಲೇಷಕರ ಅಭಿಪ್ರಾಯ. 'ಪಕ್ಷವನ್ನು ಒಡೆಯಲು ಬಿಜೆಪಿ ಯತ್ನಿಸುತ್ತಿದೆ' ಎಂದು ಜೆಡಿಯು ಆರೋಪಿಸಿತ್ತು. ಈ ಎಲ್ಲ ಕಾರಣಗಳಿಂದ ನಿತೀಶ್ ಅವರು ಬಿಜೆಪಿಯೊಂದಿಗಿನ ತಮ್ಮ ಮೈತ್ರಿಯನ್ನು ಕಡಿದುಕೊಂಡರು.

ನಿತೀಶ್ ಹೇಳಿದ್ದು: 'ನನಗೆ ಹಲವಾರು ಕರೆಗಳು ಬರುತ್ತಿವೆ. ಎಲ್ಲರನ್ನೂ (ವಿರೋಧ ಪಕ್ಷಗಳನ್ನು) ಒಟ್ಟುಗೂಡಿಸುವ ಕೆಲಸ ಮಾಡುತ್ತೇವೆ' ಎಂದರು. ನೀವು ಪ್ರಧಾನಮಂತ್ರಿ ಸ್ಥಾನ ಆಕಾಂಕ್ಷಿಯೇ ಎಂದು ಪತ್ರಕರ್ತರು ಕೇಳಿದ ಪ್ರಶ್ನೆಗೆ, 'ಪ್ರಶ್ನೆ ಇರುವುದು, 2014ರಲ್ಲಿ ಗೆದ್ದವರು (ಮೋದಿ), 2024ರಲ್ಲಿಯೂ ಗೆಲ್ಲುತ್ತಾರೆಯೇ ಎಂಬುದು' ಎಂದು ಉತ್ತರಿಸಿದರು.

2024: ಮತ್ತೆ ಕಮಲದ ತೆಕ್ಕೆಗೆ

2024: ಬಿಜೆಪಿಯೊಂದಿಗಿನ ಮೈತ್ರಿಯನ್ನು ಮತ್ತೊಮ್ಮೆ ಕಡಿದುಕೊಂಡ ಬಳಿಕ, ನಿತೀಶ್ ಅವರು ವಿರೋಧ ಪಕ್ಷವನ್ನು ಒಂದುಗೂಡಿಸುವ ಕಾರ್ಯದಲ್ಲಿ ತೊಡಗಿದರು. ಕಾಂಗ್ರೆಸ್, ಟಿಎಂಸಿ, ಎಎಪಿ, ಜೆಡಿಯು, ಶಿವಸೇನಾ (ಉದ್ಧವ್ ಬಣ) ಹೀಗೆ ಒಟ್ಟು 28 ವಿರೋಧ ಪಕ್ಷಗಳು ಸೇರಿ 'ಇಂಡಿಯಾ' ಮೈತ್ರಿಕೂಟವನ್ನು ರಚಿಸಿಕೊಂಡವು. ಈ ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯಾಗಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಆಯ್ಕೆ ಮಾಡಲಾಯಿತು. ಇದು ನಿತೀಶ್ ಅವರ ಮುನಿಸಿಗೆ ಕಾರಣವಾಗಿದೆ ಎನ್ನಲಾಗುತ್ತಿದೆ. ಬಿಜೆಪಿಯೊಂದಿಗೆ ಮೈತ್ರಿ ಬೆಳೆಸಿ, 9ನೇ ಬಾರಿಗೆ ಬಿಹಾರದ ಮುಖ್ಯಮಂತ್ರಿಯಾಗಿ ಭಾನುವಾರ ಪ್ರಮಾಣವಚನ ಸ್ವೀಕರಿಸಿದರು.


ನಿತೀಶ್ ಹೇಳಿದ್ದು: ನಾನು ಹೇಗೆ ಈ 'ಮಹಾಮೈತ್ರಿಕೂಟ'ದ ಒಳಗೆ ಬಂದೆ ಎಂದು ನಿಮಗೆಲ್ಲಾ ತಿಳಿದೇ ಇದೆ. ಎಲ್ಲ ಪಕ್ಷಗಳನ್ನು ಒಟ್ಟುಗೂಡಿಸಲು ಹೇಗೆಲ್ಲಾ ಕೆಲಸ ಮಾಡಿದೆ ಎಂದೂ ನಿಮಗೆ ಗೊತ್ತಿದೆ. ಆದರೆ, ಇಲ್ಲಿ ಯಾವುದೂ ಸರಿಯಿಲ್ಲ. ಇದು ನನ್ನ ಪಕ್ಷದವರಿಗೆ ಒಳ್ಳೆಯದನ್ನು ಮಾಡುವುದಿಲ್ಲ. ಬಿಜೆಪಿ ಹಾಗೂ ಜೆಡಿಯು ಇನ್ನು ಜೊತೆಯಲ್ಲಿಯೇ ಇರಲಿದೆ

● 'ಊಸರವಳ್ಳಿಗೂ ಸ್ಪರ್ಧೆ ನೀಡುತ್ತಿದ್ದಾರೆ' ಎಂದು ನಿತೀಶ್ ಕುಮಾರ್ ಅವರನ್ನು ಕುರಿತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಹೇಳಿಕೆ ನೀಡಿದ್ದಾರೆ.

ಆಧಾರ: ಪಿಟಿಐ, ಚುನಾವಣಾ ಆಯೋಗದ ಚುನಾವಣಾ ವರದಿಗಳು

ಪ್ರಜಾವಾಣಿ ಗ್ರಾಫಿಕ್ಸ್

'ವಿಶ್ವಾಸ ಕಳೆದುಕೊಳ್ಳುತ್ತಿರುವ ಜೆಡಿಯು'




ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಪದೇ–ಪದೇ ಮೈತ್ರಿಕೂಟವನ್ನು ಬದಲಿಸಿದ ಕಾರಣ, ಆ ಪಕ್ಷವು ಬಿಹಾರದ ಜನರ ವಿಶ್ವಾಸವನ್ನು ಕಳೆದುಕೊಳ್ಳುತ್ತಲೇ ಇದೆ ಎಂಬುದು ರಾಜಕೀಯ ತಜ್ಞರ ವಿಶ್ಲೇಷಣೆ.

ನಿತೀಶ್ ಅವರ ಮೈತ್ರಿ ಬದಲಾವಣೆ ಕಸರತ್ತು ಆರಂಭವಾದ ನಂತರ ನಡೆದ ಎರಡೂ ವಿಧಾನಸಭಾ ಚುನಾವಣೆಗಳಲ್ಲಿ ಜೆಡಿಯುವಿನ ಸ್ಥಾನಗಳು ಕಡಿಮೆಯಾಗಿವೆ. ಜತೆಗೆ ಈ ಚುನಾವಣೆಗಳಲ್ಲಿ ಪಕ್ಷವು ಪಡೆದ ಮತ ಪ್ರಮಾಣವೂ ಇಳಿಕೆಯ ಹಾದಿಯಲ್ಲಿಯೇ ಇದೆ.

2010ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಯು ಸರಳ ಬಹುಮತ ಪಡೆಯದೇ ಇದ್ದರೂ, ಬಹುಮತಕ್ಕೆ ತೀರಾ ಹತ್ತಿರವೆನಿಸುವಷ್ಟು ಸ್ಥಾನಗಳನ್ನು ಗೆದ್ದಿತ್ತು. ಆನಂತರದಲ್ಲಿ 2015ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಯುವಿನ ಸ್ಥಾನ ಮತ್ತು ಮತ ಪ್ರಮಾಣ ಇಳಿಕೆಯಾಗಿತ್ತು. 2020ರ ಚುನಾವಣೆಯಲ್ಲಿ ಈ ಸಂಖ್ಯೆಗಳು 2015ಕ್ಕಿಂತಲೂ ಕಡಿಮೆಯಾಗಿದ್ದವು.

ಇಳಿಕೆ ಹಾದಿಯಲ್ಲಿ ಜೆಡಿಯುವಿನ ಮತ ಪ್ರಮಾಣ



● 2020ರ ಚುನಾವಣೆಯಲ್ಲಿ ಜೆಡಿಯು 43 ಸ್ಥಾನಗಳನ್ನು ಗೆದ್ದಿತ್ತು. ನಂತರದಲ್ಲಿ ಇಬ್ಬರು ಪಕ್ಷೇತರ ಅಭ್ಯರ್ಥಿಗಳು ಜೆಡಿಯು ಸೇರಿದ ಕಾರಣ, ಒಟ್ಟು ಸ್ಥಾನ 45ಕ್ಕೆ ಏರಿಕೆಯಾಯಿತು

ಸಿನಿ ಬಿಟ್ಸ್



ಮಿಲನಾ ನಾಗರಾಜ್, ಪೃಥ್ವಿ ಅಂಬಾರ್

ಫೆ.23ಕ್ಕೆ 'ಫಾರ್ ರಿಜಿಸ್ಟ್ರೇಷನ್'

ಪೃಥ್ವಿ ಅಂಬಾರ್ ಹಾಗೂ ಮಿಲನ ನಾಗರಾಜ್ ಮುಖ್ಯಭೂಮಿಕೆಯಲ್ಲಿರುವ 'ಫಾರ್ ರಿಜಿಸ್ಟ್ರೇಷನ್' ಚಿತ್ರ ಫೆಬ್ರುವರಿ 23ರಂದು ತೆರೆ ಕಾಣಲಿದೆ.

ಚಿತ್ರ ಬಿಡುಗಡೆ ಕುರಿತು ಮಾಹಿತಿ ನೀಡಿದ ನಿರ್ದೇಶಕ ನವೀನ್ ದ್ವಾರಕನಾಥ್, 'ನಮಗೆ ಇದೊಂದು ರೀತಿ ಸವಾಲಿನ ಸಮಯ. ಚಿತ್ರ ಬಹಳ ತಡವಾಗಿದೆ. ನಾನೇ ಅದರ ಹೊಣೆ ತೆಗೆದುಕೊಳ್ಳುತ್ತೇನೆ. ತುಂಬಾ ಕಾರಣಗಳಿಂದ ಸಿನಿಮಾ ತಡವಾಯ್ತು' ಎಂದರು.

"ದಿಯಾ'ಗೂ ಮೊದಲು ಸಹಿ ಮಾಡಿದ ಚಿತ್ರವಿದು. ನನ್ನ ತುಳು ಚಿತ್ರ ಬಿಡುಗಡೆಗೊಂಡಾಗ ನಿರ್ದೇಶಕರ ಪರಿಚಯವಾಯಿತು. ಅಲ್ಲಿಂದ ಜರ್ನಿ ಮುಂದುವರಿದಿದೆ. ಸಂಬಂಧಗಳು ಸರಿಯಾದ ರೀತಿ ರಿಜಿಸ್ಟರ್ ಆಗಬೇಕು ಎಂಬುದನ್ನು ಚಿತ್ರದಲ್ಲಿ ತುಂಬಾ ಸೂಕ್ಷ್ಮವಾಗಿ ಹೇಳಲಾಗಿದೆ" ಎಂದರು ನಟ ಪೃಥ್ವಿ ಅಂಬಾರ್.

ನವೀನ್ ರಾವ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ರವಿಶಂಕರ್, ತಬಲಾ ನಾಣಿ, ಸುಧಾ ಬೆಳವಾಡಿ ಮೊದಲಾದವರು ಚಿತ್ರದಲ್ಲಿದ್ದಾರೆ. ಆರ್.ಕೆ ಹರೀಶ್ ಸಂಗೀತ ಸಂಯೋಜನೆ, ಅಭಿಲಾಷ್ ಕಲಾತಿ–ಅಭಿಷೇಕ್ ಜಿ.ಕಾಸರಗೋಡು ಛಾಯಾಗ್ರಹಣ, ಮನು ಶೇಡ್ಗರ್ ಸಂಕಲನ ಚಿತ್ರಕ್ಕಿದೆ.

'ವಿಷ್ಣುಪ್ರಿಯ'ನಿಗೆ ಶರಣ್- ರುಕ್ಮಿಣಿ ಸಾಥ್



ಪ್ರಿಯಾ ವಾರಿಯರ್ ಶ್ರೇಯಸ್ ಮಂಜು

ಶ್ರೇಯಸ್ ಮಂಜು ಹಾಗೂ ಪ್ರಿಯಾ ವಾರಿಯರ್ ಜೋಡಿಯಾಗಿ ನಟಿಸಿರುವ 'ವಿಷ್ಣುಪ್ರಿಯ' ಚಿತ್ರದ ಹಾಡೊಂದು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಶರಣ್ ಹಾಗೂ ನಟ ರುಕ್ಮಿಣಿ ವಸಂತ ಈ ಚಿತ್ರದ 'ಚಿಗುರು ಚಿಗುರು ಸಮಯ' ಗೀತೆಯನ್ನು ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

ವಿ.ಕೆ. ಪ್ರಕಾಶ್ ನಿರ್ದೇಶನವಿದ್ದು, ನಿರ್ಮಾಪಕ ಕೆ.ಮಂಜು ತಮ್ಮ ಪುತ್ರನ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. '1990ರ ಕಾಲಘಟ್ಟದಲ್ಲಿ ನಡೆದಂತಹ ಮಾಸ್ ಲವ್ ಸ್ಟೋರಿ. ಶ್ರೇಯಸ್ ಮಂಜು ಲವರ್ ಬಾಯ್ ವಿಷ್ಣು ಆಗಿ ಕಾಣಿಸಿಕೊಂಡಿದ್ದಾರೆ. ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ಬಿಡುಗಡೆ ಮಾಡಲು ಆಲೋಚಿಸಿದ್ದೇವೆ' ಎಂದರು ನಿರ್ದೇಶಕರು.

'ಕೆಲವು ಹಾಡುಗಳು ಥಟ್ ಅಂತ ಮನಸ್ಸಿಗೆ ನಾಟುತ್ತವೆ. ಅಂತಹ ಹಾಡೊಂದು ಈ ಚಿತ್ರದಲ್ಲಿದೆ. ಇದೊಂದು ಫೀಲ್ ಗುಡ್ ಸಿನಿಮಾ. ನಿರ್ದೇಶಕರ ಕೆಲಸ ಪ್ರತಿ ಫ್ರೇಮ್‌ನಲ್ಲೂ ಕಾಣಿಸುತ್ತದೆ. ಶೀರ್ಷಿಕೆಯಲ್ಲೇ ವಿಷ್ಣು ಸರ್ ಇದ್ದಾರೆ. ಈ ವರ್ಷದ ಆರಂಭಕ್ಕೆ ಒಂದು ಅದ್ಭುತವಾದ ಸಾಂಗ್ ಸಿಕ್ಕಿದೆ' ಎಂದರು ನಟ ಶರಣ್.

ಮಲೆಯಾಳದ ಜನಪ್ರಿಯ ಸಂಗೀತ ನಿರ್ದೇಶಕ ಗೋಪಿ ಸುಂದರ್ ಅವರ ಸಂಗೀತ ಸಂಯೋಜನೆ ಈ ಚಿತ್ರದ ಹಾಡುಗಳಿಗಿದೆ. ವಿನೋದ್ ಭಾರತಿ ಅವರ ಛಾಯಾಗ್ರಹಣವಿದ್ದು, ಸುಚೇಂದ್ರ ಪ್ರಸಾದ್, ಅಚ್ಯುತ್ ಕುಮಾರ್, ನಿಹಾಲ್ ರಾಜ್ ಮೊದಲಾದವರು ತಾರಾಗಣದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ವಯಸ್ಸೆಂಬುದು ಬರಿಯ ಸಂಖ್ಯೆಯಷ್ಟೇ



ನುಡಿ ಬೆಳಗು

ಎಚ್.ಎಸ್.ನವೀನಕುಮಾರ್, ಹೊಸದುರ್ಗ

ನಿಮ್ಮ ವಯಸ್ಸೆಷ್ಟು ಎಂದು ಇಂಗ್ಲಿಷ್‌ನಲ್ಲಿ ಕೇಳುವುದಕ್ಕೆ 'How old are you?' ಎಂದು ಪ್ರಶ್ನಿಸುತ್ತಾರೆ. ನಮ್ಮ ಕರ್ನಾಟಕದ ಶ್ರೇಷ್ಠ ಶಿಕ್ಷಣ ತಜ್ಞ ಎಚ್. ನರಸಿಂಹಯ್ಯನವರನ್ನು ಈ ರೀತಿ ಪ್ರಶ್ನಿಸಿದಾಗ 'I am 75 years young' ಎಂದು ಉತ್ತರಿಸುತ್ತಿದ್ದರಂತೆ. ಅದೇ ರೀತಿ ಕನ್ನಡದ ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ಶಿವರಾಮ ಕಾರಂತರು ತಮ್ಮ 90ನೆಯ ವಯಸ್ಸಿನಲ್ಲೂ ಗೆಜ್ಜೆ ಕಟ್ಟಿ ಯಕ್ಷಗಾನ ಮಾಡುತ್ತಿದ್ದರು. ಆದರೆ ಇಂದಿನ ಬಹುಪಾಲು ಯುವಕರು 35 ವರ್ಷಕ್ಕೆ 'ಓಲ್ಡ್' ಆಗಿಬಿಟ್ಟಿರುತ್ತಾರೆ.

ವಯಸ್ಸು ಎಂಬುದು ಕೇವಲ ಸಂಖ್ಯೆ ಮಾತ್ರ. ಅದು ದೇಹಕ್ಕಾಗುತ್ತದೆಯೇ ವಿನಃ ಮನಸ್ಸಿಗಲ್ಲ. ಎಷ್ಟೇ ವಯಸ್ಸಾದರೂ ನಮ್ಮಲ್ಲಿ ಜೀವನೋತ್ಸಾಹವಿದ್ದರೆ ಸದಾ ಯುವಕರಾಗಿರಲು ಸಾಧ್ಯ. ಇದನ್ನು ಮಾಡಿ ತೋರಿಸಿದ ಹಲವಾರು ಸಾಧಕರ ಉದಾಹರಣೆಗಳು ನಮ್ಮ ನಡುವೆ ಇವೆ. ಅದರಲ್ಲಿ ತೀರಾ ಇತ್ತೀಚಿನದು ಎಂದರೆ ನಮ್ಮ ನಾಡಿನ ಹೆಮ್ಮೆಯ ಟೆನ್ನಿಸ್ ಪಟು, ಕೊಡಗಿನ ಕಲಿ ರೋಹನ್ ಬೋಪಣ್ಣ ಅವರದ್ದು.

ಈ ವರ್ಷದ ಆಸ್ಟ್ರೇಲಿಯನ್ ಓಪನ್ ಟೆನಿಸ್ ಡಬಲ್ಸ್ ಚಾಂಪಿಯನ್‌ಶಿಪ್‌ನಲ್ಲಿ ವಿಜೇತರಾದ 43 ವರ್ಷ ವಯಸ್ಸಿನ ಕನ್ನಡಿಗ ರೋಹನ್ ಬೋಪಣ್ಣ, ಗ್ರಾಂಡ್ ಸ್ಲಾಮ್ ಪ್ರಶಸ್ತಿ ಗೆದ್ದ ಅತ್ಯಂತ ಹಿರಿಯ ಆಟಗಾರ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ.

ಪಾಕಿಸ್ತಾನದ ಅಸೀಂ ಅಲ್ ಖುರೇಶಿ ಜೊತೆಗೆ 2013ರಲ್ಲಿ ಹಾಗೂ 2023ರಲ್ಲಿ ಅಮೆರಿಕನ್ ಓಪನ್ ಟೆನ್ನಿಸ್‌ನ ಪುರುಷರ ಡಬಲ್ಸ್‌ನಲ್ಲಿ ಫೈನಲ್ಸ್ ತಲುಪಿದ್ದರು. ಈ ಜೋಡಿ 'ಇಂಡೋ- ಪಾಕ್ ಎಕ್ಸ್‌ಪ್ರೆಸ್' ಎಂದೇ ಪ್ರಸಿದ್ಧವಾಗಿ, ವಿಷಮ ಸಂಬಂಧ ಹೊಂದಿರುವ ಈ ಎರಡು ದೇಶಗಳ ಕ್ರೀಡಾ ಬಾಂಧವ್ಯವನ್ನು ಬೆಸೆಯುವ ಕೆಲಸವನ್ನು ಕೂಡಾ ಮಾಡಿತ್ತು. ಐದು ತಿಂಗಳು ಒಂದೂ ಪಂದ್ಯ ಗೆಲ್ಲದೇ ತನಗೆ ವಯಸ್ಸಾಗಿದೆ ಇನ್ನು ಆಟ ಸಾಕು ಎಂದು ನಿವೃತ್ತಿಯ ಆಲೋಚನೆ ಮಾಡಿದ್ದ ಬೋಪಣ್ಣ, ತನ್ನ ವೃತ್ತಿ ಜೀವನದಲ್ಲಿ ಪುರುಷರ ಡಬಲ್ಸ್‌ನಲ್ಲಿ ಒಂದಾದರೂ ಗ್ರಾಂಡ್ ಸ್ಲಾಮ್ ಪ್ರಶಸ್ತಿ ಗೆಲ್ಲಲೇ ಬೇಕು ಎನ್ನುವ ಕನಸಿನೊಂದಿಗೆ ನಿವೃತ್ತಿಯ ವಿಚಾರ ಬಿಟ್ಟು, ತನ್ನ ವಯಸ್ಸಿಗೇ ಸವಾಲು ಹಾಕಿಕೊಂಡು ನಿರಂತರ ಅಭ್ಯಾಸದಲ್ಲಿ ತೊಡಗಿದರು.

ಬಹಳ ಹೆಚ್ಚಿನ ದೈಹಿಕ ಶ್ರಮ ಬೇಡುವ ಟೆನ್ನಿಸ್‌ನಂತಹ ಕ್ರೀಡೆಯಲ್ಲಿ ವಯಸ್ಸು 35 ದಾಟಿದ ನಂತರ ಸಕ್ರಿಯವಾಗಿ ಆಟವಾಡುವುದು ಸುಲಭದ ಕೆಲಸವಲ್ಲ. 'ನಾನು ನನ್ನ ಆಟದ 43ನೇ ಹಂತದಲ್ಲಿದ್ದೇನೆ, 43ನೇ ವಯಸ್ಸಿನಲ್ಲಲ್ಲ' ಎಂದು ನುಡಿದಿರುವ ಅವರು, ನಮ್ಮನ್ನು ನಾವು ನಂಬುವ ಆತ್ಮವಿಶ್ವಾಸವೇ ಯಶಸ್ಸೆಂಬ ರೈಲಿನ ಎಂಜಿನ್ನು ಎಂಬುದನ್ನು ಸಾಬೀತುಪಡಿಸಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಜನವರಿ 29, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಕೃಷ್ಣ ಚತುರ್ಥಿ ಅಹೋರಾತ್ರ ನಕ್ಷತ್ರ: ಪೂರ್ವಫಲ್ಗುನಿ ಗಂ. 18-57 ಯೋಗ: ಶೋಭನಾ ಗಂ. 09-43 ಕರಣ: ಬವ ಗಂ. 19-32, ಮಕರ ಮಾಸದ 14 ನೇ ದಿನ, ಮಳೆನಕ್ಷತ್ರ: ಶ್ರವಣ 2. ರಾಹುಕಾಲ : ಬೆಳಿಗ್ಗೆ 07-30 – 09-00, ಸೂರ್ಯೋದಯ : 07-01 ಸೂರ್ಯಾಸ್ತ : 06-25 ಮುಸ್ಲಿಂ ದಿನಾಂಕ : 17 ರಜಬ್, ದಿನ ವಿಶೇಷ : ಸಂಕಷ್ಟಹರ ಚತುರ್ಥಿ (ಚಂದ್ರೋದಯ : ರಾತ್ರಿ 09-25), ಅದೃಷ್ಟ ಸಂಖ್ಯೆ : 1, 4

ಮೇಷ: ಓದು ಅಥವಾ ಉದ್ಯೋಗ ಆಯ್ಕೆ ವಿಚಾರದಲ್ಲಿ ಸ್ನೇಹಿತರಿಂದ ಸೂಕ್ತ ಸಲಹೆ ದೊರೆಯಲಿದೆ. ಚಿಲ್ಲರೆ ಮಾರಾಟಗಾರರಿಗೆ ಮತ್ತು ಹೂವು, ಹಣ್ಣು ಬೆಳೆಗಾರರಿಗೆ ಶುಭ ದಿನ. ಹೊಸ ಉದ್ಯೋಗದ ಬಗ್ಗೆ ಭಯ ಬೇಡ.

ವೃಷಭ: ವೃತ್ತಿಯಲ್ಲಿ ಸ್ಪರ್ಧಾತ್ಮಕ ಪೈಪೋಟಿಯಲ್ಲಿ ಸಿಕ್ಕ ಗೆಲುವಿನಿಂದ ಹೆಚ್ಚಿನ ಸಂತೋಷ ಮತ್ತು ತೃಪ್ತಿ ಉಂಟಾಗಲಿದೆ. ಸತ್ಯವಾದ ಸಂಗತಿಗಳು ತಿಳಿಯುವುದರಿಂದ ದುಃಖಗಳು ದೂರಾಗಲಿದೆ. ಕೆಲಸದಲ್ಲಿ ಬಡ್ತಿ ಸಿಗಲಿದೆ.

ಮಿಥುನ: ಕೆಲಸಗಳಿಗೆ ಬೇಕಾದ ಸೂಕ್ತ ವ್ಯಕ್ತಿಯನ್ನು ಹುಡುಕುವಲ್ಲಿ ವಿಫಲರಾಗುವ ಮುನ್ಸೂಚನೆ ಸಿಗುವುದು. ನೃತ್ಯಾಭ್ಯಾಸ ಮುಂದುವರಿಸುವಂತೆ ಒತ್ತಾಯ ಹೆಚ್ಚಲಿದೆ. ದಂತ ವೈದ್ಯರಿಗೆ ಬೇಡಿಕೆ ಹೆಚ್ಚಾಗುತ್ತದೆ.

ಕರ್ಕಾಟಕ: ಪತ್ರಿಕಾ ವರದಿಗಾರರಿಗೆ ವಿಶೇಷ ದಿನವಾಗಿ ಜೀವನದಲ್ಲಿ ಸದಾಕಾಲ ನೆನಪಿರುವಂತೆ ಆಗಬಹುದು. ನಿಮ್ಮ ಸಲಹೆ ಸೂಚನೆಗಳನ್ನು ಒಪ್ಪುವಂತೆ ವ್ಯಕ್ತಿಯ ಮನಃ ಪರಿವರ್ತನೆ ಮಾಡುವಲ್ಲಿ ಸಫಲರಾಗುತ್ತೀರಿ.

ಸಿಂಹ: ಕುಟುಂಬ ನಿರ್ವಹಣೆಯಲ್ಲಿ ವಿಪರೀತ ಖರ್ಚು ಕಾಣಿಸಲಿದೆ. ಆದಾಯಕ್ಕೆ ಕೊರತೆ ಇರದು. ವೃತ್ತಿಪರ ಗಮನಹರಿಸಿದಲ್ಲಿ ಬಹುನಿರೀಕ್ಷಿತವಾದ ಬೆಳವಣಿಗೆಗಳು ಇರುತ್ತದೆ. ನಿಮ್ಮ ಬಯಕೆಗಳು ಈಡೇರುವುದು.

ಕನ್ಯಾ: ಮೇಲಧಿಕಾರಿಗಳು ನಿಮ್ಮೊಂದಿಗಿದ್ದಾರೆ ಎಂಬ ಭರವಸೆಯಿಂದ ಕೆಲಸವನ್ನು ಮಾಡದಿರಿ. ಆಶಾ ದಾಯಕ ಭಾವನೆಗಳಿಂದ ನೆಮ್ಮದಿ, ಬೆಳವಣಿಗೆಯು ಗೋಚರಕ್ಕೆ ಬರಲಿದೆ. ಗುತ್ತಿಗೆದಾರರಿಗೆ ಹೆಚ್ಚಿನ ಕೆಲಸ ಇರಲಿದೆ.

ತುಲಾ: ಉನ್ನತ ಅಧಿಕಾರಿಗಳ ದಿಢೀರ್ ಭೇಟಿಯಿಂದ ಕೆಲಸ ಕಾರ್ಯಗಳು ಏರುಪೇರಾಗುವುದು. ಸೋದರರೊಂದಿಗಿರುವ ವಿರಸ ಕಡಿಮೆ ಮಾಡಿಕೊಳ್ಳಿ. ಮನೆಯಲ್ಲಿ ಅನುಕೂಲಕರ ಸನ್ನಿವೇಶ ನಿರ್ಮಾಣವಾಗಲಿದೆ.

ವೃಶ್ಚಿಕ: ಸ್ವಂತ ಉದ್ಯಮದಲ್ಲಿರುವವರು ತಮ್ಮ ಕಾರ್ಯಕ್ಷೇತ್ರವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದರಲ್ಲಿ ಬಹಳ ಉತ್ಸಾಹ ತೋರಿ ಸಫಲತೆಯನ್ನು ಹೊಂದಬಹುದು. ಆಹಾರ ಪದ್ಧತಿ ಬದಲಿಸಿಕೊಳ್ಳುವುದು ಸರಿ ಎನಿಸುವುದು.

ಧನು: ಕಾರ್ಯಕ್ಷೇತ್ರದಲ್ಲಿ ಉಂಟಾದ ಸನ್ನಿವೇಶವನ್ನು ಅನುಕೂಲಕ್ಕೆ ತಕ್ಕಂತೆ ಬದಲಾಯಿಕೊಳ್ಳಿ. ಸಮಯವ್ಯರ್ಥ ಮಾಡದೆ ಕೆಲಸ ಪೂರ್ಣಗೊಳಿಸಿ. ಅನವಶ್ಯಕ ಮಾತಿನಿಂದ ಉದ್ವೇಗ ಉಂಟಾಗಬಹುದು.

ಮಕರ: ಈ ದಿನ ಜರುಗಲಿರುವ ಸಂಗತಿಯೊಂದು ಗಾಢ ಪರಿಣಾಮ ಬೀರಿ ವೃತ್ತಿಗೆ ಸಂಬಂಧಿಸಿದ ವಿಷಯದಲ್ಲಿ ನಿರ್ಧಾರ ಕೈಗೊಳ್ಳಲು ಸಹಾಯವಾಗಲಿದೆ. ಹಣಕ್ಕಿಂತ ಸಂಬಂಧ ಮುಖ್ಯವೆಂಬುವುದನ್ನು ಮರೆಯದಿರಿ.

ಕುಂಭ: ರಾಜಕೀಯ ವ್ಯಕ್ತಿಗಳಿಗೆ ಪ್ರಚಾರದ ನಿಮಿತ್ತ ದೂರ ಪ್ರಯಾಣವನ್ನು ಕೈಗೊಳ್ಳಬೇಕಾಗಲಿದೆ. ಅರ್ಹತೆ ಹೊಂದಿದವರಿಗೆ ಹೆಸರಾಂತ ಶಿಕ್ಷಣ ಸಂಸ್ಥೆಯಲ್ಲಿ ಬಹಳ ಸುಲಭವಾಗಿ ಅಧ್ಯಾಪಕ ವೃತ್ತಿ ದೊರೆಯುವುದು.

ಮೀನ: ಉದಾರ ಮನೋಭಾವದಿಂದ ಇತರರಿಗೆ ಸಹಾಯ ಮಾಡಿದ ಫಲ ನಿಮಗೆ ಅನುಭವಕ್ಕೆ ಬರಲಿದೆ. ಆತ್ಮವಿಶ್ವಾಸ ಮತ್ತು ಕಠಿಣ ಪರಿಶ್ರಮದ ಶುಭಫಲವನ್ನು ಅನುಭವಿಸುವಿರಿ.

ಪದಬಂಧ 5575


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3. ತಡವಾಗಿ ನೋಡುತ್ತಿರುವ ಜಲಪಾತ (4)
5. ಕಮರಿ ಹತ್ತಿರ ಹಾರುತ್ತಿರುವ ಹೆಣ್ಣುದುಂಬಿ (4)
6. ಸಂಕಟದಿಂದ ಕಟ್ಟಿದ ತೆರಿಗೆ (2)
7. ಗಿರಿಯ ಹತ್ತಿರವೇ ಸೆರೆ ಹಿಡಿಯುವುದು (4)
10. ಬಿರುಸಾದ ಮಾತಿದು (4)
13. ಪಕ್ಷದ ಆರನೆಯ ದಿನ (2)
14. ದಾಸಿ ತೋರುತ್ತಿರುವ ಅಲಕ್ಷ (4)
15. ಸೊಂಟದಲ್ಲಿರುವ ಉಡಿದಾರ (4)

ಮೇಲಿಂದ ಕೆಳಕ್ಕೆ

1. ನೆಲ್ಲಿಕಾಯಿ ಇಲ್ಲಿದೆ (4)
2. ಹೂವಿನಲ್ಲಿರುವ ಸಿಹಿ ರಸ (4)
3. ತರಿಯನ್ನು ತರಲು ಇಷ್ಟೇಕೆ ಅವಸರ? (4)
4. ಜಿಪುಣನನ್ನು ಹೀಗೂ ಕರೆವರು (3)
6. ಅಂದಗಾತಿ ಇಲ್ಲಿದ್ದಾಳೆ (3)
8. ಗೀಟು ಹಾಕಿದಡೆಯಲ್ಲಿನ ಹೊಳಪಿನ ಲೇಪನ (3)
9. ತಣಿವು ಎಂದು ಹೀಗೂ ಹೇಳುವರು (3)
10. ಕೈಯಲ್ಲಿರುವ ಪ್ರಚಾರದ ಚೀಟಿ (4)
11. ನ್ಯಾಯಾಲಯದಲ್ಲಿ ತನ್ನ ಕಡೆಗೆ ತೀರ್ಪು ಪಡೆದ ವ್ಯಕ್ತಿ (4)
12. ಹೊಸದಾಗಿ ಅಭಿನಯಿಸುತ್ತಿರುವವಳು (4)
13. ಹೆಂಡತಿ ಸೋದರಿಯ ಗಂಡ (3)



5574ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿನಿಮಯ 3.ಶರತ್ಕಾಲ
5.ರಸನ 7.ದಶಮಾಂಶ
9.ಸದಾಚಾರ 12.ಮೂಷಿಕ
14.ಪ್ರತೀಹಾರ 15.ಮತಿಹೀನ

ಮೇಲಿಂದ ಕೆಳಕ್ಕೆ:
1.ವಿಧುರ 2.ಮದನ
3.ಶಬ್ದಕೋಶ 4.ಲಷ್ಕರು
6.ಸಮಂಜಸ 7.ದಡಾರ
8.ಶತಾಯುಷಿ 10.ಚಾಡಿಕೋರ
11.ತಿಗಪ್ರ 12.ಮೂಗುತಿ
13.ಕದನ

ಸುಡೊಕು 5960

	7			3		1		6
4		9						
	1		7		2		5	4
		3	5		6	4		
	4			2			6	7
		5	1		7	3		
	8		6		5	2		3
2		6					7	
	3	4		7		6		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5959 ಸುಡೊಕು

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹570
12 ಕ್ಕೆ ₹75
ಮೈಸೂರು
100ಕ್ಕೆ ₹572

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)
₹267-465
ದ್ವಿತಳಿ (ಬಿ.ವಿ)
₹240-556

ಹಿರಿಯ ಬ್ಯಾಂಕರ್ ರಾಣಾ ತಲ್ವಾರ್ ನಿಧನ

ನವದೆಹಲಿ (ಪಿಟಿಐ): ಜಾಗತಿಕ ಬ್ಯಾಂಕ್ ಆದ ಸ್ಟ್ಯಾಂಡರ್ಡ್ ಚಾರ್ಟರ್ಡ್‌ನ ಮುಖ್ಯಸ್ಥರಾದ ಮೊದಲ ಭಾರತೀಯ ಎನಿಸಿಕೊಂಡಿದ್ದ ಹಿರಿಯ ಬ್ಯಾಂಕರ್ ರಾಣಾ ತಲ್ವಾರ್ (76) ಶನಿವಾರ ನಿಧನರಾಗಿದ್ದಾರೆ ಎಂದು ಡಿಎಲ್‌ಎಫ್ ಷೇರುಪೇಟೆಗೆ ತಿಳಿಸಿದೆ.

ಡಿಎಲ್‌ಎಫ್ ಗ್ರೂಪ್ ಅಧ್ಯಕ್ಷ ಕೆ.ಪಿ. ಸಿಂಗ್ ಅಳಿಯನಾಗಿದ್ದ ತಲ್ವಾರ್‌ಗೆ ಪತ್ನಿ ರೇಣುಕಾ ಮತ್ತು ಪುತ್ರ ರಾಹುಲ್ ಇದ್ದರು. ತಲ್ವಾರ್ ಅವರು ಡಿಎಲ್‌ಎಫ್ ಜೊತೆಗೆ, ಅಸಾಹಿ ಇಂಡಿಯಾ ಗ್ಲಾಸ್ ಲಿಮಿಟೆಡ್ ಮತ್ತು ಗ್ರೇಟ್ ಈಸ್ಟರ್ನ್ ಎನರ್ಜಿ ಕಾರ್ಪೊರೇಷನ್ ಲಿಮಿಟೆಡ್ ಸೇರಿದಂತೆ ವಿವಿಧ ಕಂಪನಿಗಳ ಆಡಳಿತ ಮಂಡಳಿಗಳಲ್ಲಿ ಕೆಲಸ ಮಾಡಿದ್ದರು.

1948ರಲ್ಲಿ ಜನಿಸಿದ ತಲ್ವಾರ್ ದೆಹಲಿಯ ಸೇಂಟ್ ಸ್ಟೀಫನ್ಸ್ ಕಾಲೇಜಿನಲ್ಲಿ ಶಿಕ್ಷಣ ಪೂರೈಸಿದ ನಂತರ ಸಿಟಿ ಬ್ಯಾಂಕ್‌ನಲ್ಲಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. 1996ರಲ್ಲಿ ಸಿಟಿಬ್ಯಾಂಕ್ ಅನ್ನು ತೊರೆದು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ನ ಜಾಗತಿಕ ಮುಖ್ಯ ಕಾರ್ಯನಿರ್ವಾಹಕರಾದರು.

ತಲ್ವಾರ್ 2002ರಲ್ಲಿ ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ತೊರೆದು ಸಾಬ್ರೇ ಕ್ಯಾಪಿಟಲ್ ವರ್ಲ್ಡ್‌ವೈಡ್ ಎಂಬ ಖಾಸಗಿ ಇಕ್ವಿಟಿ ಸಂಸ್ಥೆಯನ್ನು ಸ್ಥಾಪಿಸಿದರು. ಸೆಂಚೂರಿಯನ್ ಬ್ಯಾಂಕ್‌ನ ಬಹುಭಾಗ ಷೇರುಗಳನ್ನು ಖರೀದಿ ಮಾಡಿದ್ದು ಸಾಬ್ರೆ ಕ್ಯಾಪಿಟಲ್ ಭಾರತದಲ್ಲಿ ನಡೆಸಿದ ಬಹುದೊಡ್ಡ ವಹಿವಾಟು. ಬಳಿಕ, ಎಚ್‌ಡಿಎಫ್ ಸಿಯಲ್ಲಿ ಸೆಂಚೂರಿಯನ್ ಬ್ಯಾಂಕ್ ವಿಲೀನ ಆಗಿದ್ದರಲ್ಲಿಯೂ ತಲ್ವಾರ್ ಮಹತ್ವದ ಪಾತ್ರ ವಹಿಸಿದ್ದರು.

ಕಡಿಮೆ ಮೊತ್ತದೊಂದಿಗೆ ಹೂಡಿಕೆ ಹೇಗೆ?



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಬೇಕಾದರೆ ದೊಡ್ಡ ಮೊತ್ತದ ಹಣ ಅಗತ್ಯ ಎಂಬ ತಪ್ಪುಕಲ್ಪನೆಯಿದೆ. ಆದರೆ, ವಾಸ್ತವದಲ್ಲಿ ಷೇರುಪೇಟೆ ಪ್ರವೇಶಿಸಲು ಸಣ್ಣ ಮೊತ್ತದ ಹಣವೂ ಸಾಕಾಗುತ್ತದೆ.

ಕೇವಲ ನೂರು, ಐನೂರು, ಸಾವಿರ ರೂಪಾಯಿ ಹೂಡಿಕೆ ಮಾಡುತ್ತೇವೆ ಎಂದರೂ ಷೇರು ಮಾರುಕಟ್ಟೆಯಲ್ಲಿ ಉತ್ತಮ ಕಂಪನಿಗಳ ಷೇರು ಖರೀದಿಸಲು ಸಾಧ್ಯವಿದೆ. ಬನ್ನಿ, ಕಡಿಮೆ ಮೊತ್ತದೊಂದಿಗೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವುದು ಹೇಗೆ ಎಂದು ತಿಳಿಯೋಣ.

1. ಸಣ್ಣ ಮೊತ್ತದಿಂದ ಷೇರು ಹೂಡಿಕೆ ಆರಂಭಿಸಿ: ಷೇರು ಮಾರುಕಟ್ಟೆ ಪ್ರವೇಶಕ್ಕೆ ನಿಮ್ಮ ಬಳಿ ಎಷ್ಟು ಮೊತ್ತವಿದೆ ಎನ್ನುವುದಕ್ಕಿಂತ ಹೂಡಿಕೆ ಜ್ಞಾನ ಎಷ್ಟಿದೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ಮೂಲ ಹೂಡಿಕೆ ತತ್ವಗಳ ಬಗ್ಗೆ ಅರಿವಿಲ್ಲದೆ ಷೇರುಪೇಟೆ ಪ್ರವೇಶಿಸಿದರೆ ದೊಡ್ಡ ಮೊತ್ತವಿದ್ದರೂ ಹಣ ಕರಗಿಬಿಡುತ್ತದೆ. ಸರಿಯಾದ ಅರಿವಿನೊಂದಿಗೆ ಹೂಡಿಕೆ ಮಾಡಿದರೆ ಸಣ್ಣ ಮೊತ್ತದ ಮೂಲಕವೂ ಸಂಪತ್ತು ಸೃಷ್ಟಿಸಲು ಸಾಧ್ಯವಿದೆ.

ಸರಳವಾಗಿ ಹೇಳುವುದಾದರೆ ಕಲಿಕೆಯಿಂದಷ್ಟೇ ಷೇರು ಹೂಡಿಕೆಯಲ್ಲಿ ಗಳಿಕೆ ಸಾಧ್ಯ. ಷೇರು ಮಾರುಕಟ್ಟೆ ಹೂಡಿಕೆ ಎನ್ನುವುದು ನೂರು ಮೀಟರ್ ಓಟವಲ್ಲ. ಅದೊಂದು ಮ್ಯಾರಥಾನ್. ನಿಮ್ಮ ಬಳಿ ಈಗ ₹1 ಸಾವಿರ ಇದೆ ಎಂದಾದರೆ ನಿಮ್ಮ ಮೊತ್ತಕ್ಕೆ ದಕ್ಕುವ ಉತ್ತಮ ಷೇರುಗಳನ್ನು ಆಯ್ಕೆ ಮಾಡಿಕೊಂಡು ಹೂಡಿಕೆ ಮಾಡಿ. ಒಮ್ಮೆ ಹೂಡಿಕೆ ಆರಂಭಿಸಿದಾಗ ಮಾರುಕಟ್ಟೆಯ ಏರಿಳಿತದ ಹಿಡಿತ ನಿಮಗೆ ಸಿಗುತ್ತದೆ. ಮತ್ತೆ ಹಣ ಸಿಕ್ಕಾಗ ಮತ್ತಷ್ಟು ಷೇರುಗಳನ್ನು ಖರೀದಿಸಬಹುದು. ಹೀಗೆ ಹಂತ ಹಂತವಾಗಿ ನಿಮ್ಮ ಹೂಡಿಕೆ ಪ್ರಮಾಣವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗಬಹುದು.

ನೆನಪಿಡಿ ಷೇರುಪೇಟೆಯಲ್ಲಿ ರಾತ್ರೋರಾತ್ರಿ ಶ್ರೀಮಂತರಾಗಲು ಸಾಧ್ಯವಿಲ್ಲ. ಸಂಪತ್ತಿನೆಡೆಗೆ ನಿಧಾನಗತಿಯ ನಡಿಗೆ ಎನ್ನುವುದು ನಿಮ್ಮ ಧೋರಣೆಯಾಗಬೇಕು.

2. ಪೆನ್ನಿ ಸ್ಟಾಕ್‌ಗಳ ಬಗ್ಗೆ ಎಚ್ಚರಿಕೆ ಅಗತ್ಯ: ₹10ಕ್ಕಿಂತ ಕಡಿಮೆ ಬೆಲೆ ಹೊಂದಿರುವ ಷೇರುಗಳನ್ನು ಪೆನ್ನಿ ಸ್ಟಾಕ್‌ಗಳು ಎಂದು ಕರೆಯಲಾಗುತ್ತದೆ. ಪೆನ್ನಿ ಸ್ಟಾಕ್‌ಗಳು ಕೆಟ್ಟವು ಎಂದು ನಾವು ಹೇಳುತ್ತಿಲ್ಲ. ಸಾಮಾನ್ಯವಾಗಿ ಬಹುತೇಕ ಸಂದರ್ಭಗಳಲ್ಲಿ ನಿರ್ದಿಷ್ಟ ಕಂಪನಿಯು ಕುಸಿತದ ಹಾದಿಯಲ್ಲಿರುವಾಗ ಅಥವಾ ಬೇಡಿಕೆ ಕಡಿಮೆ ಇದ್ದಾಗ ಷೇರಿನ ಬೆಲೆಯನ್ನು ತಗ್ಗಿಸಲಾಗುತ್ತದೆ.

ಹಾಗಾಗಿ, ಬೇಡಿಕೆಯಿಲ್ಲದ ಕಡಿಮೆ ಬೆಲೆಗೆ ಸಿಗುವ ಷೇರುಗಳ ಖರೀದಿ ಬಗ್ಗೆ ಎಚ್ಚರಿಕೆ ವಹಿಸಿ. ಅಗ್ಗದ ಬೆಲೆಗೆ ಸಿಗುವ ಷೇರುಗಳನ್ನು ಖರೀದಿಸುವ ಮುನ್ನ ಸಾಕಷ್ಟು ಅಧ್ಯಯನ ಮಾಡಿ. ಲೆಕ್ಕಾಚಾರದ ಬಳಿಕವೂ ನಿರ್ದಿಷ್ಟ ಕಂಪನಿಯೊಂದು ಉತ್ತಮ ಎಂದು ಕಂಡುಬಂದರೆ ಆಗ ನಿಮ್ಮ ಪರಿಶ್ರಮದ ಹಣವನ್ನು ಆ ಕಂಪನಿಯ ಮೇಲೆ ತೊಡಗಿಸಿ.

3. ಮೌಲ್ಯ ಹೆಚ್ಚಿರುವ ಷೇರುಗಳತ್ತ ನಿಮ್ಮ ಗಮನವಿರಲಿ: ಹೆಚ್ಚು ಆಂತರಿಕ ಮೌಲ್ಯ ಹೊಂದಿರುವ ಮತ್ತು ಭವಿಷ್ಯದ ಬೆಳವಣಿಗೆ ಸಾಧ್ಯವಿದೆ ಎನ್ನುವ ಷೇರುಗಳ ಮೇಲೆ ಹೂಡಿಕೆ ಮಾಡಿ. ಹೂಡಿಕೆ ಮಾಡುವಾಗ ನಿಮ್ಮ ಹಣದ ಮೌಲ್ಯವರ್ಧನೆ ಎಷ್ಟರಮಟ್ಟಿಗೆ ಸಾಧ್ಯವಾಗಬಹುದು ಎಂಬ ಅಂದಾಜಿರಲಿ. ಹೀಗೆ ಅಳೆದು ತೂಗಿ ಒಳ್ಳೆಯ ಕಂಪನಿಗಳ ಮೇಲೆ ಹಣ ಹಾಕಿದಾಗ ಸಂಪತ್ತು ವೃದ್ಧಿ ಸುಲಭವಾಗುತ್ತದೆ.

ಷೇರು ಬೆಲೆ ಕಡಿಮೆ ಇದೆ ಎನ್ನುವ ಕಾರಣಕ್ಕೆ ಯಾವುದೇ ಷೇರಿನ ಮೇಲೆ ಹೂಡಬೇಡಿ. ನಿಮ್ಮ ಹೂಡಿಕೆ ನಿರ್ಧಾರವು ನಿರ್ದಿಷ್ಟ ಷೇರು ಹೂಡಿಕೆ ಮೇಲೆ ಎಷ್ಟು ಗಳಿಕೆ ತಂದುಕೊಡಬಹುದು ಎಂಬ ಲೆಕ್ಕಾಚಾರದ ಮೇಲೆ ನಿಂತಿರಲಿ.

4. ಒಂದೇ ಷೇರಿನ ಮೇಲೆ ದೊಡ್ಡ ಮೊತ್ತದ ಹೂಡಿಕೆ ಬೇಡ: ಸಣ್ಣ ಮೊತ್ತ ಹೊಂದಿದ್ದೀರಿ ಎನ್ನುವ ಕಾರಣಕ್ಕೆ ನಿಮ್ಮ ಹೂಡಿಕೆ ಮೊತ್ತವೆಲ್ಲವನ್ನೂ ಒಂದೇ ಕಂಪನಿಯ ಮೇಲೆ ತೊಡಗಿಸಬೇಡಿ. ಹೂಡಿಕೆ ಮಾಡುವಾಗ ವೈವಿಧ್ಯ ಕಾಯ್ದುಕೊಳ್ಳಿ. ಕಡಿಮೆ ಮೊತ್ತವಿದ್ದರೂ ಬೇರೆ ಬೇರೆ ಕಂಪನಿಗಳ, ವಲಯಗಳ ಷೇರಿನ ಮೇಲೆ ತೊಡಗಿಸಿ.

ಉದಾಹರಣೆಗೆ ಷೇರು ಮಾರುಕಟ್ಟೆಯಲ್ಲಿ ಬ್ಯಾಂಕಿಂಗ್, ಎಫ್‌ಎಂಸಿಜಿ, ಮಾಹಿತಿ ತಂತ್ರಜ್ಞಾನ, ಫಾರ್ಮಾ, ರಿಯಲ್ ಎಸ್ಟೇಟ್ ಹೀಗೆ ಹಲವು ವಲಯಗಳು ಇರುತ್ತವೆ. ಅಂತಹ ವಿವಿಧ ವಲಯಗಳ ಬೇರೆ ಬೇರೆ ಕಂಪನಿಗಳ ಮೇಲೆ ನಿಮ್ಮ ಹೂಡಿಕೆಯಿರಲಿ. ಹೀಗೆ ಮಾಡಿದಾಗ ಒಂದು ಕಂಪನಿ ಕುಸಿತ ಕಂಡರೂ ಮತ್ತೊಂದು ಕಂಪನಿ ಗಳಿಕೆಯಲ್ಲಿ ಇರುತ್ತದೆ. ಒಟ್ಟಾರೆ ನಿಮ್ಮ ಪೋರ್ಟ್‌ಫೋಲಿಯೊದಲ್ಲಿ ಸಮತೋಲನ ಸಾಧ್ಯವಾಗುತ್ತದೆ.

5. ಶೂನ್ಯ ಬ್ರೋಕರೇಜ್ ಪ್ಲಾಟ್‌ಫಾರಂಗಳ ಮೂಲಕ ಹೂಡಿಕೆ ಮಾಡಿ: ಷೇರುಗಳನ್ನು ಖರೀದಿಸುವಾಗ ಮತ್ತು ಮಾರಾಟ ಮಾಡುವಾಗ ಬ್ರೋಕರೇಜ್ ಶುಲ್ಕ ಮತ್ತು ಕೆಲವು ನಿರ್ವಹಣಾ ಶುಲ್ಕವನ್ನು ಬ್ರೋಕರ್‌ಗಳು ವಿಧಿಸುತ್ತಾರೆ. ಆದರೆ, ಈಗ ಅನೇಕ ಶೂನ್ಯ ಬ್ರೋಕರೇಜ್ ಪ್ಲಾಟ್‌ಫಾರಂಗಳಿವೆ. ಕಡಿಮೆ ಮೊತ್ತವನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವವರು ಅಂತಹ ಜೀರೊ ಬ್ರೋಕರೇಜ್ ಪ್ಲಾಟ್‌ಫಾರಂಗಳನ್ನು ಆಯ್ಕೆ ಮಾಡಿಕೊಳ್ಳುವುದು ಒಳಿತು. ಆಗ ಅನಗತ್ಯ ವೆಚ್ಚ ತಗ್ಗುತ್ತದೆ.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಸತತ ಎರಡನೇ ವಾರ ಕುಸಿದ ಸೂಚ್ಯಂಕಗಳು

ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರ ಕುಸಿತ ಕಂಡಿವೆ. ಜನವರಿ 25ರಂದು ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಇಳಿಕೆಯಾಗಿವೆ.

70,700 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.01 ರಷ್ಟು ಕುಸಿದಿದೆ. 21,352 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ನಿಫ್ಟಿ ಶೇ 1.02 ರಷ್ಟು ತಗ್ಗಿದೆ.

ಅಮೆರಿಕ ಫೆಡರಲ್ ಬ್ಯಾಂಕ್‌ನಿಂದ ಬಡ್ಡಿದರ ಇಳಿಕೆ ವಿಳಂಬ, ಕೆಂಪು ಸಮುದ್ರದ ಬಿಕ್ಕಟ್ಟು, ಕಂಪನಿಗಳ ತ್ರೈಮಾಸಿಕ ವರದಿಗಳಲ್ಲಿ ನಿರೀಕ್ಷಿತ ಸಾಧನೆ ಇಲ್ಲದಿರುವುದು, ತೈಲ ಬೆಲೆ ಹೆಚ್ಚಳ, ಚೀನಾ ಮಾರುಕಟ್ಟೆಗೆ ಬಲ ತುಂಬಲು ಚೀನಾ ಸರ್ಕಾರದ ಪ್ರಯತ್ನ ಸೇರಿ ಹಲವು ಅಂಶಗಳು ಷೇರುಪೇಟೆ ಕುಸಿತಕ್ಕೆ ಕಾರಣವಾಗಿವೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹12,140 ಕೋಟಿ ಮೊತ್ತದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 10, ರಿಯಲ್ ಎಸ್ಟೇಟ್ ಶೇ 4.5, ಬ್ಯಾಂಕ್ ಶೇ 2.6, ಹಣಕಾಸು ಸೇವೆ ಶೇ 2.2, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 2.1, ತೈಲ ಮತ್ತು ಅನಿಲ ಸೂಚ್ಯಂಕ ಶೇ 1.8, ಎಫ್‌ಎಂಸಿಜಿ ಶೇ 1.4, ಮಾಹಿತಿ ತಂತ್ರಜ್ಞಾನ ಶೇ 0.6, ಲೋಹ ಸೂಚ್ಯಂಕ ಶೇ 0.4 ಮತ್ತು ಆಟೊ ಸೂಚ್ಯಂಕ ಶೇ 0.2ರಷ್ಟು ಕುಸಿದಿವೆ. ನಿಫ್ಟಿ ಫಾರ್ಮಾ ಸೂಚ್ಯಂಕ ಶೇ 1.7ರಷ್ಟು ಗಳಿಸಿಕೊಂಡಿದೆ.

ನಿಫ್ಟಿ 50 ಸೂಚ್ಯಂಕದಲ್ಲಿ 27 ಕಂಪನಿಗಳ ಷೇರುಗಳು ಕುಸಿತ ದಾಖಲಿಸಿವೆ. ಏಷಿಯನ್ ಪೇಂಟ್ಸ್, ಇಂಡಸ್ ಇಂಡ್ ಬ್ಯಾಂಕ್, ಆಕ್ಸಿಸ್ ಬ್ಯಾಂಕ್, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿ, ಹಿಂದೂಸ್ತಾನ್ ಯುನಿಲಿವರ್, ಎಚ್‌ಡಿಎಫ್‌ಸಿ ಬ್ಯಾಂಕ್, ಡಿವೀಸ್ ಲ್ಯಾಬೊರೇಟರೀಸ್, ವಿಪ್ರೊ, ಬಜಾಜ್ ಫೈನಾನ್ಸ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಟೆಕ್ ಮಹೀಂದ್ರ, ಟಿಸಿಎಸ್, ಮತ್ತು ಐಟಿಸಿ ಶೇ 1.5ರಿಂದ ಶೇ 6.5ರವರೆಗೆ ಕುಸಿದಿದೆ.

ಬಜಾಜ್ ಆಟೊ ಶೇ 7.3ರಷ್ಟು ಗಳಿಸಿಕೊಂಡಿದೆ. ಏರ್‌ಟೆಲ್, ಪವರ್ ಗ್ರಿಡ್ ಕಾರ್ಪೊರೇಷನ್, ಎನ್‌ಟಿಪಿಸಿ ಕೂಡ ಜಿಗಿದಿವೆ.

ಮುನ್ನೋಟ: ಈ ವಾರ ಅದಾನಿ ಗ್ರೀನ್, ಬಿಇಎಲ್, ಬಜಾಜ್ ಫೈನಾನ್ಸ್, ಬಿಪಿಸಿಎಲ್, ಐಟಿಸಿ, ಹೆರಿಟೇಜ್ ಫುಡ್ಸ್, ಜೆಪಿ ಪವರ್, ಮ್ಯಾರಿಕೋ, ಎನ್‌ಟಿಪಿಸಿ, ಡಾ ರೆಡ್ಡೀಸ್, ಅಸ್ಟ್ರಾಲ್ ಲಿಮಿಟೆಡ್, ಜಿಲೆಟ್ ಇಂಡಿಯಾ, ಸ್ಟಾರ್ ಹೆಲ್ತ್, ಪಾಲಿಸಿ ಬಜಾರ್, ಸೇಂಟ್ ಗೋಬೇನ್, ವೋಲ್ಟಾಸ್, ಕ್ರಿಸೆಲ್, ಡಾಬರ್, ಐಡಿಎಫ್‌ಸಿ, ಜಿಂದಾಲ್ ಸ್ಟೀಲ್, ಮ್ಯಾಕ್ಸ್ ಹೆಲ್ತ್, ಪಿವಿಆರ್ ಐನಾಕ್ಸ್, ರಿಲ್ಯಾಕ್ಸೋ, ಸೂಜ್ಲಾನ್, ಆವಾಸ್ ಫೈನಾನ್ಸಿಯರ್ಸ್, ಅಬೋಟ್ ಇಂಡಿಯಾ, ಬಾಟಾ ಇಂಡಿಯಾ, ಸೆಂಚುರಿ ಪ್ಲೈ, ಟಾಟಾ ಮೋಟರ್ಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಪ್ರಮುಖ ದೇಶಗಳ ಸೆಂಟ್ರಲ್ ಬ್ಯಾಂಕ್‌ಗಳು ಬಡ್ಡಿ ದರದ ಬಗ್ಗೆ ಕೈಗೊಳ್ಳುವ ನಿರ್ಣಯ, ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳು, ಜಾಗತಿಕ ವಿದ್ಯಮಾನಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಫ್ಲಿಪ್‌ಕಾರ್ಟ್‌ನ ಸಹ ಸಂಸ್ಥಾಪಕ ಬಿನ್ನಿ ಬನ್ಸಲ್ ರಾಜೀನಾಮೆ

ನವದೆಹಲಿ (ಪಿಟಿಐ): ಇ–ಕಾಮರ್ಸ್‌ನ ಪ್ರಮುಖ ಸಂಸ್ಥೆ ಫ್ಲಿಪ್‌ಕಾರ್ಟ್‌ನ ಸಹ ಸಂಸ್ಥಾಪಕ ಬಿನ್ನಿ ಬನ್ಸಲ್ ಅವರು ಕಂಪನಿಯ ಮಂಡಳಿಗೆ ರಾಜೀನಾಮೆ ನೀಡಿದ್ದಾರೆ ಎಂದು ಕಂಪನಿ ತಿಳಿಸಿದೆ.

ಫ್ಲಿಪ್‌ಕಾರ್ಟ್‌ನಲ್ಲಿನ ಎಲ್ಲ ಷೇರುಗಳ ಮಾರಾಟ ಮಾಡಿದ ಆರು ತಿಂಗಳ ನಂತರ ಈ ಬೆಳವಣಿಗೆ ನಡೆದಿದೆ.

‘ಫ್ಲಿಪ್‌ಕಾರ್ಟ್ ಸಮೂಹದ 16 ವರ್ಷದ ಸಾಧನೆಗಳ ಬಗ್ಗೆ ನನಗೆ ಹೆಮ್ಮೆಯಿದ್ದು, ಕಂಪನಿಯು ಪ್ರಬಲವಾಗಿದೆ. ಗಟ್ಟಿ ನಾಯಕತ್ವದ ತಂಡ ಮತ್ತು ಸ್ಪಷ್ಟವಾದ ಹಾದಿಯಲ್ಲಿ ಕಂಪನಿ ಮುನ್ನಡೆಯುತ್ತಿದೆ. ಈ ವಿಶ್ವಾಸದಿಂದಾಗಿ ನಾನು ಕಂಪನಿಯಿಂದ ಹಿಂದೆ ಸರಿಯಲು ನಿರ್ಧರಿಸಿದ್ದೇನೆ. ಕಂಪನಿಯು ಸಮರ್ಥರ ಕೈಯಲ್ಲಿದ್ದು, ಗ್ರಾಹಕರಿಗೆ ಉತ್ತಮ ಸೇವೆ ನೀಡಲಿದೆ. ಕಂಪನಿಯ ವ್ಯವಹಾರಕ್ಕೆ ಬೆಂಬಲಿಗನಾಗಿರುವೆ’ ಎಂದು ಬಿನ್ನಿ ಬನ್ಸಲ್ ಹೇಳಿದ್ದಾರೆ.

ಸಚಿನ್ ಬನ್ಸಲ್ ಜೊತೆ ಸೇರಿ 2007ರಲ್ಲಿ ಫ್ಲಿಪ್‌ಕಾರ್ಟ್‌ನ್ನು ಬಿನ್ನಿ ಬನ್ಸಲ್ ಸ್ಥಾಪಿಸಿದ್ದರು. 2018ರಲ್ಲಿ ವಾಲ್‌ಮಾರ್ಟ್, ಕಂಪನಿಯ ಶೇ 77ರಷ್ಟು ಷೇರುಗಳನ್ನು ₹1.74 ಲಕ್ಷ ಕೋಟಿಗೆ ಖರೀದಿಸಿತ್ತು. ಆಗ ಸಚಿನ್ ಬನ್ಸಲ್ ಕಂಪನಿಯನ್ನು ತೊರೆದಿದ್ದರು. ಬಿನ್ನಿ ಬನ್ಸಲ್ ಅವರು ಇ–ಕಾಮರ್ಸ್ ವೇದಿಕೆಯಲ್ಲಿ ಮಾರಾಟಗಾರರಿಗೆ ಮಾರುಕಟ್ಟೆ ಬೆಂಬಲ ನೀಡಲು ತಮ್ಮದೇ ಆದ ಸ್ವಂತ ಕಂಪನಿಯನ್ನು ಆರಂಭಿಸಿದ್ದಾರೆ.

ಫ್ಲಿಪ್‌ಕಾರ್ಟ್ ಮೌಲ್ಯವು ಅಂದಾಜು ₹3.15 ಲಕ್ಷ ಕೋಟಿಗೆ ಏರಿಕೆಯಾಗಿದೆ. ಆದರೂ, ಕಂಪನಿ ಇನ್ನೂ ನಷ್ಟದಲ್ಲಿ ನಡೆಯುತ್ತಿದೆ. ಕಂಪನಿಯು ಒಟ್ಟು ವರಮಾನವು 2023–24ರ ಹಣಕಾಸು ವರ್ಷದಲ್ಲಿ ಶೇ 9.4ರಷ್ಟು ಏರಿಕೆಯಾಗಿ ₹56,012 ಕೋಟಿ ಆಗಿದೆ. 2022–23ರಲ್ಲಿ ಇದು ₹51,176 ಕೋಟಿ ಆಗಿತ್ತು. ಸಂಚಿತ ನಷ್ಟವು ₹3,371 ಕೋಟಿಯಿಂದ ₹4,890 ಕೋಟಿಗೆ ಏರಿಕೆಯಾಗಿದೆ.

ಕೆಂಪು ಸಮುದ್ರದಲ್ಲಿ ಸಾಗಣೆ ತೊಡಕು: ಗ್ರಾಹಕರಿಗೆ ಪೆಟ್ಟು

ಕೆಂಪು ಸಮುದ್ರದಲ್ಲಿ ಸರಕು ಸಾಗಣೆ ಹಡಗುಗಳ ಮೇಲೆ ಹುಥಿ ಬಂಡುಕೋರರು ನಡೆಸುತ್ತಿರುವ ದಾಳಿಯು ಜಾಗತಿಕ ವಾಣಿಜ್ಯ ವಹಿವಾಟನ್ನು ಬಾಧಿಸುತ್ತಲೇ ಇದೆ. ಇಂತಹ ದಾಳಿಗಳು ಇನ್ನೂ ಮುಂದುವರಿದರೆ ಜಾಗತಿಕ ಮಟ್ಟದಲ್ಲಿ ಕೈಗಾರಿಕೋದ್ಯಮಗಳ ಕಾರ್ಯಾಚರಣೆಗೆ ತೊಡಕಾಗಲಿದೆ. ಇದರ ಪರಿಣಾಮವನ್ನು ಗ್ರಾಹಕರೇ ಎದುರಿಸಬೇಕಾಗುತ್ತದೆ ಎಂದು ‘ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್’ ಹೇಳಿದೆ. ಉದ್ಯಮ ವಲಯ, ರಫ್ತು ತಜ್ಞರು, ಸರ್ಕಾರಿ ಸಂಸ್ಥೆಗಳೂ ಈ ಮಾತನ್ನೇ ಹೇಳುತ್ತವೆ

- ಹಡಗುಗಳು ಕೆಂಪು ಸಮುದ್ರ ಮಾರ್ಗವನ್ನು ತೊರೆದು, ಆಫ್ರಿಕಾವನ್ನು ಬಳಸಿಕೊಂಡು ಏಷ್ಯಾದತ್ತ ಬರುತ್ತಿವೆ. ಈ ಯಾನ ದೀರ್ಘವಾಗುತ್ತಿರುವ ಕಾರಣ, ಕೈಗಾರಿಕೆಗಳಿಗೆ ಕಚ್ಚಾವಸ್ತುಗಳು ಮತ್ತು ಬಿಡಿಭಾಗಗಳ ಪೂರೈಕೆಯಲ್ಲಿ ಭಾರಿ ವಿಳಂಬವಾಗುತ್ತಿದೆ. ಇದು ಮುಂದುವರಿದರೆ, ಕೆಲವು ಕೈಗಾರಿಕೆಗಳು ತಾತ್ಕಾಲಿಕವಾಗಿ ತಯಾರಿಕೆ ಸ್ಥಗಿತಗೊಳಿಸಬೇಕಾಗುತ್ತದೆ
- ಎಲೆಕ್ಟ್ರಾನಿಕ್ಸ್, ಆಟೊಮೊಬೈಲ್, ಯಂತ್ರೋಪಕರಣಗಳು, ರಾಸಾಯನಿಕಗಳು, ಔಷಧ, ಪಾಲಿಮರ್, ಜವಳಿ ಕ್ಷೇತ್ರದ ಉದ್ಯಮಗಳು ಈ ವಿಳಂಬಕ್ಕೆ ಗುರಿಯಾಗಲಿವೆ
- ಭಾರತದಿಂದ ಪಾಶ್ಚಿಮಾತ್ಯ ದೇಶಗಳಿಗೆ ಆಗಬೇಕಿದ್ದ ರಫ್ತು ಕೂಡ ಭಾದಿತವಾಗಿದೆ. ಆಫ್ರಿಕಾವನ್ನು ಸುತ್ತುಹಾಕಿ ಐರೋಪ್ಯ ದೇಶಗಳತ್ತ ಹೋಗಬೇಕಿರುವ ಕಾರಣ, ರಫ್ತು ವೆಚ್ಚದಲ್ಲಿ ಶೇ 250–265ರಷ್ಟು ಏರಿಕೆಯಾಗಿದೆ. ಇದರ ಪರಿಣಾಮವಾಗಿ ರಫ್ತು ಪ್ರಮಾಣ ಇಳಿಕೆಯಾಗುತ್ತಿದೆ
- ಭಾರತದ ಒಟ್ಟು ಆಮದಿನಲ್ಲಿ ಶೇ 30ರಷ್ಟು ಸರಕುಗಳು ಕೆಂಪು ಸಮುದ್ರ ಮಾರ್ಗದ ಮೂಲಕವೇ ಬರುತ್ತದೆ. ಭಾರತದ ಒಟ್ಟು ರಫ್ತಿನಲ್ಲಿ ಶೇ 50ರಷ್ಟು ಸರಕುಗಳು ಈ ಮಾರ್ಗದ ಮೂಲಕವೇ ರವಾನೆಯಾಗುತ್ತವೆ. ಆದರೆ ಈಗ ಈ ಪ್ರಮಾಣ ಗಣನೀಯ ಮಟ್ಟದಲ್ಲಿ ಇಳಿಕೆಯಾಗಿದೆ
- ರಷ್ಯಾದಿಂದ ಭಾರತಕ್ಕೆ ಆಮದಾಗುತ್ತಿರುವ ಕಚ್ಚಾತೈಲವು ಕೆಂಪು ಸಮುದ್ರದ ಮೂಲಕವೇ ಬರಬೇಕಿತ್ತು. ಆದರೆ ಈಗ ಆಫ್ರಿಕಾವನ್ನು ಸುತ್ತಿಕೊಂಡು ಬರುತ್ತಿರುವ ಕಾರಣ, ಪೂರೈಕೆಯಲ್ಲಿ ವಿಳಂಬವಾಗುತ್ತಿದೆ. ಜತೆಗೆ, ಸಾಗಣೆ ವೆಚ್ಚವೂ ಏರಿಕೆಯಾಗುತ್ತಿದೆ. ಆದರೆ, ದೇಶದ ಇಂಧನ ಬೇಡಿಕೆ ಪೂರೈಕೆಯಲ್ಲಿ ಯಾವುದೇ ಅಡೆತಡೆಯಾಗುವುದಿಲ್ಲ. ಈ ಮಾರ್ಗದ ಮೂಲಕ ಬರುವ ಕಚ್ಚಾತೈಲದ ಪ್ರಮಾಣ ಕಡಿಮೆ ಇರುವ ಕಾರಣ ದೇಶದ ಇಂಧನ ಬೆಲೆಯ ಮೇಲೆ ಹೆಚ್ಚಿನ ಪರಿಣಾಮ ಬೀರುವುದಿಲ್ಲ

ಆಧಾರ: ಪಿಟಿಐ

ಸದ್ಯ ನಾವು ವಿದೇಶಿ ಶಿಪ್ಪಿಂಗ್ ಕಂಪನಿಗಳ ಮೇಲೆ ಅವಲಂಬಿತರಾಗಿದ್ದೇವೆ. ಆದ್ದರಿಂದ, ಭಾರತವು ತನ್ನದೇ ಆದ ಶಿಪ್ಪಿಂಗ್ ಕಂಪನಿಯನ್ನು ಆರಂಭಿಸಲು ಇದು ಸಕಾಲ

ಎಸ್.ಕೆ. ಸರಾಫ್
ರಫ್ತುದಾರ, ಮುಂಬೈ





ತಾಲೀಮು ಗಣರಾಜ್ಯೋತ್ಸವ ಕಾರ್ಯಕ್ರಮಗಳ ಕೊನೆಯ ಘಟ್ಟವಾದ ‘ಬೀಟಿಂಗ್ ರಿಟ್ರೀಟ್’ಗಾಗಿ ತಾಲೀಮು ನವದೆಹಲಿಯ ವಿಜಯ್ ಚೌಕ್‌ದಲ್ಲಿ ಭಾನುವಾರ ನಡೆಯಿತು–ಪಿಟಿಐ ಚಿತ್ರ

ಅನುಷ್ಠಾನ ವಿಳಂಬ: ಯೋಜನೆಗಳ ವೆಚ್ಚ ₹4.82 ಲಕ್ಷ ಕೋಟಿ ಏರಿಕೆ

ನವದೆಹಲಿ (ಪಿಟಿಐ): 431 ಮೂಲಸೌಕರ್ಯ ಯೋಜನೆಗಳ ಅನುಷ್ಠಾನದಲ್ಲಿನ ವಿಳಂಬದಿಂದಾಗಿ ಇವುಗಳ ವೆಚ್ಚವು ₹4.82 ಲಕ್ಷ ಕೋಟಿಯಷ್ಟು ಹೆಚ್ಚಳವಾಗಿದೆ ಎಂದು ಅಧಿಕೃತ ವರದಿ ತಿಳಿಸಿದೆ. ಸಾಂಖ್ಯಿಕ ಮತ್ತು ಯೋಜನೆ ಅನುಷ್ಠಾನ ಸಚಿವಾಲಯದ ಪ್ರಕಾರ, 1,820 ಯೋಜನೆಗಳ ಪೈಕಿ 431 ಯೋಜನೆಗಳ ವೆಚ್ಚ ಹೆಚ್ಚಳವಾಗಿದೆ ಮತ್ತು 848 ಯೋಜನೆಗಳು ವಿಳಂಬವಾಗಿವೆ ಎಂದು ತಿಳಿಸಿದೆ.

1,820 ಯೋಜನೆಗಳ ಅನುಷ್ಠಾನದ ಒಟ್ಟು ಮೂಲ ವೆಚ್ಚ ₹25.87 ಲಕ್ಷ ಕೋಟಿ ಆಗಬಹುದು ಎಂದು ಅಂದಾಜು ಮಾಡಲಾಗಿತ್ತು. ಆದರೆ ಈಗ, ಅವುಗಳು ಪೂರ್ಣಗೊಂಡಾಗ ವೆಚ್ಚವು ₹30.69 ಲಕ್ಷ ಕೋಟಿಗಳಾಗಬಹುದು. ಇದು ಒಟ್ಟಾರೆ ವೆಚ್ಚ ₹4.82 ಲಕ್ಷ ಕೋಟಿ (ಮೂಲ ವೆಚ್ಚದ ಶೇ. 18.65) ಹೆಚ್ಚಳವನ್ನು ತೋರಿಸುತ್ತದೆ ಎಂದು ಸಚಿವಾಲಯದ 2023ರ ಡಿಸೆಂಬರ್‌ನ ವರದಿ ಹೇಳಿದೆ. 202 ಯೋಜನೆಗಳು ಒಂದರಿಂದ 12 ತಿಂಗಳಷ್ಟು ವಿಳಂಬ ಆಗಿದೆ. 200 ಯೋಜನೆಗಳು 13ರಿಂದ 24 ತಿಂಗಳು, 323 ಯೋಜನೆಗಳು 25–60 ತಿಂಗಳು ಮತ್ತು 123 ಯೋಜನೆಗಳು 60 ತಿಂಗಳಿಗೂ ಹೆಚ್ಚು ವಿಳಂಬ ಆಗಿದೆ. ವರದಿಯ ಪ್ರಕಾರ, ಡಿಸೆಂಬರ್ 2023ರವರೆಗೆ ಈ ಯೋಜನೆಗಳಿಗೆ ಮಾಡಿದ ವೆಚ್ಚವು ₹16.26 ಲಕ್ಷ ಕೋಟಿ. ಇದು ಯೋಜನೆಗಳ ಅಂದಾಜು ವೆಚ್ಚದ ಶೇ 53ರಷ್ಟು.

ಯೋಜನೆ ವಿಳಂಬಕ್ಕೆ ಕಾರಣವೇನು?: ಯೋಜನಾ ಅನುಷ್ಠಾನ ಸಂಸ್ಥೆಗಳ ವರದಿಯಂತೆ ಭೂಸ್ವಾಧೀನದ ವಿಳಂಬ, ಅರಣ್ಯ ಮತ್ತು ಪರಿಸರ ಅನುಮತಿ ನಿಗದಿತ ಸಮಯಕ್ಕೆ ದೊರೆಯದಿರುವುದು, ಯೋಜನೆಗೆ ನೀಡಬೇಕಾದ ಅನುದಾನದಲ್ಲಿನ ವಿಳಂಬ, ಮೂಲಸೌಕರ್ಯ ಮತ್ತು ಸಂಪರ್ಕದ ಕೊರತೆ, ಕಾನೂನು ಸಮಸ್ಯೆಗಳು, ಕೋವಿಡ್‌ನಿಂದ ವಿಧಿಸಿದ ಲಾಕ್‌ಡೌನ್ ಸೇರಿದಂತೆ ವಿವಿಧ ಕಾರಣಗಳು ಯೋಜನೆ ವಿಳಂಬವಾಗಲು ಕಾರಣವಾದ ಅಂಶಗಳಾಗಿವೆ. ಈ ಪ್ರತಿಯೊಂದು ಯೋಜನೆ ₹150 ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ಹೂಡಿಕೆಯನ್ನು ಹೊಂದಿವೆ ಎಂದು ವರದಿ ತಿಳಿಸಿದೆ.

ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ₹7,500 ಕೋಟಿ ಲಾಭದ ಗುರಿ

ನವದೆಹಲಿ (ಪಿಟಿಐ): 2023–24ರ ಹಣಕಾಸು ವರ್ಷದಲ್ಲಿ ತನ್ನ ಲಾಭವು ₹7000 ಕೋಟಿ– 7500 ಕೋಟಿಯಷ್ಟು ಇರಬಹುದು ಎಂದು ಈ ಹಿಂದಿನ ಅಂದಾಜನ್ನು ಪರಿಷ್ಕರಿಸಲಾಗಿದೆ ಎಂದು ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) ತಿಳಿಸಿದೆ.

ಈ ಹಿಂದೆ, ಬ್ಯಾಂಕ್ ತನ್ನ ಲಾಭವು ₹6 ಸಾವಿರ ಕೋಟಿ ಆಗಲಿದೆ ಎಂದು ಅಂದಾಜನ್ನು ಮಾಡಿತ್ತು. ಮೂರು ತ್ರೈಮಾಸಿಕದಲ್ಲಿ ನಿವ್ವಳ ಲಾಭವು ಶೇ 253ರಷ್ಟು ಹೆಚ್ಚಾಗಿದ್ದು, ಲಾಭವು ₹5,230 ಕೋಟಿ ದಾಟಿದೆ ಎಂದು ಬ್ಯಾಂಕ್ ತಿಳಿಸಿದೆ.

ಪರಿಷ್ಕೃತ ಅಂದಾಜಿನ ಪ್ರಕಾರ ನಾಲ್ಕನೇ ತ್ರೈಮಾಸಿಕದಲ್ಲಿ ನಿವ್ವಳ ಲಾಭವು ₹2 ಸಾವಿರ ಕೋಟಿಗಿಂತ ಹೆಚ್ಚಿರಲಿದೆ. ಮೂರನೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹2,223 ಕೋಟಿ ಲಾಭ ಗಳಿಸಿದೆ.

ಮಹಾಘಟಬಂಧನ ತೊರೆದ ನಿತೀಶ್ ಕುಮಾರ್; ಬಿಜೆಪಿ ಸಂಸದ ದಿಲೀಪ್ ಘೋಷ್ ಪ್ರತಿಕ್ರಿಯೆ

‘ಅವಕಾಶವಾದಕ್ಕೆ ಅಂತ್ಯ ಹಾಡಬೇಕಿದೆ’

ಕೋಲ್ಕತ್ತ (ಪಿಟಿಐ): ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರನ್ನು ಅವಕಾಶವಾದಿ ರಾಜಕಾರಣಿ ಎಂದು ಬಣ್ಣಿಸಿರುವ ಪಶ್ಚಿಮ ಬಂಗಾಳದ ಬಿಜೆಪಿ ಸಂಸದ ದಿಲೀಪ್ ಘೋಷ್ ಅವರು, ಇದಕ್ಕೆಲ್ಲ ಅಂತ್ಯ ಹಾಡಬೇಕಿದೆ ಎಂದು ಪ್ರತಿಪಾದಿಸಿದರು.

‘ಸಾಮಾನ್ಯವಾಗಿ ಶಾಸಕರು ಐದು ವರ್ಷಗಳ ಅವಧಿಯಲ್ಲಿ ಒಮ್ಮೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಾರೆ. ಆದರೆ ನಿತೀಶ್ ಇದಕ್ಕೆ ಭಿನ್ನ. ಅವರು ಐದು ವರ್ಷಗಳಲ್ಲಿ ಕನಿಷ್ಠ ಎರಡು ಅಥವಾ ಮೂರು ಬಾರಿ ಸಿ.ಎಂ ಆಗಿ ಪ್ರಮಾಣ ವಚನ ಸ್ವೀಕರಿಸುತ್ತಾರೆ. ಅದೂ ಪ್ರತಿ ಬಾರಿಯೂ ಬೇರೆ ಮೈತ್ರಿಯೊಂದಿಗೆ ಕೈಜೋಡಿಸಿ ಈ ಕಾರ್ಯ ಮಾಡುತ್ತಾರೆ’ ಎಂದು ಅವರು ವ್ಯಂಗ್ಯವಾಡಿದರು.


‘ನಾನು ಇದನ್ನು ಅವಕಾಶವಾದದ ರಾಜಕೀಯ ಎಂದೇ ಭಾವಿಸುತ್ತೇನೆ. ಈ ರೀತಿ ಮಾಡುವುದನ್ನು ನಿಲ್ಲಿಸಬೇಕಾದ ಸಮಯ ಬಂದಿದೆ’ ಎಂದು ಅವರು ಹೇಳಿದರು.

ಘೋಷ್ ಅವರ ಹೇಳಿಕೆ ಕುರಿತು ಪ್ರತಿಕ್ರಿಯಿಸಲು ರಾಜ್ಯ ಬಿಜೆಪಿ ವಕ್ತಾರ ಸಮಿಕ್ ಭಟ್ಟಾಚಾರ್ಯ ಅವರು ನಿರಾಕರಿಸಿದರು.

‘ಜೆಡಿಯು ಮತ್ತು ಆರ್‌ಜೆಡಿಯು ಪಕ್ಷದ್ದು ಪ್ರೇಮರಹಿತ ವಿವಾಹವಾಗಿತ್ತು. ಇಂಥ ವಿವಾಹವು ಶಾಶ್ವತವಾಗಿ ಮುಂದುವರಿಯುವುದಿಲ್ಲ. ಈಗ ಆಗಿದ್ದೂ ಅದೇ’ ಎಂದು ಭಟ್ಟಾಚಾರ್ಯ ಪ್ರತಿಕ್ರಿಯಿಸಿದರು.

ಈ ಹಿಂದೆ ಜನರ ಆದೇಶವನ್ನು ಕಡೆಗಣಿಸಿ ಎನ್‌ಡಿಎ ತೊರೆದಿದ್ದ ನಿತೀಶ್ ಕುಮಾರ್ ಅವರು, ಈಗ ಎನ್‌ಡಿಎಗೆ ಮರಳುವ ಮೂಲಕ ತಮ್ಮ ಹಿಂದಿನ ರಾಜಕೀಯ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡುತ್ತಿದ್ದಾರೆ’ ಎಂದು ಅವರು ಹೇಳಿದರು.

ಆಯಾರಾಂ ಗಯಾರಾಂ ಇದ್ದದ್ದೇ: ಮಲ್ಲಿಕಾರ್ಜುನ ಖರ್ಗೆ



ಕಲಬುರಗಿ: ‘ಬಿಹಾರ ಮುಖ್ಯಮಂತ್ರಿ ನಿತೀಶ್‌ಕುಮಾರ್ ಮಹಾಘಟಬಂಧನ್ ಮೈತ್ರಿಕೂಟದಿಂದ ಹೊರಹೋಗುವ ಬಗ್ಗೆ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್‌ಐದು ದಿನಗಳ ಹಿಂದೆಯೇ ನನಗೆ ಮಾಹಿತಿ ನೀಡಿದ್ದರು. ಮೈತ್ರಿಕೂಟ ವ್ಯವಸ್ಥೆಯಲ್ಲಿ ಆಯಾರಾಂ ಗಯಾರಾಂ ಸಂಸ್ಕೃತಿ ಇದ್ದದ್ದೇ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಿತೀಶ್ ಕುಮಾರ್ ಮೈತ್ರಿಕೂಟ ಬಿಡುತ್ತಿರುವ ಬಗ್ಗೆ ಮುಂಚೆಯೇ ಸುಳಿವು ಸಿಕ್ಕಿತ್ತು. ಹೀಗಾಗಿಯೇ ಅವರೊಂದಿಗೆ ಮಾತುಕತೆಗೆ ಯತ್ನಿಸಿದ್ದೆವು. ಅವರು ಹೋದರೂ ನಮ್ಮ ಹೋರಾಟ ಮುಂದುವರೆಯಲಿದೆ’ ಎಂದರು.

‘ಇಂಡಿಯಾ ಮೈತ್ರಿಕೂಟದ ಇತರ ಪಕ್ಷಗಳ ಜೊತೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸೀಟು ಹಂಚಿಕೆ ಕುರಿತು ಚರ್ಚಿಸಲು ಆರು ಜನರ ಸಮಿತಿಯನ್ನು ರಚಿಸಲಾಗಿದೆ. ವಿವಿಧ ಪಕ್ಷಗಳೊಂದಿಗೆ ಸೀಟು ಹೊಂದಾಣಿಕೆ ಬಗ್ಗೆ ಚರ್ಚೆ ನಡೆದಿದ್ದು, ಕೆಲವು ಕಡೆ ಒಮ್ಮತಕ್ಕೆ ಬರಲಾಗಿದೆ. ಇನ್ನು ಕೆಲವೆಡೆ ಬಂದಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಧರ್ಮದ ಹೆಸರಿನಲ್ಲಿ ಬಿಜೆಪಿ ಗೆಲ್ಲಲು ಬಿಡದಿರಿ’ (ಡೆಹ್ರಾಡೂನ್ ವರದಿ): ವಿಷ್ಣುವಿನ 11ನೇ ‘ಅವತಾರ’ ಎಂಬಂತೆ ಬಿಂಬಿಸಿಕೊಳ್ಳಲು ಪ್ರಧಾನಿ ನರೇಂದ್ರ ಮೋದಿ ಯತ್ನಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ನಡೆಸಿದ್ದಾರೆ.

ಇಲ್ಲಿನ ಶಾಲೆಯೊಂದರಲ್ಲಿ ಭಾನುವಾರ ಏರ್ಪಡಿಸಲಾಗಿದ್ದ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದ ಅವರು, ‘ಧರ್ಮದ ಹೆಸರಿನಲ್ಲಿ ಲೋಕಸಭೆ ಚುನಾವಣೆ ಗೆಲ್ಲಲು ಬಿಜೆಪಿಯನ್ನು ಬಿಡಬಾರದು. ಬಿಜೆಪಿಯನ್ನು ಅಧಿಕಾರದಿಂದ ದೂರ ಇಡಬೇಕು’ ಎಂದರು. ಯಾರೇ ಟಿ.ವಿ ಹಾಕಿದರೂ, ಮೋದಿ ಅವರೇ ಕಾಣಿಸಿಕೊಳ್ಳುತ್ತಾರೆ. ಮೋದಿ ಅವರು ವಿಷ್ಣುವಿನ 11ನೇ ಅವತಾರ ಆಗಲು ಯತ್ನಿಸುತ್ತಿದ್ದಾರೆ. ದೇಶಕ್ಕಾಗಿ ಕಾಂಗ್ರೆಸ್ ನಾಯಕರು ಪ್ರಾಣ ಅರ್ಪಿಸಿದ್ದಾರೆ. ಆದರೆ, ಬಿಜೆಪಿ ಇಂಥ ಯಾವುದೇ ತ್ಯಾಗ ಮಾಡಿಲ್ಲ ಎಂದು ಟೀಕಿಸಿದರು.

‘ದೇಶ ಒಗ್ಗೂಡಿಸಲು ಇಂದಿರಾಗಾಂಧಿ, ರಾಜೀವ್‌ಗಾಂಧಿ ತಮ್ಮ ಪ್ರಾಣವನ್ನೇ ಬಲಿಕೊಟ್ಟರು. ಸ್ವಾತಂತ್ರ್ಯಕ್ಕಾಗಿ ಮಹಾತ್ಮ ಗಾಂಧೀಜಿ ಹಲವು ವರ್ಷ ಸೆರೆವಾಸ ಅನುಭವಿಸಿದರು. ಬಿಜೆಪಿ ಏನು ಮಾಡಿದೆ’ ಎಂದು ಪ್ರಶ್ನಿಸಿದರು.

ಬಿಜೆಪಿ ವೈಯಕ್ತಿಕ ಟೀಕೆ ಮಾಡಿಲ್ಲ’



ಪ್ರಹ್ಲಾದ ಜೋಶಿ

ಹುಬ್ಬಳ್ಳಿ: ‘ಬಿಹಾರದ ಮುಖ್ಯಮಂತ್ರಿಯಾಗಿದ್ದ ನಿತೀಶ್ ಕುಮಾರ್ ವಿರುದ್ಧ ಬಿಜೆಪಿ ನಾಯಕರು ಎಂದೂ ವೈಯಕ್ತಿಕ ಟೀಕೆ ಮಾಡಿಲ್ಲ. ಭ್ರಷ್ಟ ಪರಿವಾರದ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದನ್ನು ಮಾತ್ರ ಟೀಕಿಸಿದ್ದೇವೆ’ ಎಂದು ಕೇಂದ್ರ ಕಲ್ಲಿದ್ದಲು ಸಚಿವ ಪ್ರಲ್ಹಾದ ಜೋಶಿ ಹೇಳಿದರು.

‘ಲಾಲು ಪ್ರಸಾದ್ ಹಾಗೂ ಪರಿವಾರದವರು ತೊಂದರೆ ಕೊಟ್ಟಿರುವುದು ನಿತೀಶ್ ಅವರು ರಾಜೀನಾಮೆ ನೀಡುವುದಕ್ಕೆ ಕಾರಣ ಇರಬಹುದು. ‘ಇಂಡಿಯಾ’ ಒಕ್ಕೂಟದ ನಾಯಕತ್ವ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕೊಟ್ಟಿರುವುದು ಇದಕ್ಕೆ ಕಾರಣ ಇರಲಿಕ್ಕಿಲ್ಲ’ ಎಂದು ಭಾನುವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು.

ಕಾಂಗ್ರೆಸ್‌ನಿಂದ ಅಹಿಂದ ಸಮಾವೇಶ ಆಯೋಜಿಸುತ್ತಿರುವ ಕುರಿತು ಪ್ರತಿಕ್ರಿಯಿಸಿದ ಅವರು, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಹಿಂದೂ ವಿರೋಧಿಯಾಗಿದ್ದು, ಮುಸಲ್ಮಾನರನ್ನು ತುಷ್ಟೀಕರಣ ಮಾಡುವ ವ್ಯಕ್ತಿಯಾಗಿದ್ದಾರೆ. ‘ಅಹಿಂದ’ ಸಮಾವೇಶದ ಬದಲು ‘ಅ’ಸಮಾವೇಶ (ಅಲ್ಪಸಂಖ್ಯಾತರ) ಮಾಡಿಕೊಳ್ಳಬೇಕಿತ್ತು. ‘ಹಿಂದ’ ಅವರಿಗೆ ಸಂಬಂಧವಿಲ್ಲ’ ಎಂದು ಲೇವಡಿ ಮಾಡಿದರು.

ಅಲ್ಪಾವಧಿಯಲ್ಲಿ ಬೆಳೆದ ಹಿಂದುಳಿದ ನಾಯಕ



ಸಾಮ್ರಾಟ್ ಚೌಧರಿ

ಪಟ್ನಾ (ಪಿಟಿಐ): ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷರಾಗಿರುವ ಸಾಮ್ರಾಟ್ ಚೌಧರಿ ಒಬಿಸಿ ನಾಯಕರಾಗಿದ್ದು, ಕೋರಿ ಜಾತಿಗೆ ಸೇರಿದವರು. ವಿವಿಧ ಕಾಲಘಟ್ಟಗಳಲ್ಲಿ ಆರ್‌ಜೆಡಿ, ಜೆಡಿಯು ಜತೆ ಗುರುತಿಸಿಕೊಂಡಿದ್ದ ಅವರು 2017ರಲ್ಲಿ ಬಿಜೆಪಿ ಸೇರಿದರು. ತಮ್ಮ ಪ್ರತಿಭೆ ಮತ್ತು ವಾಕ್‌ಚಾತುರ್ಯದಿಂದ ಅಲ್ಪಾವಧಿಯಲ್ಲಿಯೇ ಬಿಜೆಪಿಯಲ್ಲಿ ಉನ್ನತ ಸ್ಥಾನಕ್ಕೇರಿದರು.

ಸಾಮ್ರಾಟ್ ಅವರು ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಭಾನುವಾರ ಆಯ್ಕೆಯಾಗಿ, ನಿತೀಶ್ ಕುಮಾರ್ ಸಂಪುಟದಲ್ಲಿ ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಸಾಮ್ರಾಟ್ ಅವರ ತಂದೆ ಶಕುನಿ ಚೌಧರಿ. ಸೇನೆಯಲ್ಲಿ ಸೇವೆ ಸಲ್ಲಿಸಿದ್ದ ಅವರು ಬಳಿಕ ರಾಜಕಾರಣಿಯಾಗಿದ್ದರು. ಪ್ರಾರಂಭದಲ್ಲಿ ಕಾಂಗ್ರೆಸ್‌ನಲ್ಲಿದ್ದ ಅವರು, ಲಾಲು ಪ್ರಸಾದ್ ಮತ್ತು ನಿತೀಶ್ ಕುಮಾರ್ ಅವರ ಜೊತೆಗೂ ಗುರುತಿಸಿಕೊಂಡಿದ್ದರು.

ಸಾಮ್ರಾಟ್ ಅವರು ರಾಬ್ಡಿ ದೇವಿ ನೇತೃತ್ವದ ಆರ್‌ಜೆಡಿ ಸರ್ಕಾರದಲ್ಲಿ ಸಚಿವರಾಗಿದ್ದರು. 2005ರಲ್ಲಿ ಅವರನ್ನು ಪಕ್ಷದಿಂದ ಹೊರಹಾಕಲಾಗಿತ್ತು.

2014ರಲ್ಲಿ ಅವರು ಜಿತನ್ ರಾಮ್ ಮಾಂಝಿ ಅವರ ನೇತೃತ್ವದ ಜೆಡಿಯು ಸರ್ಕಾರದಲ್ಲಿ ಭಾಗಿಯಾದರು. ಮೂರು ವರ್ಷಗಳ ಬಳಿಕ ಅವರು ಜೆಡಿಯುನಿಂದ ಅಸಮಾಧಾನಗೊಂಡು ಬಿಜೆಪಿ ಸೇರಿದರು. 2020ರ ವಿಧಾನಸಭಾ ಚುನಾವಣೆಯಲ್ಲಿನ ಗೆಲುವಿನ ಬಳಿಕ ಅವರು, ನಿತೀಶ್ ಕುಮಾರ್ ನೇತೃತ್ವದ ಎನ್‌ಡಿಎ ಸರ್ಕಾರದಲ್ಲಿ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. 2023ರ ಮಾರ್ಚ್‌ನಲ್ಲಿ ಚೌಧರಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ನೇಮಕಗೊಂಡರು.

ಎಬಿವಿಪಿಯಿಂದ ಬೆಳೆದ ವಿಜಯ್ ಕುಮಾರ್ ಸಿನ್ಹಾ



ಪಟ್ನಾ (ಪಿಟಿಐ): ಬಿಹಾರದಲ್ಲಿ ನಿತೀಶ್ ಕುಮಾರ್ ನೇತೃತ್ವದ ನೂತನ ಸರ್ಕಾರದ ಇಬ್ಬರು ಉಪ ಮುಖ್ಯಮಂತ್ರಿಗಳ ಪೈಕಿ ವಿಜಯ್ ಕುಮಾರ್ ಸಿನ್ಹಾ ಅವರೂ ಒಬ್ಬರು.

64 ವರ್ಷದ ಸಿನ್ಹಾ ಅವರು, ಪ್ರಭಾವಿ ಭೂಮಿಹಾರ್ ಸಮುದಾಯಕ್ಕೆ ಸೇರಿದ ಬಿಜೆಪಿ ನಾಯಕ. ಸತತ ಮೂರು ಬಾರಿ ಶಾಸಕರಾಗಿರುವ ಅವರು, ಈ ಹಿಂದೆ ಸಂಪುಟ ದರ್ಜೆ ಸಚಿವರಾಗಿ, ವಿಧಾನಸಭೆಯ ಸ್ಪೀಕರ್ ಆಗಿ, ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆಲಖಿಸರಾಯ್ ಜಿಲ್ಲೆಯ ಶಾಲಾ ಶಿಕ್ಷಕರ ಮಗನಾದ ಸಿನ್ಹಾ ಅವರು ವಿದ್ಯಾರ್ಥಿಯಾಗಿದ್ದಾಗ ಎಬಿವಿಪಿಯಲ್ಲಿ ಸಕ್ರಿಯರಾಗಿದ್ದರು. ನಂತರ ಆರ್‌ಎಸ್‌ಎಸ್‌ನಲ್ಲಿ ಸಕ್ರಿಯರಾದರು.

ಬಿಹಾರ: ಮತ್ತೆ ನಿತೀಶ್ ಕುಮಾರ್ ಸಿ.ಎಂ

ಒಂದನೇ ಪುಟದಿಂದ...

ಜೆಡಿಯು ಶಾಸಕರಾದ ವಿಜಯ್ ಕುಮಾರ್ ಚೌಧರಿ, ವಿಜೇಂದ್ರ ಯಾದವ್, ಶ್ರವಣ್ ಕುಮಾರ್, ಮಾಜಿ ಮುಖ್ಯಮಂತ್ರಿ ಜಿತನ್ ರಾಮ್ ಮಾಂಝಿ ನೇತೃತ್ವದ ಹಿಂದೂಸ್ತಾನ್ ಅವಾಮ್ ಮೋರ್ಚಾದ ಸಂತೋಷ್ ಕುಮಾರ್ ಸುಮನ್, ಪಕ್ಷೇತರ ಶಾಸಕ ಸುಮಿತ್ ಸಿಂಗ್ ಅವರೂ ಪ್ರಮಾಣ ವಚನ ಸ್ವೀಕರಿಸಿದರು.

ಎನ್‌ಡಿಎ ಬಿಡಲ್ಲ– ನಿತೀಶ್: ‘ನಾನು ಹಿಂದೆಯೂ ಅವರ (ಎನ್‌ಡಿಎ) ಜತೆಯಲ್ಲಿ ಇದ್ದೆ. ಬಳಿಕ ನಾವು ಭಿನ್ನ ಹಾದಿಯಲ್ಲಿ ಸಾಗಿದೆವು. ಈಗ ಒಟ್ಟಿಗೆ ಇದ್ದೇವೆ ಮತ್ತು ಹಾಗೇ ಇರುತ್ತೇವೆ... ನಾನು ಮೊದಲು ಇದ್ದ ಜಾಗಕ್ಕೆ (ಎನ್‌ಡಿಎ) ಹಿಂತಿರುಗಿದ್ದೇನೆ. ಈಗ ಎಲ್ಲಿಯೂ ಹೋಗುವ ಪ್ರಶ್ನೆಯೇ ಇಲ್ಲ’ ಎಂದು 72 ವರ್ಷದ ನಿತೀಶ್ ಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

‘ಇಬ್ಬರು ಉಪ ಮುಖ್ಯಮಂತ್ರಿ ಸೇರಿ ಒಟ್ಟು 8 ಮಂದಿ ಸಚಿವರಾಗಿ ಭಾನುವಾರ ಪ್ರಮಾಣ ವಚನ ಸ್ವೀಕರಿಸಿದ್ದು, ಉಳಿದವರ ಹೆಸರನ್ನು ಶೀಘ್ರವೇ ಅಂತಿಮಗೊಳಿಸಲಾಗುವುದು’ ಎಂದರು.

ಸರ್ಕಾರ ರಚಿಸಲು ಬಿಜೆಪಿ ಸಮ್ಮತಿ:

ತನ್ನ ಜತೆಗೂಡಿ ಸರ್ಕಾರ ರಚಿಸಲು ಮುಂದಾದ ಜೆಡಿಯು ಪಕ್ಷಕ್ಕೆ ಬಿಜೆಪಿ ಶಾಸಕರು ತ್ವರಿತವಾಗಿಯೇ ಸಮ್ಮತಿ ಸೂಚಿಸಿದರು. ರಾಜಕೀಯ ಬೆಳವಣಿಗೆಗಳ ಬೆನ್ನಲ್ಲೇ ಪಕ್ಷದ ಪ್ರಧಾನ ಕಚೇರಿಯಲ್ಲಿ ಬಿಜೆಪಿ ಶಾಸಕರೆಲ್ಲ ಸೇರಿದ್ದರು. ಸರ್ಕಾರ ರಚನೆಯ ಪ್ರಸ್ತಾವ ಜೆಡಿಯು ಕಡೆಯಿಂದ ಬಂದ ಕೂಡಲೇ, ಅದನ್ನು ಬೆಂಬಲಿಸುವ ಮೂಲಕ ರಾಜ್ಯದಲ್ಲಿ ಎನ್‌ಡಿಎ ಸರ್ಕಾರ ರಚನೆಗೆ ನಮ್ಮ ಎಲ್ಲ ಶಾಸಕರೂ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದರು ಎಂದು ರಾಜ್ಯ ಬಿಜೆಪಿ ಉಸ್ತುವಾರಿ ವಿನೋದ್ ತಾವ್ಡೆ ಪ್ರತಿಕ್ರಿಯಿಸಿದರು.

ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಸಾಮ್ರಾಟ್ ಚೌಧರಿ ಮತ್ತು ಮಾಜಿ ಸ್ಪೀಕರ್ ವಿಜಯ್ ಕುಮಾರ್ ಸಿನ್ಹಾ ಅವರನ್ನು ಕ್ರಮವಾಗಿ ಶಾಸಕಾಂಗ ಪಕ್ಷದ ನಾಯಕ ಮತ್ತು ಉಪ ನಾಯಕರನ್ನಾಗಿ ಆರಿಸಲಾಯಿತು. ತಮ್ಮ ಆಯ್ಕೆ ಆಗುತ್ತಿದ್ದಂತೆಯೇ ಉಭಯ ನಾಯಕರೂ, ‘ಲಾಲು ಪ್ರಸಾದ್ ಮತ್ತು ಆರ್‌ಜೆಡಿಯ ಜಂಗಲ್ ರಾಜ್‌ನಿಂದ ಬಿಹಾರನ್ನು ರಕ್ಷಿಸುವುದಾಗಿ’ ಪ್ರತಿಜ್ಞೆ ಮಾಡಿದರು.

ಬಳಿಕ ತಾವ್ಡೆ ಮತ್ತು ಚೌಧರಿ ಅವರು ನಿತೀಶ್ ಕುಮಾರ್ ನಿವಾಸಕ್ಕೆ ಹೋದರು. ಅಲ್ಲಿಂದ ಎಲ್ಲರೂ ಹೊಸ ಸರ್ಕಾರ ರಚನೆಯ ಹಕ್ಕು ಮಂಡಿಸಲು ರಾಜಭವನಕ್ಕೆ ತೆರಳಿದರು.

ಪ್ರಧಾನಿ ಅಭಿನಂದನೆ: ಪ್ರಮಾಣ ವಚನ ಸ್ವೀಕರಿಸಿದ ಮುಖ್ಯಮಂತ್ರಿ ನಿತೀಶ್ ಕುಮಾರ್ ಮತ್ತು ಇಬ್ಬರು ಉಪ ಮುಖ್ಯಮಂತ್ರಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ‘ಎಕ್ಸ್’ ಮೂಲಕ ಅಭಿನಂದನೆ ಸಲ್ಲಿಸಿದರು.

‘ಎನ್‌ಡಿಎ ಸರ್ಕಾರವು ಬಿಹಾರದ ಅಭಿವೃದ್ಧಿ ಮತ್ತು ಜನರ ಆಶೋತ್ತರಗಳನ್ನು ಈಡೇರಿಸುವ ದಿಸೆಯಲ್ಲಿ ಯಾವುದೇ ಅವಕಾಶವನ್ನೂ ಬಿಡುವುದಿಲ್ಲ. ಹೊಸ ಸರ್ಕಾರವು ಸಂಪೂರ್ಣ ಸಮರ್ಪಣಾ ಮನೋಭಾವದಿಂದ ಜನರ ಸೇವೆ ಮಾಡುತ್ತದೆ ಎಂಬ ವಿಶ್ವಾಸವಿದೆ’ ಎಂದು ಅವರು ಪೋಸ್ಟ್ ಮಾಡಿದರು.

‘ಭಾರತ್ ಜೋಡೊ ನ್ಯಾಯ ಯಾತ್ರೆ’ಯಲ್ಲಿ ರಾಹುಲ್ ಗಾಂಧಿ ಆಕ್ರೋಶ

‘ಕೇಂದ್ರದಿಂದ ದೇಶದಲ್ಲಿ ದ್ವೇಷ ಹರಡುವ ಕೆಲಸ’

ಸಿಲಿಗುರಿ (ಪಶ್ಚಿಮ ಬಂಗಾಳ) (ಪಿಟಿಐ): ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ದೇಶದಾದ್ಯಂತ ದ್ವೇಷ ಮತ್ತು ಹಿಂಸೆಯನ್ನು ಹರಡುವ ಕೆಲಸ ಮಾಡುತ್ತಿದೆ. ಬಡವರು ಮತ್ತು ಯುವಕರ ಹಿತವನ್ನು ಕಡೆಗಣಿಸಿ ಬೃಹತ್ ಕಾರ್ಪೊರೇಟ್ ಸಂಸ್ಥೆಗಳಿಗಾಗಿ ಕೆಲಸ ಮಾಡುತ್ತಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ಆರೋಪಿಸಿದರು.

‘ಅಲ್ಪಾವಧಿ ನೇಮಕಾತಿಯ ಅಗ್ನಿವೀರ್ ಯೋಜನೆಯನ್ನು ಜಾರಿಗೆ ತರುವ ಮೂಲಕ ಕೇಂದ್ರ ಸರ್ಕಾರವು ಸಶಸ್ತ್ರ ಪಡೆಗಳನ್ನು ಸೇರಬಯಸಿದ್ದ ಯುವಕರನ್ನು ಅಣಕಿಸುವ ಕೆಲಸ ಮಾಡಿದೆ’ ಎಂದು ದೂರಿದರು. ‘ಭಾರತ್ ಜೋಡೊ ನ್ಯಾಯ ಯಾತ್ರೆ’ಯಲ್ಲಿ ಅವರು ಸಿಲಿಗುರಿಯಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು.

‘ದ್ವೇಷ ಮತ್ತು ಹಿಂಸೆಯನ್ನು ದೇಶದಾದ್ಯಂತ ಹರಡಲಾಗುತ್ತಿದೆ. ಇದು ಯಾವ ಉದ್ದೇಶವನ್ನೂ ಈಡೇರಿಸುವುದಿಲ್ಲ. ದ್ವೇಷ ಹರಡುವ ಬದಲು ನಾವು ನಮ್ಮ ಯುವಕರಿಗಾಗಿ ಪ್ರೀತಿ ಮತ್ತು ನ್ಯಾಯವನ್ನು ಹರಡುವ ಕೆಲಸ ಮಾಡಬೇಕು’ ಎಂದು ಅವರು ಹೇಳಿದರು.

‘ಬಂಗಾಳಕ್ಕೆ ವಿಶೇಷ ಸ್ಥಾನ ಇದೆ. ಇದು ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಸೈದ್ಧಾಂತಿಕ ಹೋರಾಟಕ್ಕೆ ನಾಯಕತ್ವ ಒದಗಿಸಿದೆ. ಪ್ರಸಕ್ತ ಸಂದರ್ಭದಲ್ಲಿ ದ್ವೇಷದ ವಿರುದ್ಧದ ಹೋರಾಟಕ್ಕೆ ಹಾಗೂ ದೇಶವನ್ನು ಒಂದಾಗಿಸುವುದಕ್ಕೆ ದಾರಿ ತೋರಿಸುವ ಕೆಲಸ ಮಾಡುವುದು ಬಂಗಾಳ ಮತ್ತು ಬಂಗಾಳಿಗಳ ಕರ್ತವ್ಯ’ ಎಂದು ಹೇಳಿದರು.

‘ಅಸಾಧಾರಣ ಸಂದರ್ಭ ಎದುರಾದಾಗ ಅದಕ್ಕೆ ಅಗತ್ಯವಾದ ಪ್ರತಿಕ್ರಿಯೆ ನೀಡದೆ ಇದ್ದಲ್ಲಿ ಜನ ನಿಮ್ಮನ್ನು ಯಾವತ್ತಿಗೂ ಕ್ಷಮಿಸುವುದಿಲ್ಲ’ ಎಂದು ರಾಹುಲ್ ಎಚ್ಚರಿಸಿದರು.

ಜಾತಿಗಣತಿ– ತೆಲಂಗಾಣ ಸಿ.ಎಂಗೆ ರಾಹುಲ್ ಶ್ಲಾಘನೆ: ನವದೆಹಲಿ (ಪಿಟಿಐ): ಜಾತಿಗಣತಿ ಮಾಡುವುದಾಗಿ ಘೋಷಿಸಿರುವುದಕ್ಕೆ ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಅವರನ್ನು ಕಾಂಗ್ರೆಸ್ ಮುಖಂಡ ರಾಹುಲ್‌ಗಾಂಧಿ ಭಾನುವಾರ ಅಭಿನಂದಿಸಿದ್ದಾರೆ. ಇದು ನ್ಯಾಯಕ್ಕಾಗಿ ರೇವಂತ್ ರೆಡ್ಡಿ ಇಟ್ಟಿರುವ ಮೊದಲ ಹೆಜ್ಜೆ ಎಂದು ಶ್ಲಾಘಿಸಿದ್ದಾರೆ.

ಸಮಾಜದ ಎಲ್ಲ ವರ್ಗಗಳ ಸಹಭಾಗಿತ್ವವನ್ನು ಖಾತರಿಪಡಿಸಿಕೊಳ್ಳುವ ಏಕೈಕ ಮಾರ್ಗ ಜಾತಿಗಣತಿ ಮಾಡುವುದಾಗಿದೆ. ಯಾವುದೇ ಸಮಾಜದಲ್ಲಿನ ಸಾಮಾಜಿಕ, ಆರ್ಥಿಕ ಆರೋಗ್ಯವನ್ನು ಅರಿಯದೆ ಸೂಕ್ತ ರೀತಿಯಲ್ಲಿ ಯೋಜನೆಗಳನ್ನು ರೂಪಿಸಲಾಗದು. ದೇಶದ ಅಭಿವೃದ್ಧಿಯ ದೃಷ್ಟಿಯಿಂದಲೂ ಎಲ್ಲ ವರ್ಗಗಳ ಪಾಲ್ಗೊಳ್ಳುವಿಕೆಯು ಮುಖ್ಯವಾಗಿದ್ದು, ಜಾತಿಗಣತಿಯಿಂದ ಇದು ಸಾಧ್ಯವಾಗಲಿದೆ ಎಂದು ಅವರು ‘ಎಕ್ಸ್’ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ತೆಲಂಗಾಣದಲ್ಲಿ ಜಾತಿಗಣತಿ ಮಾಡುವುದಾಗಿ ರೇವಂತ್ ರೆಡ್ಡಿ ಶನಿವಾರ ಘೋಷಿಸಿದ್ದರು.

ಭಾರತೀಯರು ‘ಅನ್ಯಾಯ ಕಾಲ’ದಲ್ಲಿದ್ದಾರೆ: ಖೇರಾ

ನವದೆಹಲಿ (ಪಿಟಿಐ): ದೇಶದ 140 ಕೋಟಿ ಜನರು ಬಿಜೆಪಿ ಹೇರಿರುವ ‘ಅನ್ಯಾಯ ಕಾಲ’ದಲ್ಲಿ ಬದುಕುತ್ತಿದ್ದಾರೆ ಎಂದು ಕಾಂಗ್ರೆಸ್ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಭಾನುವಾರ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಮತ್ತು ಅದರ ಆರ್ಥಿಕತೆಯಲ್ಲಿ ವಾಸ್ತವವಾಗಿ ಏನು ನಡೆಯುತ್ತಿದೆ ಎಂಬುದನ್ನು ಮುಚ್ಚಿಟ್ಟು, ತಳಕು ಬಳುಕನ್ನು ತೋರುವ ಕಲೆಯನ್ನು ಬಿಜೆಪಿ ಸರ್ಕಾರವು ಕರಗತ ಮಾಡಿಕೊಂಡಿದೆ ಎಂದರು.

‘ಉತ್ತರ ಪ್ರದೇಶ ಮತ್ತು ಹರಿಯಾಣದ ಯುವಕರು ಯುದ್ಧದಲ್ಲಿ ಪಾಲ್ಗೊಳ್ಳಲು ಇಸ್ರೇಲ್‌ಗೆ ತೆರಳಲು ಸರದಿಯಲ್ಲಿ ನಿಂತಿರುವುದು ದೇಶದ ಆರ್ಥಿಕತೆಯ ವಾಸ್ತವ ಸ್ಥಿತಿಗೆ ಉದಾಹರಣೆ’ ಎಂದು ಹೇಳಿದರು.

ಇನ್ನೊಂದು ದೇಶಕ್ಕಾಗಿ ಯುದ್ಧಕ್ಕಾಗಿ ತೆರಳಲು ಸಿದ್ಧರಾಗಿರುವ ಯುವಕರ ಮಾಸಿಕ ವರಮಾನ ₹10 ಸಾವಿರ. ಇಸ್ರೇಲ್ ಅವರಿಗೆ ಇದಕ್ಕಿಂತ 13–14 ಪಟ್ಟು ಹೆಚ್ಚು ಸಂಬಳ ನೀಡುವ ಭರವಸೆ ನೀಡಿದೆ ಎಂದು ತಿಳಿಸಿದರು.

ಉತ್ತರ ಪ್ರದೇಶದಲ್ಲಿ 60 ಸಾವಿರ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳಿಗೆ 51 ಲಕ್ಷ ಮಂದಿ ಅರ್ಜಿ ಸಲ್ಲಿಸಿದ್ದಾರೆ. ಇದು ದುರದೃಷ್ಟಕರ ಎಂದಿದ್ದಾರೆ.

ಶಾಸಕರ ಖರೀದಿ ಪ್ರಜಾಪ್ರಭುತ್ವಕ್ಕೆ ಮಾರಕ: ಚಡ್ಡಾ



ರಾಘವ ಚಡ್ಡಾ

ನವದೆಹಲಿ (ಪಿಟಿಐ): ತನಿಖಾ ಸಂಸ್ಥೆಗಳಿಂದ ಬೆದರಿಕೆಯೊಡ್ಡುವ ಮೂಲಕ ಹಾಗೂ ಹಣದ ಆಮಿಷವೊಡ್ಡಿ ಶಾಸಕರನ್ನು ಖರೀದಿಸಿ, ಸರ್ಕಾರಗಳನ್ನು ಬೀಳಿಸುವುದು ಪ್ರಜಾಪ್ರಭುತ್ವಕ್ಕೆ ಮಾರಕ ಎಂದು ಎಎಪಿ ರಾಜ್ಯಸಭಾ ಸದಸ್ಯ ರಾಘವ ಚಡ್ಡಾ ಭಾನುವಾರ ಹೇಳಿದ್ದಾರೆ.

‘ಪಕ್ಷಾಂತರ ವಿರೋಧಿ ಕಾನೂನಿನ ಬಲವರ್ಧನೆಗಾಗಿ ಕಳೆದ ವರ್ಷ ಸಂಸತ್‌ನಲ್ಲಿ ನಾನು ಮಸೂದೆ ಮಂಡಿಸಿದ್ದೆ. ಇಂದು ಪ್ರಜಾಪ್ರಭುತ್ವವನ್ನು ಉಳಿಸಲು ಈ ಮಸೂದೆಯು ಅಗತ್ಯವಾಗಿದೆ’ ಎಂದು ಅವರು ‘ಎಕ್ಸ್’ ಸಾಮಾಜಿಕ ಮಾಧ್ಯಮದಲ್ಲಿ ಹೇಳಿದ್ದಾರೆ.

ಪಕ್ಷ ತೊರೆಯಲು ಎಎಪಿಯ ಏಳು ಶಾಸಕರಿಗೆ ಬಿಜೆಪಿಯು ತಲಾ ₹25 ಕೋಟಿ ನೀಡುವುದಾಗಿ ಆಮಿಷವೊಡ್ಡಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಶನಿವಾರ ಆರೋಪಿಸಿದ್ದರು.

ಮೀಸಲಾತಿಯಲ್ಲಿ ಬದಲಾವಣೆಯಿಲ್ಲ: ಕೇಂದ್ರ ಸ್ಪಷ್ಟನೆ

ನವದೆಹಲಿ (ಪಿಟಿಐ): ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಹುದ್ದೆಗಳ ಭರ್ತಿಗೆ ಸಂಬಂಧಿಸಿದ ಮೀಸಲಾತಿ ಕುರಿತಂತೆ ವಿಶ್ವವಿದ್ಯಾಲಯ ಧನಸಹಾಯ ಆಯೋಗವು (ಯುಜಿಸಿ) ಹೊರಡಿಸಿದ ಕರಡು ಮಾರ್ಗಸೂಚಿಗೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಹೀಗಾಗಿ ಕೇಂದ್ರ ಶಿಕ್ಷಣ ಸಚಿವಾಲಯವು ‘ಮೀಸಲಾತಿಯಲ್ಲಿ ಯಾವುದೇ ಬದಲಾವಣೆ ಇಲ್ಲ’ ಎಂದು ಭಾನುವಾರ ಸ್ಪಷ್ಟನೆ ನೀಡಿದೆ.

‘ಮೀಸಲಾತಿಯಡಿ ಹುದ್ದೆ ಭರ್ತಿಯ ಬಳಿಕ ಖಾಲಿ ಉಳಿದ ಸ್ಥಾನಗಳು ಸಹ ಆಯಾ ಮೀಸಲಾತಿಗೇ ಸೀಮಿತವಾಗಿ ಉಳಿಯಲಿವೆ’ ಎಂದು ತಿಳಿಸಿದೆ.

ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಮೀಸಲಾದ ಕೋಟಾದಡಿ ಹುದ್ದೆಗಳು ಖಾಲಿ ಉಳಿದರೆ, ಅವನ್ನು ಮೀಸಲಾತಿಯಿಂದ ಹೊರ ತರುವ ಕುರಿತಂತೆ ಕರಡು ಮಾರ್ಗಸೂಚಿಯೊಂದನ್ನು ಬಿಡುಗಡೆಗೊಳಿಸಿದ್ದ ಯುಜಿಸಿ, ಸಾರ್ವಜನಿಕರಿಂದ ಪ್ರತಿಕ್ರಿಯೆ ಆಹ್ವಾನಿಸಿತ್ತು. ಮಾರ್ಗಸೂಚಿ ಬಿಡುಗಡೆಗೊಂಡ ನಂತರ ಎಲ್ಲೆಡೆಯಿಂದ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ‘ಪರಿಶಿಷ್ಟರು, ಹಿಂದುಳಿದವರು, ಬುಡಕಟ್ಟು ಜನಾಂಗದವರಿಗೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಹುದ್ದೆಗಳಲ್ಲಿ ನೀಡಲಾಗುವ ಮೀಸಲಾತಿ ಕೊನೆಗೊಳಿಸಲು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಪಿತೂರಿ ನಡೆಸಿದೆ’ ಎಂದು ಕಾಂಗ್ರೆಸ್ ದೂರಿತ್ತು.



ಹಿಮಪಾತ

ಜಮ್ಮು ಮತ್ತು ಕಾಶ್ಮೀರದ ಗುಲ್ಮಾರ್ಗ್ ಜಿಲ್ಲೆಯಲ್ಲಿ ಎರಡು ತಿಂಗಳ ಬಿಡುವಿನ ನಂತರ ಮತ್ತೆ ಹಿಮ ಸುರಿದಿದೆ. ಭಾನುವಾರ ಇಲ್ಲಿನ ರೆಸಾರ್ಟ್ ಒಂದರ ಬಳಿ ಪ್ರವಾಸಿಗರು, ಸಣ್ಣ ಪ್ರಮಾಣದಲ್ಲಿ ಸುರಿಯುತ್ತಿದ್ದ ಹಿಮದ ನಡುವೆ ಹೆಜ್ಜೆ ಹಾಕಿದ ದೃಶ್ಯ. –ಪಿಟಿಐ ಚಿತ್ರ

ಅರುಣ್ ಯೋಗಿರಾಜ್ ಮೂರ್ತಿಗೆ ಸುದರ್ಶನ್ ಮೆಚ್ಚುಗೆ

ನವದೆಹಲಿ (ಪಿಟಿಐ): ಬಾಲರಾಮನ ಮೂರ್ತಿ ರೂಪಿಸಿದ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಮರಳು ಕಲೆಯಲ್ಲಿ ಛಾಪು ಮೂಡಿಸಿರುವ ಕಲಾವಿದ ಸುದರ್ಶನ್ ಪಟ್ನಾಯಕ್ ಹೊಗಳಿದ್ದಾರೆ.

‘ಲಕ್ಷಗಟ್ಟಲೆ ಜನರಿಗೆ ನೀವು ಸ್ಫೂರ್ತಿ. ನಿಮ್ಮ ಬಾಲರಾಮನ ಮೂರ್ತಿ ಕಲಾವಿದನಾಗಿ ನನ್ನ ಹೃದಯಕ್ಕೆ ತಟ್ಟಿತು. ಮೂರ್ತಿಯಲ್ಲಿನ ದೈವಿಕತೆಯು ಅನೇಕರಿಗೆ ಸ್ಫೂರ್ತಿ ನೀಡಬಲ್ಲದು’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಹಾಕಿದ್ದಾರೆ.

‘ವಿಶ್ವದಲ್ಲೇ ದೊಡ್ಡ ಕಲಾವಿದರಾಗಿರುವ ತಮ್ಮಂತಹವರಿಂದ ಮೆಚ್ಚುಗೆ ಪಡೆಯುವುದು ನನಗೆ ಹೆಮ್ಮೆಯ ವಿಷಯ. ಕಲಾವಿದನಾಗಿ ಇನ್ನಷ್ಟು ಕೆಲಸಗಳನ್ನು ಮಾಡಲು ಇದು ಪ್ರೇರಣೆ ನೀಡುತ್ತದೆ’ ಎಂದು ಅರುಣ್ ಯೋಗಿರಾಜ್ ಈ ಪೋಸ್ಟ್‌ಗೆ ಪ್ರತಿಕ್ರಿಯಿಸಿದ್ದಾರೆ.

ಸುಪ್ರೀಂ ಕೋರ್ಟ್ ಸಂಕೀರ್ಣಕ್ಕೆ ₹ 800 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಸುಪ್ರೀಂ ಕೋರ್ಟ್‌ನ ಕಟ್ಟಡ ಸಂಕೀರ್ಣದ ವಿಸ್ತರಣೆಗಾಗಿ ಕೇಂದ್ರ ಸರ್ಕಾರವು ₹ 800 ಕೋಟಿ ಮೊತ್ತದ ಯೋಜನೆಗೆ ಅನುಮೋದನೆ’ ನೀಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಇಲ್ಲಿ ಹೇಳಿದರು.

ಸುಪ್ರೀಂ ಕೋರ್ಟ್‌ನ ವಜ್ರ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ‘ಸುಲಲಿತ ನ್ಯಾಯವು ಪ್ರತಿಯೊಬ್ಬ ಭಾರತೀಯ ನಾಗರಿಕನ ಹಕ್ಕು. ಸುಪ್ರೀಂ ಕೋರ್ಟ್ ಇದನ್ನು ಒದಗಿಸುವ ಮಾಧ್ಯಮವಾಗಿದೆ’ ಎಂದು ತಿಳಿಸಿದರು.

‘ಸುಲಲಿತ ಬದುಕು, ವ್ಯವಹಾರ, ಪ್ರಯಾಣ, ಸಂವಹನವು ಸೇರಿದಂತೆ ಸುಲಲಿತ ನ್ಯಾಯವು ದೇಶದ ಪ್ರಮುಖ ಆದ್ಯತೆಗಳಾಗಿವೆ’ ಎಂದು ಮೋದಿ ಉಲ್ಲೇಖಿಸಿದರು.

‘ದೇಶದಲ್ಲಿನ ಸಂಪೂರ್ಣ ನ್ಯಾಯ ವ್ಯವಸ್ಥೆಯನ್ನು ನಿರ್ವಹಿಸುತ್ತಿರುವ ಸುಪ್ರೀಂ ಕೋರ್ಟ್, ಮಾರ್ಗದರ್ಶನವನ್ನು ನೀಡುತ್ತಿದೆ. ಎಲ್ಲ ಭಾಗಕ್ಕೂ ನ್ಯಾಯಾಲಯವು ಪ್ರವೇಶಿಸುವ ನಿಟ್ಟಿನಲ್ಲಿ ಸರ್ಕಾರ ಆದ್ಯತೆ ನೀಡುತ್ತಿದೆ. ಇ ಕೋರ್ಟ್ ಮಿಷನ್ ಯೋಜನೆಯ ಮೂರನೇ ಹಂತಕ್ಕೆ ಒಪ್ಪಿಗೆ ನೀಡಲಾಗುವುದು. ಮೂರನೇ ಹಂತದ ಅನುದಾನ ಹಂಚಿಕೆಯು ಎರಡನೇ ಹಂತಕ್ಕಿಂತ ನಾಲ್ಕು ಪಟ್ಟು ಹೆಚ್ಚಿರಲಿದೆ’ ಎಂದು ಅವರು ಹೇಳಿದರು.

ದೇಶದ ಎಲ್ಲಾ ನ್ಯಾಯಾಲಯಗಳ ಡಿಜಿಟಲೀಕರಣವನ್ನು ಮುಖ್ಯ ನ್ಯಾಯಮೂರ್ತಿಯವರೇ ಮೇಲ್ವಿಚಾರಣೆ ಮಾಡುತ್ತಿದ್ದಾರೆ ಎಂದು ಪ್ರಧಾನಿ ಸಂತಸ ವ್ಯಕ್ತಪಡಿಸಿದರು.

‘ಹಳೆಯದರಿಂದ ಹೊಸದಕ್ಕೆ ತಡೆರಹಿತ ವರ್ಗಾವಣೆಯನ್ನು ಖಾತ್ರಿಪಡಿಸಲು ಎಲ್ಲ ಮಧ್ಯಸ್ಥಗಾರರ ಸಾಮರ್ಥ್ಯ ವರ್ಧನೆಯಲ್ಲಿ ತೊಡಗಿಸಿಕೊಳ್ಳುವ ಹಕ್ಕು ಪ್ರತಿಯೊಬ್ಬ ನಾಗರಿಕರಿಗೂ ಮತ್ತು ಸುಪ್ರೀಂ ಕೋರ್ಟ್‌ಗೂ ಇದೆ’ ಎಂದು ಅವರು ಒತ್ತಿ ಹೇಳಿದರು.



ಸುಪ್ರೀಂ ಕೋರ್ಟ್‌ನ ಸಭಾಂಗಣದಲ್ಲಿ ಭಾನುವಾರ ನಡೆದ ವಜ್ರ ಮಹೋತ್ಸವದಲ್ಲಿ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸ್ಮರಣಿಕೆ ನೀಡಿದರು

–ಪಿಟಿಐ ಚಿತ್ರ

‘ರಕ್ಷಣಾ ಸಾಮಗ್ರಿ ರಫ್ತು: 25 ದೇಶಗಳ ಪಟ್ಟಿಯಲ್ಲಿ ಭಾರತ’

ನಾಗ್ಪುರ (ಪಿಟಿಐ): ರಕ್ಷಣಾ ಸಾಮಗ್ರಿಗಳನ್ನು ರಫ್ತು ಮಾಡುವ 25 ಅಗ್ರ ದೇಶಗಳ ಪಟ್ಟಿಯಲ್ಲಿ ಭಾರತವು ಇದೇ ಮೊದಲ ಬಾರಿಗೆ ಸ್ಥಾನ ಪಡೆದಿದೆ ಎಂದು ರಕ್ಷಣಾ ಖಾತೆಯ ರಾಜ್ಯ ಸಚಿವ ಅಜಯ್ ಭಟ್ ಭಾನುವಾರ ಹೇಳಿದ್ದಾರೆ.

ನಾಗ್ಪುರದಲ್ಲಿ ಹಮ್ಮಿಕೊಂಡಿದ್ದ ‘ಅಡ್ವಾಂಟೇಜ್ ವಿದರ್ಭ’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಕ್ಷಣಾ ಸಾಮಗ್ರಿಗಳ ತಯಾರಿಕೆಯಲ್ಲಿ ದೇಶವು ಸ್ವಾವಲಂಬಿಯಾಗುತ್ತಿದೆ ಎಂದಿದ್ದಾರೆ. 2017–18ನೇ ಸಾಲಿನಲ್ಲಿ ₹4,682 ಕೋಟಿ ಮೌಲ್ಯದ ರಕ್ಷಣಾ ಸಾಮಗ್ರಿಗಳನ್ನು ರಫ್ತು ಮಾಡಿದ್ದು, 2022–23ನೇ ಸಾಲಿನಲ್ಲಿ ₹15,916 ಕೋಟಿ ಮೌಲ್ಯದ ರಕ್ಷಣಾ ಸಾಮಗ್ರಿಗಳನ್ನು ರಫ್ತು ಮಾಡಲಾಗಿದೆ ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

‘ಸಂವಿಧಾನ ರಚಿಸಿದವರಿಗೆ ರಾಮ ಸ್ಫೂರ್ತಿಯ ಸೆಲೆ’

ನವದೆಹಲಿ (ಪಿಟಿಐ): ಅಯೋಧ್ಯೆ ರಾಮಮಂದಿರದಲ್ಲಿ ಬಾಲರಾಮನ ಪ್ರತಿಷ್ಠಾಪನೆ ಕಾರ್ಯಕ್ರಮವು ಕೋಟ್ಯಂತರ ಜನರನ್ನು ಒಟ್ಟಿಗೆ ಸೇರಿಸಿತು. ಅಲ್ಲದೆ, ಈ ವೇಳೆ ದೇಶದ ಒಟ್ಟಾರೆ ಸಾಮರ್ಥ್ಯ ಗೋಚರವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ವರ್ಷದ ಮೊದಲ ತಿಂಗಳ ರೇಡಿಯೊ ಕಾರ್ಯಕ್ರಮ ‘ಮನದ ಮಾತು’ವಿನಲ್ಲಿ ‘ಸಂವಿಧಾನ ರಚಿಸಿದವರಿಗೆ ಶ್ರೀರಾಮನೇ ಸ್ಫೂರ್ತಿಯ ಸೆಲೆ’ ಎಂದು ಪ್ರತಿಪಾದಿಸಿದರು.

‘ಇದೇ ಕಾರಣಕ್ಕಾಗಿ ಜನವರಿ 22ರಂದು ಅಯೋಧ್ಯೆಯಲ್ಲಿ ನಾನು ‘ದೇವನಿಂದ ದೇಶ’ ಮತ್ತು ‘ರಾಮನಿಂದ ರಾಷ್ಟ್ರ’ ಎಂದು ಮಾತನಾಡಿದ್ದೇನೆ. ಪ್ರತಿಯೊಬ್ಬರ ಭಾವನೆ ಮತ್ತು ಭಕ್ತಿ ಒಂದೇ ಆಗಿತ್ತು. ಪ್ರತಿಯೊಬ್ಬರ ಮನದಲ್ಲಿ ರಾಮನಿದ್ದಾನೆ’ ಎಂದು ಹೇಳಿದರು.

‘ಜನವರಿ 22ರ ಸಂಜೆ ಇಡೀ ದೇಶವೇ ರಾಮ ಜ್ಯೋತಿಯನ್ನು ಬೆಳಗಿ, ದೀಪಾವಳಿಯನ್ನು ಆಚರಿಸಿತು. ಪ್ರತಿಯೊಬ್ಬರೂ ರಾಮನ ಭಜನೆ ಮಾಡಿ, ತಮ್ಮನ್ನು ರಾಮನಿಗೆ ಅರ್ಪಿಸಿಕೊಂಡರು. ಒಗ್ಗಟ್ಟಿನ ಶಕ್ತಿಯು ದೇಶವನ್ನು ಪ್ರಗತಿಯ ಹೊಸ ಉತ್ತುಂಗಕ್ಕೆ ಕೊಂಡೊಯ್ಯಲಿದೆ’ ಎಂದರು.

ಕಾಜಿರಂಗ: 2 ಹೊಸ ಪ್ರಾಣಿಗಳು ಪ್ರತ್ಯಕ್ಷ

ಗುವಾಹಟಿ (ಪಿಟಿಐ): ಇಲ್ಲಿನ ಕಾಜಿರಂಗ ರಾಷ್ಟ್ರೀಯ ಉದ್ಯಾನದಲ್ಲಿ ‘ಬಿಂಟುರಾಂಗ್’ ಅಥವಾ ‘ಬೇರ್‌ಕ್ಯಾಟ್’ (ಪುನುಗು ಬೆಕ್ಕು ಪ್ರಭೇದಕ್ಕೆ ಸೇರಿದ ಪ್ರಾಣಿ) ಮತ್ತು ನೀರು ನಾಯಿ ಹೊಸದಾಗಿ ಪತ್ತೆಯಾಗಿವೆ. ಈ ಮೂಲಕ ಹುಲಿ ಸಂರಕ್ಷಿತ ಅರಣ್ಯದಲ್ಲಿ ಈವರೆಗೆ ಒಟ್ಟಾರೆ 37 ಸಸ್ತನಿಗಳು ರಕ್ಷಣೆ ಪಡೆದಂತಾಗಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ನೀರು ಹಕ್ಕಿಗಳನ್ನು ಸಮೀಕ್ಷೆ ಮಾಡುವ ವೇಳೆ ಈ ಎರಡು ಪ್ರಾಣಿಗಳು ಕಂಡುಬಂದಿವೆ ಎಂದು ಉದ್ಯಾನದ ನಿರ್ದೇಶಕಿ ಸೋನಾಲಿ ಘೋಷ್ ತಿಳಿಸಿದ್ದಾರೆ.

ಭಾರತದಲ್ಲಿ ಪುನುಗು ಬೆಕ್ಕಿನ ಪ್ರಭೇದಕ್ಕೆ ಸೇರಿದ ಅತಿದೊಡ್ಡ ಪ್ರಾಣಿ ಎಂದು ಗುರುತಿಸಲಾಗುವ ಬೇರ್‌ಕ್ಯಾಟ್ ಅನ್ನು ಕಾಡುಪ್ರಾಣಿಗಳ ರಕ್ಷಣೆ ಕಾಯ್ದೆ-1972ರಲ್ಲಿ ಸೇರಿಸಲಾಗಿದೆ. ಪಕ್ಷಿಗಳ ಸಮೀಕ್ಷೆ ನಡೆಸುವ ವೇಳೆ ಚಿರಂತನು ಸೈಕಿಯಾ ಎಂಬವರ ಕ್ಯಾಮೆರಾದಲ್ಲಿ ಬೇರ್‌ಕ್ಯಾಟ್ ಸೆರೆಯಾಗಿದೆ. ಆಗ್ನೇಯ ಭಾರತ ಮತ್ತು ದಕ್ಷಿಣ ಭಾಗದಲ್ಲಿ ಕಂಡುಬರುವ ಈ ಪ್ರಾಣಿಯು ರಾತ್ರಿ ಸಂಚರಿಸುವ ಕಾರಣಕ್ಕೆ ಅಷ್ಟು ಸುಲಭವಾಗಿ ಕಣ್ಣಿಗೆ ಬೀಳುವುದಿಲ್ಲ ಎಂದು ಘೋಷ್ ಹೇಳಿದ್ದಾರೆ.

ಅಂಗನವಾಡಿ ಸಿಬ್ಬಂದಿ ವೇತನ ಏರಿಕೆ

ತಿರುವನಂತಪುರ (ಪಿಟಿಐ): ಅಂಗನವಾಡಿ ಕಾರ್ಯಕರ್ತರು ಹಾಗೂ ಸಹಾಯಕರ ಮಾಸಿಕ ವೇತನದಲ್ಲಿ ₹1000ದವರೆಗೆ ಹೆಚ್ಚಳ ಮಾಡುವುದಾಗಿ ಕೇರಳ ಸರ್ಕಾರ ಭಾನುವಾರ ಘೋಷಿಸಿತು.

ಹತ್ತು ವರ್ಷಗಳಿಗಿಂತ ಹೆಚ್ಚು ಸೇವಾ ಅನುಭವ ಇರುವ ಕಾರ್ಯಕರ್ತರು ಹಾಗೂ ಸಹಾಯಕರ ವೇತನವನ್ನು ₹ 1000ದಷ್ಟು ಹೆಚ್ಚಿಸಲಾಗುವುದು. ಉಳಿದವರ ವೇತನದಲ್ಲಿ ₹ 500 ಏರಿಕೆಯಾಗಲಿದೆ ಎಂದು ಕೇರಳ ಹಣಕಾಸು ಸಚಿವ ಕೆ.ಎನ್. ಬಾಲಗೋಪಾಲ್ ಹೇಳಿಕೆಯಲ್ಲಿ ತಿಳಿಸಿದರು.

ಸದ್ಯಕ್ಕೆ ಅಂಗನವಾಡಿ ಕಾರ್ಯಕರ್ತರು ತಿಂಗಳಿಗೆ ₹ 12 ಸಾವಿರ ಹಾಗೂ ಸಹಾಯಕರು ₹ 8 ಸಾವಿರ ವೇತನ ಪಡೆಯುತ್ತಿದ್ದಾರೆ. ಒಟ್ಟು 60,232 ಮಂದಿಗೆ ವೇತನ ಹೆಚ್ಚಳದ ಲಾಭ ದೊರೆಯಲಿದೆ.

ಇ.ಡಿ ಸಮನ್ಸ್; ಸೊರೇನ್ ದೆಹಲಿಗೆ ದೌಡು

ರಾಂಚಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರಿಗೆ ಜಾರಿ ನಿರ್ದೇಶನಾಲಯವು (ಇ.ಡಿ) ಹೊಸದಾಗಿ ಸಮನ್ಸ್ ನೀಡಿದ ಬೆನ್ನಲ್ಲೇ, ಅವರು ದೆಹಲಿಗೆ ಶನಿವಾರ ರಾತ್ರಿ ತೆರಳಿದ್ದಾರೆ. ಅವರ ದೆಹಲಿ ಭೇಟಿಯು ಪೂರ್ವನಿರ್ಧರಿತವಲ್ಲದ ಕಾರಣ ಈ ನಡೆಯು ಸಂಶಯಗಳಿಗೆ ಎಡೆಮಾಡಿದೆ.

ಜನವರಿ 29 ಅಥವಾ 31ರಂದು ವಿಚಾರಣೆಗೆ ಹಾಜರಾಗಲು ಹೇಮಂತ್ ಅವರ ಲಭ್ಯತೆ ಕುರಿತು ಇ.ಡಿ ಪ್ರಶ್ನಿಸಿತ್ತು.

ಕಾನೂನು ಸಲಹೆಗಳನ್ನು ಪಡೆಯಲು ಅವರು ದೆಹಲಿಗೆ ತೆರಳಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆದರೆ, ಈ ಕುರಿತು ಮುಖ್ಯಮಂತ್ರಿ ಕಚೇರಿ ಯಾವುದೇ ಮಾಹಿತಿ ನೀಡಿಲ್ಲ.

‘ಇ.ಡಿಯಿಂದ ಸಮನ್ಸ್ ಬಂದ ಬಳಿಕ ಹೇಮಂತ್ ಹಠಾತ್ ಆಗಿ ದೆಹಲಿಗೆ ದೌಡಾಯಿಸಿದರು. ಜ. 29ರಿಂದ 31ರ ವರೆಗೆ ಜಾರ್ಖಂಡ್‌ನ ವಿವಿಧ ಸ್ಥಳಗಳಲ್ಲಿ ನಡೆಯುವ ಹಲವು ಕಾರ್ಯಕ್ರಮಗಳಲ್ಲಿ ಅವರು ಭಾಗಿಯಾಗಬೇಕಿತ್ತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣ

‘ದಾಖಲು ಪ್ರಮಾಣ ಶೇ 96ರಷ್ಟು ಹೆಚ್ಚಳ’

ನವದೆಹಲಿ (ಪಿಟಿಐ): ಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣಗಳು ದಾಖಲಾಗುವ ಪ್ರಮಾಣವು 2016ರಿಂದ 2022ರ ನಡುವಿನ ಅವಧಿಯಲ್ಲಿ ಶೇ 96ರಷ್ಟು ಹೆಚ್ಚಿದೆ ಎಂದು 'ಚೈಲ್ಡ್ ರೈಟ್ಸ್ ಆ್ಯಂಡ್ ಯೂ' (ಕ್ರೈ) ಸ್ವಯಂ ಸೇವಾ ಸಂಸ್ಥೆ ಹೇಳಿದೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊದ (ಎನ್‌ಸಿಆರ್‌ಬಿ) ದತ್ತಾಂಶಗಳನ್ನು ವಿಶ್ಲೇಷಿಸಿ ಕ್ರೈ ಈ ವರದಿ ನೀಡಿದೆ.

ಸಾರ್ವಜನಿಕರಲ್ಲಿ ಜಾಗೃತಿ ಮೂಡಿರುವ ಕಾರಣ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯಗಳು ನಡೆದಾಗ ದಾಖಲಾಗುವ ದೂರುಗಳ ಪ್ರಮಾಣ ಹೆಚ್ಚಿದೆ ಎಂದು ಕ್ರೈನ ಸಂಶೋಧನಾ ವಿಭಾಗದ ನಿರ್ದೇಶಕ ಶುಭೇಂದು ಭಟ್ಟಾಚಾರ್ಜಿ ಅವರು ಹೇಳಿದರು.

ಈಚೆಗೆ ಆಗಿರುವ ಕಾನೂನು ಸುಧಾರಣೆಗಳು ಮತ್ತು ನೀತಿಗಳ ಬದಲಾವಣೆ ಕೂಡ ಪ್ರಕರಣಗಳು ದಾಖಲಾಗಲು ಕಾರಣವಾಗಿದೆ ಎಂದು ಭಟ್ಟಾಚಾರ್ಜಿ ಹೇಳಿದ್ದಾರೆ. ಪ್ರಮುಖ ವ್ಯಕ್ತಿಗಳು ಭಾಗಿಯಾಗಿರುವ ಪ್ರಕರಣಗಳು ಮಾಧ್ಯಮದಲ್ಲಿ ವರದಿಯಾದ ವಿಧಾನ ಮತ್ತು ಸಮುದಾಯ ಮತ್ತು ಸಾಮಾಜಿಕ ಸಂಘಟನೆಗಳು ಮೂಡಿಸಿದ ಜಾಗೃತಿಯು ಮಹತ್ವದ ಪಾತ್ರ ವಹಿಸಿವೆ ಎಂದು ಹೇಳಿದರು.

ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಗಳು ಸೇರಿದಂತೆ ಸೂಕ್ಷ್ಮ ವಿಚಾರಗಳನ್ನು ಚರ್ಚಿಸಿ ಅದಕ್ಕೆ ಪರಿಹಾರ ಕಂಡುಕೊಳ್ಳಲು ಯತ್ನಿಸುವ ಮೂಲಕ ಸಮಾಜದಲ್ಲಿದ್ದ ‘ಮೌನ ಸಂಸ್ಕೃತಿ’ಯನ್ನು ಮುರಿಯಲಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಪ್ರಕರಣಗಳನ್ನು ವರದಿ ಮಾಡುವ ಕಾರ್ಯವಿಧಾನಗಳು ಜನರಲ್ಲಿ ನಂಬಿಕೆ ಮೂಡಿಸಿವೆ. ಆನ್‌ಲೈನ್ ಪೋರ್ಟಲ್‌ಗಳು ಮತ್ತು ಕೆಲವು ಸಂಸ್ಥೆಗಳು ಇಂತಹ ಪ್ರಕರಣಗಳನ್ನು ದಾಖಲಿಸಲು ಸಂತ್ರಸ್ತ ಮಕ್ಕಳಿಗೆ ಮತ್ತು ಅವರ ಕುಟುಂಬಕ್ಕೆ ಪ್ರೋತ್ಸಾಹ ನೀಡುತ್ತಿವೆ ಎಂದು ಹೇಳಿದರು.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ

ವರ್ಷ	ದಾಖಲಾಗಿರುವ ಪ್ರಕರಣಗಳು
2016	19,765
2017	27,616
2018	30,917
2019	31,132
2020	30,705
2021	36,381
2022	38,911

(ಎನ್‌ಸಿಆರ್‌ಬಿ ದತ್ತಾಂಶ)

ಭಾರತ ತಂತ್ರಕ್ಕೆ 'ಹಾರ್ಟ್ಲಿ' ತಿರುಮಂತ್ರ

ಪದಾರ್ಪಣೆ ಪಂದ್ಯದಲ್ಲಿ ಮಿಂಚಿದ ಟಾಮ್; ಭಾರತಕ್ಕೆ ಸೋಲುಣಿಸಿದ ಇಂಗ್ಲೆಂಡ್

ಪ್ರಜಾವಾಣಿ ವಾರ್ತೆ



ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರ ವಿಕೆಟ್ ಗಳಿಸಿದ ಇಂಗ್ಲೆಂಡ್ ಸ್ಪಿನ್ನರ್ ಟಾಮ್ ಹಾರ್ಟ್ಲಿ (ಬಲ), ವಿಕೆಟ್‌ಕೀಪರ್ ಬೆನ್ ಫೋಕ್ಸ್ ಹಾಗೂ ಫೀಲ್ಡರ್ ಜೋ ರೂಟ್ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಹೈದರಾಬಾದ್: ಆತಿಥೇಯ ಭಾರತ ತಂಡದ ತಂತ್ರಕ್ಕೆ ತಿರುಮಂತ್ರ ಹಾಕಿದ ಇಂಗ್ಲೆಂಡ್ ತಂಡದ ನವಪ್ರತಿಭೆ ಟಾಮ್ ವಿಲಿಯಮ್ ಹಾರ್ಟ್ಲಿ ತಮ್ಮ ಪದಾರ್ಪಣೆ ಟೆಸ್ಟ್ ಪಂದ್ಯವನ್ನು ಅವಿಸ್ಮರಣೀಯಗೊಳಿಸಿಕೊಂಡರು.

ರಾಜೀವಗಾಂಧಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಟೆಸ್ಟ್‌ನಲ್ಲಿ ಎಡಗೈ ಸ್ಪಿನ್ನರ್ ಹಾರ್ಟ್ಲಿ (26.2–5–62–7) ಇಂಗ್ಲೆಂಡ್ ತಂಡಕ್ಕೆ 28 ರನ್‌ಗಳ ಗೆಲುವಿನ ಕಾಣಿಕೆ ನೀಡಿದರು. ಇದರೊಂದಿಗೆ ಪ್ರವಾಸಿ ಬಳಗವು ಐದು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಗಳಿಸಿತು.

ಪಂದ್ಯದ ನಾಲ್ಕನೇ ದಿನವಾದ ಭಾನುವಾರ 231 ರನ್‌ಗಳ ಜಯದ ಗುರಿ ಬೆನ್ನಟ್ಟಿದ್ದ ಭಾರತ ತಂಡವು 69.2 ಓವರ್‌ಗಳಲ್ಲಿ 202 ರನ್ ಗಳಿಸಿ ಆಲೌಟ್ ಆಯಿತು. ಕೆಳಹಂತದಲ್ಲಿ ಪುಟಿಯುತ್ತಿದ್ದ ಚೆಂಡು ತಿರುವು ಪಡೆಯುತ್ತಿತ್ತು. ಹಾರ್ಟ್ಲಿ ಎಸೆತಗಳ ಚಲನೆಯನ್ನು ಗುರುತಿಸುವಲ್ಲಿ ಪರದಾಡಿದ ಭಾರತದ ಬ್ಯಾಟರ್‌ಗಳು ತಲೆತಗ್ಗಿಸಿದರು.

ರೋಹಿತ್ ಶರ್ಮಾ (39; 58ಎ, 4X7), ಕೆ.ಎಲ್. ರಾಹುಲ್ (22; 48ಎ, 4X3), ಶ್ರೀಕರ್ ಭರತ್ (28; 59ಎ), ಆರ್. ಅಶ್ವಿನ್ (28; 84ಎ) ಹಾಗೂ ಕಟ್ಟಕಡೆಯ ಬ್ಯಾಟರ್ ಮೊಹಮ್ಮದ್ ಸಿರಾಜ್ (12; 20ಎ) ಅವರ ಹೋರಾಟಕ್ಕೆ ಫಲ ಸಿಗಲಿಲ್ಲ.

ಮೂರನೇ ಕ್ರಮಾಂಕದ ಬ್ಯಾಟರ್ ಶುಭಮನ್ ಗಿಲ್ ಸೊನ್ನೆ ಸುತ್ತಿದರು. ಮೊದಲ ಇನಿಂಗ್ಸ್‌ನಲ್ಲಿ ಮಿಂಚಿದ್ದ ರವೀಂದ್ರ ಜಡೇಜ 2 ರನ್ ಗಳಿಸಿ ರನೌಟ್ ಆದರು. ಅಲ್ಲದೇ ಯಶಸ್ವಿ ಜೈಸ್ವಾಲ್ ಹಾಗೂ ಶ್ರೇಯಸ್ ಅಯ್ಯರ್ ಅವರು ದೀರ್ಘ ಇನಿಂಗ್ಸ್ ಆಡುವಲ್ಲಿ ವಿಫಲರಾದರು.

ತಂಡವು 119 ರನ್‌ಗಳಿಗೆ ಏಳು ವಿಕೆಟ್ ಕಳೆದುಕೊಂಡಿದ್ದಾಗ, ಭರತ್ ಮತ್ತು ಅಶ್ವಿನ್ ಅವರು ಜೊತೆಯಾಟದಲ್ಲಿ 57 ರನ್ ಸೇರಿಸಿ ಜಯದ ಭರವಸೆ ಮೂಡಿಸಿದ್ದರು. ಆದರೆ ಚಹಾ ವಿರಾಮದ ನಂತರದ ಆಟದಲ್ಲಿ ಭರತ್ ಅವರನ್ನು ಬೌಲ್ಡ್ ಆಡಿದ ಹಾರ್ಟ್ಲಿ ಮತ್ತೆ ಪೆಟ್ಟುಕೊಟ್ಟರು. ಅಶ್ವಿನ್ ಹಾಗೂ ಸಿರಾಜ್ ವಿಕೆಟ್‌ಗಳನ್ನೂ ಹಾರ್ಟ್ಲಿ ಅವರೇ ಕಬಳಿಸಿದರು.

ಪಿಚ್ ಪರಿಸ್ಥಿತಿಯನ್ನು ಚೆನ್ನಾಗಿ ಅರಿತುಕೊಂಡ ನಾಯಕ ಬೆನ್ ಸ್ಟೋಕ್ಸ್ ಅವರು ಸ್ಪಿನ್ನರ್‌ಗಳಿಗೆ ಹೆಚ್ಚು ಓವರ್‌ಗಳನ್ನು ಕೊಟ್ಟಿದ್ದು ಫಲ ನೀಡಿತು.

2013ರಿಂದ ಇಲ್ಲಿಯವರೆಗೆ ಭಾರತ ತಂಡವು ತವರಿನಲ್ಲಿ ಸೋತ ನಾಲ್ಕನೇ ಟೆಸ್ಟ್ ಇದಾಗಿದೆ.

ದ್ವಿಶತಕ ತಪ್ಪಿಸಿಕೊಂಡ ಪೋಪ್: ಮೊದಲ ಇನಿಂಗ್ಸ್‌ನಲ್ಲಿ ಉತ್ತಮ ಮುನ್ನಡೆ ಗಳಿಸಿದ್ದ ಭಾರತ ತಂಡದ ಕೈಯಿಂದ ಗೆಲುವನ್ನು ಕಸಿದುಕೊಂಡವರು ಬ್ಯಾಟರ್ ಒಲಿ ಪೋಪ್. ಶನಿವಾರ ನಡೆದಿದ್ದ ಎರಡನೇ ಇನಿಂಗ್ಸ್‌ನಲ್ಲಿ ಪೋಪ್ 148 ರನ್ ಗಳಿಸಿ ಕ್ರೀಸ್‌ನಲ್ಲಿದ್ದರು. ನಾಲ್ಕನೇ ದಿನ ಆಟ ಮುಂದುವರಿಸಿದ ಅವರು ತಮ್ಮ ತಂಡದ ಮೊತ್ತವನ್ನು ಹೆಚ್ಚಿಸಿದರು. ಬ್ಯಾಟಿಂಗ್‌ನಲ್ಲೂ ಮಿಂಚಿದ ಹಾರ್ಟ್ಲಿ (34; 52ಎ, 4X4) ಅವರೊಂದಿಗೆ ಪೋಪ್ ಎಂಟನೇ ವಿಕೆಟ್ ಜೊತೆಯಾಟದಲ್ಲಿ 80 ರನ್ ಸೇರಿಸಿದರು.

ದ್ವಿಶತಕದತ್ತ ಸಾಗಿದ್ದ ಪೋಪ್ (196; 278ಎ, 4X21) ಬೂಮ್ರಾ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆದರು. ಇಂಗ್ಲೆಂಡ್ ತಂಡವು 102.1 ಓವರ್‌ಗಳಲ್ಲಿ 420 ರನ್ ಗಳಿಸಿತು.

ಗುರಿ ಬೆನ್ನತ್ತಿದ್ದ ಭಾರತ ತಂಡಕ್ಕೆ ರೋಹಿತ್ ಮತ್ತು ಯಶಸ್ವಿ ಮೊದಲ ವಿಕೆಟ್ ಜೊತೆಯಾಟದಲ್ಲಿ 42 ರನ್ ಗಳಿಸಿ ಉತ್ತಮ ಆರಂಭ ನೀಡಿದರು. ಆದರೆ 12ನೇ ಓವರ್ ಒಂದರಲ್ಲಿಯೇ ಯಶಸ್ವಿ ಮತ್ತು ಶುಭಮನ್ ವಿಕೆಟ್ ಗಳಿಸಿದ ಹಾರ್ಟ್ಲಿ ತಮ್ಮ ಬೇಟೆ ಆರಂಭಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 64.3 ಓವರ್‌ಗಳಲ್ಲಿ 246. ಭಾರತ: 121 ಓವರ್‌ಗಳಲ್ಲಿ 436. ಎರಡನೇ ಇನಿಂಗ್ಸ್: 102.1 ಓವರ್‌ಗಳಲ್ಲಿ 420 (ಒಲಿ ಪೋಪ್ 196, ರೆಹಾನ್ ಅಹಮದ್ 28, ಟಾಮ್ ಹಾರ್ಟ್ಲಿ 34, ಜಸ್‌ಪ್ರೀತ್ ಬೂಮ್ರಾ 41ಕ್ಕೆ4, ಆರ್. ಅಶ್ವಿನ್ 126ಕ್ಕೆ3, ರವೀಂದ್ರ ಜಡೇಜ 131ಕ್ಕೆ2) ಭಾರತ: 69.2 ಓವರ್‌ಗಳಲ್ಲಿ 202 (ರೋಹಿತ್ ಶರ್ಮಾ 39, ಕೆ.ಎಲ್. ರಾಹುಲ್ 22, ಶ್ರೀಕರ್ ಭರತ್ 28, ಆರ್. ಅಶ್ವಿನ್ 28, ಟಾಮ್ ಹಾರ್ಟ್ಲಿ 62ಕ್ಕೆ7)

ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 28 ರನ್‌ಗಳ ಜಯ. ಪಂದ್ಯಶ್ರೇಷ್ಠ: ಒಲಿ ಪೋಪ್.

ಆಸ್ಟ್ರೇಲಿಯನ್ ಓಪನ್: ಚೊಚ್ಚಲ ಗ್ರ್ಯಾನ್‌ಸ್ಲಾಮ್ ಗೆದ್ದ ಇಟಲಿಯ ಆಟಗಾರ

ಸಿನ್ನರ್ ವಿನ್ನರ್, ಡೇವ್ ರನ್ನರ್



ಇಟಲಿಯ ಯಾನಿಕ್ ಸಿನ್ನರ್ ಆಟದ ಸೊಬಗು –ಎಎಫ್‌ಪಿ ಚಿತ್ರ

ಮೆಲ್ಬರ್ನ್ (ರಾಯಿಟರ್ಸ್): ರಾಡ್ ಲೇವರ್ ಕ್ರೀಡಾಂಗಣದಲ್ಲಿ ಭಾನುವಾರ ಇಟಲಿಯ ಹುಡುಗ ಯಾನಿಕ್ ಸಿನ್ನರ್ ಅವರ ಸಂತಸಕ್ಕೆ ಪಾರವೇ ಇರಲಿಲ್ಲ.

ಮೆಲ್ಬರ್ನ್ ಪಾರ್ಕ್‌ನಲ್ಲಿ ನಡೆದ ಆಸ್ಟ್ರೇಲಿಯನ್ ಓಪನ್ ಟೆನಿಸ್ ಫೈನಲ್‌ನಲ್ಲಿ ತಮಗಿಂತ ಅನುಭವಿ ಆಟಗಾರ ಡೆನಿಲ್ ಮೆಡ್ವೆಡೇವ್ ವಿರುದ್ಧ ಗೆದ್ದರು. ಇದರೊಂದಿಗೆ ತಮ್ಮ ವೃತ್ತಿಜೀವನದ ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯದ ಸಂಭ್ರಮ ಆಚರಿಸಿದರು.

22ರ ಯುವಕ ಯಾನಿಕ್ ಕುಣಿದು ಕುಪ್ಪಳಿಸಿದರು. ಕೋರ್ಟ್ ಮೇಲೆ ಅಂಗಾತ ಮಲಗಿ ಬಾನಿನಲ್ಲಿದ್ದ ತಾರೆಗಳನ್ನು ನೋಡುತ್ತ ಮೈಮರೆತರು. ಅವರ ಕಂಗಳಿಂದ ಆನಂದಭಾಷ್ಪ ಹರಿಯಿತು. ಮರುಕ್ಷಣವೇ ಎದ್ದು ಪ್ರೇಕ್ಷಕರ ಗ್ಯಾಲರಿಗೆ ಧಾವಿಸಿದ ಅವರು ತಮ್ಮ ಕೋಚ್, ಕುಟುಂಬದ ಸದಸ್ಯರು, ಸ್ನೇಹಿತರನ್ನು ಆಲಂಗಿಸಿಕೊಂಡರು.

ಸೆಮಿಫೈನಲ್‌ನಲ್ಲಿ ದಿಗ್ಗಜ ನೊವಾಕ್ ಜೊಕೊವಿಚ್ ಅವರನ್ನು ಮಣಿಸಿದ್ದ ಸಿನ್ನರ್ ಫೈನಲ್‌ನಲ್ಲಿ ಅಮೋಘ ಆಟವಾಡಿದರು. ಅವರು 3-6, 3-6, 6-4, 6-4, 6-3 ರಿಂದ ಮೂರನೇ ಶ್ರೇಯಾಂಕದ ಮೆಡ್ವೆಡೇವ್ ಅವರನ್ನು ಮಣಿಸಿದರು. ಈ ಪಂದ್ಯದ ಆರಂಭಿಕ ಎರಡೂ ಸೆಟ್‌ಗಳಲ್ಲಿ ಮೆಡ್ವೆಡೇವ್ ಪ್ರಾಬಲ್ಯ ಮೆರೆದಿದ್ದರು. ಇದರಿಂದಾಗಿ ಅವರೇ ಜಯಿಸುವ ನಿರೀಕ್ಷೆ ಮೂಡಿತ್ತು.

ಆದರೆ ಮೂರನೇ ಸೆಟ್‌ನಲ್ಲಿ ಬಲವಾದ ತಿರುಗೇಟು ನೀಡಿದ ಸಿನ್ನರ್ ಆತ್ಮವಿಶ್ವಾಸ ವೃದ್ಧಿಸಿಕೊಂಡರು. ನಂತರದ ಎರಡೂ ಸೆಟ್‌ಗಳಲ್ಲಿಯೂ ಡೇವ್ ಅವರಿಗೆ ಆಘಾತ ನೀಡಿದರು.

'ಯಾನಿಕ್ ಸಿನ್ನರ್ ಟೆನಿಸ್ ಇತಿಹಾಸದ ಪುಸ್ತಕದಲ್ಲಿ ಹೊಸ ಅಧ್ಯಾಯ ಬರೆದಿದ್ದಾರೆ. ಅದರಿಂದಾಗಿ ನಾವೆಲ್ಲರೂ ಹೆಮ್ಮೆಪಡುತ್ತಿದ್ದೇವೆ' ಎಂದು ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೊನಿ ಸಾಮಾಜಿಕ ಜಾಲತಾಣಗಳ ಮೂಲಕ ಅಭಿನಂದನೆ ಸಲ್ಲಿಸಿದ್ದಾರೆ.

ಮುಖ್ಯಾಂಶಗಳು

- ಸೆಮಿಫೈನಲ್ ನಲ್ಲಿ ಜೊಕೊವಿಚ್‌ಗೆ ಸೋಲುಣಿಸಿದ್ದ ಸಿನ್ನರ್
- ಮೂರನೇ ಶ್ರೇಯಾಂಕದ ಮೆಡ್ವೆಡೇವ್‌ಗೆ ನಿರಾಶೆ
- ಫೈನಲ್‌ನಲ್ಲಿ ಮೊದಲೆರಡು ಸೆಟ್‌ಗಳಲ್ಲಿ ಸೋತ ಸಿನ್ನರ್

ಈ ಕುರಿತು ಪ್ರತಿಕ್ರಿಯಿಸಿದ ಸಿನ್ನರ್, 'ನನ್ನಲ್ಲಿ ಆತ್ಮವಿಶ್ವಾಸ ಹೆಚ್ಚಲು ಮತ್ತು ಈ ಹಂತಕ್ಕೆ ತಲುಪಲು ಅವರ ಬೆಂಬಲವೇ ಪ್ರಮುಖವಾದದ್ದು. ಅದಕ್ಕಾಗಿ ಆಭಾರಿಯಾಗಿರುವೆ' ಎಂದಿದ್ದಾರೆ.

₹19ಕೋಟಿ: ಸಿಂಗಲ್ಸ್ ಚಾಂಪಿಯನ್

₹ 9.4 ಕೋಟಿ: ಸಿಂಗಲ್ಸ್ ರನ್ನರ್ ಅಪ್

ಡಬಲ್ಸ್ ಚಾಂಪಿಯನ್: **₹ 4 ಕೋಟಿ**

ಡಬಲ್ಸ್ ರನ್ನರ್ಸ್ ಅಪ್: **₹ 2 ಕೋಟಿ**



ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಮಹಿಳಾ ಡಬಲ್ಸ್ ಫೈನಲ್ ಪಂದ್ಯದಲ್ಲಿ ಉಕ್ರೇನ್‌ನ ಲ್ಯುಡ್ಮಿಲಾ ಕಿಚೆನೊಕ್ ಮತ್ತು ಲಾಟ್ವಿಯಾದ ಜೆಲೆನಾ ಒಸ್ಟಾಪೆಂಕೊ ವಿರುದ್ಧ ಜಯಗಳಿಸಿದ ತೈವಾನ್‌ನ ಸುವೀ ಹ್ಸೀಹ್ ಮತ್ತು ಬೆಲ್ಜಿಯಂನ ಎಲಿಸ್ ಮೆರ್ಟೆನ್ಸ್ . ಎಎಫ್‌ಪಿ ಚಿತ್ರ

ಎಸ್‌ಎಲ್‌ಸಿ ಸದಸ್ಯತ್ವ ಮರುಸ್ಥಾಪಿಸಿದ ಐಸಿಸಿ

ದುಬೈ (ರಾಯಿಟರ್ಸ್): ಎರಡು ತಿಂಗಳ ಅಮಾನತಿನ ಬಳಿಕ ಶ್ರೀಲಂಕಾ ಕ್ರಿಕೆಟ್ ಮಂಡಳಿ (ಎಸ್‌ಎಲ್‌ಸಿ) ಅನ್ನು ಅಂತರ ರಾಷ್ಟ್ರೀಯ ಕಿಕ್ರೆಟ್ ಕೌನ್ಸಿಲ್ (ಐಸಿಸಿ) ಸದಸ್ಯರಾಗಿ ಮರು-ಸ್ಥಾಪಿಸಲಾಗಿದೆ ಎಂದು ಐಸಿಸಿ ಭಾನುವಾರ ತಿಳಿಸಿದೆ.

ಹೋದ ವರ್ಷ ಭಾರತದಲ್ಲಿ ನಡೆದ ಏಕದಿನ ವಿಶ್ವಕಪ್ ನಲ್ಲಿ ತಂಡದ ಕಳಪೆ ಪ್ರದರ್ಶನದ ಹಿನ್ನೆಲೆಯಲ್ಲಿ ಶ್ರೀಲಂಕಾ ಕ್ರೀಡಾ ಸಚಿವಾಲಯವು ಎಸ್‌ಎಲ್‌ಸಿ ಮಂಡಳಿಯನ್ನು ವಜಾಗೊಳಿಸಿ, ಮಧ್ಯಂತರ ಸಮಿತಿಯನ್ನು ನೇಮಿಸಿತ್ತು.

ಕರ್ತವ್ಯ ನಿರ್ವಹಣೆಯಲ್ಲಿ ಸರ್ಕಾರದ ಹಸ್ತಕ್ಷೇಪ ತಡೆಯಲು ವಿಫಲವಾಗಿದೆ ಎಂಬ ಕಾರಣಕ್ಕೆ ಐಸಿಸಿ ಆ ದೇಶದ ಕ್ರಿಕೆಟ್ ಮಂಡಳಿಯನ್ನು ನವೆಂಬರ್ 10ರಂದು ಅಮಾನತ್ತುಗೊಳಿ-ಸಿತ್ತು.

ಅಮಾನತು ಆದೇಶದ ವಿರುದ್ಧ ಎಸ್‌ಎಲ್‌ಸಿ ನವೆಂಬರ್ 21 ರಂದು ಐಸಿಸಿಗೆ ಮೇಲ್ಮನವಿ ಸಲ್ಲಿಸಿತು.

'ಅಮಾನತುಗೊಂಡಾಗಿ-ನಿಂದ (ಐಸಿಸಿ) ಮಂಡಳಿಯು ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡುತ್ತಿದೆ ಮತ್ತು ಈಗ ಎಸ್‌ಎಲ್‌ಸಿ ಸದಸ್ಯತ್ವದ ನಿಯಮಗಳನ್ನು ಉಲ್ಲಂಘಿಸು-ವುದಿಲ್ಲವೆಂಬ ತೃಪ್ತಿ ಇದೆ' ಎಂದು ಐಸಿಸಿ ಹೇಳಿಕೆಯಲ್ಲಿ ತಿಳಿಸಿದೆ

19 ವರ್ಷದೊಳಗಿನವರ ವಿಶ್ವಕಪ್: ಭಾರತಕ್ಕೆ ಗೆಲುವು

ಕುಲಕರ್ಣಿ ಶತಕ, ಮುಷೀರ್ ಮಿಂಚು



ಅರ್ಷಿನ್ ಕುಲಕರ್ಣಿ

ಬ್ಲೂಮ್‌ಫಾಂಟೇನ್ (ಪಿಟಿಐ): ಅರ್ಷಿನ್ ಕುಲಕರ್ಣಿ ಅವರ ಅಮೋಘ ಶತಕದ ಬಲದಿಂದ ಭಾರತ ಕ್ರಿಕೆಟ್ ತಂಡವು 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯಲ್ಲಿ ಅಮೆರಿಕ ಎದುರಿನ ಪಂದ್ಯದಲ್ಲಿ ಜಯಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಭಾರತದ ಯುವಪಡೆಯು 201 ರನ್‌ಗಳಿಂದ ಗೆದ್ದಿತು. ಇದರೊಂದಿಗೆ ಎ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಸೂಪರ್ ಸಿಕ್ಸ್ ಹಂತದಲ್ಲಿ ಸ್ಥಾನವನ್ನು ಗಟ್ಟಿಗಳಿಸಿ-ಕೊಂಡಿತು.

ಟಾಸ್ ಗೆದ್ದ ಅಮೆರಿಕ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅರ್ಷಿನ್ ಕುಲಕರ್ಣಿ (108; 118ಎ, 4X8, 6X3) ಮತ್ತು ಮುಷೀರ್ ಖಾನ್ (73; 76ಎ, 4X6, 6X1) ಅವರ ಭರ್ಜರಿ ಬ್ಯಾಟಿಂಗ್‌ನಿಂದಾಗಿ ಭಾರತ ತಂಡವು 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 326 ರನ್ ಗಳಿಸಿತು.

ಅಮೆರಿಕ ತಂಡದ ಅತೀಂದ್ರ ಸುಬ್ರಮಣಿಯನ್ ಅವರು ಉತ್ತಮವಾಗಿ ಬೌಲಿಂಗ್ ಮಾಡಿ ಎರಡು ವಿಕೆಟ್ ಪಡೆದರು.

ಭಾರತ ಮೂಲದ ಆಟಗಾರರೇ ಇರುವ ಅಮೆರಿಕ ತಂಡವು ಗುರಿ ಬೆನ್ನಟ್ಟಿ ತಾಳ್ಮೆಯ ಬ್ಯಾಟಿಂಗ್ ಮಾಡಿತು. ಇನಿಂಗ್ಸ್‌ನಲ್ಲಿ ಸಂಪೂರ್ಣ 50 ಓವರ್‌ಗಳನ್ನೂ ಆಡಿತು. 8 ವಿಕೆಟ್ ಕಳೆದುಕೊಂಡು 125 ರನ್ ಗಳಿಸಿತು. ಅದರಲ್ಲಿ ಉತ್ಕರ್ಷ್ ಶ್ರೀವಾಸ್ತವ್ 40 ಮತ್ತು ಅಮೋಘ್ ಅರೇಪಳ್ಳಿ 27 ರನ್‌ಗಳನ್ನು ಗಳಿಸಿದರು.

ಭಾರತ ತಂಡದ ಬೌಲರ್ ನಮನ್ ತಿವಾರಿ ನಾಲ್ಕು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 326 (ಅರ್ಷಿನ್ ಕುಲಕರ್ಣಿ 108, ಮುಷೀರ್ ಖಾನ್ 73, ಅತೀಂದ್ರ ಸುಬ್ರಮಣಿಯನ್ 45ಕ್ಕೆ2) ಅಮೆರಿಕ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 125 (ಉತ್ಕರ್ಷ್ ಶ್ರೀವಾಸ್ತವ 40, ನಮನ್ ತಿವಾರಿ 20ಕ್ಕೆ4) ಫಲಿತಾಂಶ: ಭಾರತ ತಂಡಕ್ಕೆ 201 ರನ್ ಜಯ.

ಶಾಮರ್ ದಾಳಿಗೆ ಕುಸಿದ ಆಸ್ಟ್ರೇಲಿಯಾ



ವೆಸ್ಟ್ ಇಂಡೀಸ್ ತಂಡದ ಬೌಲರ್ ಶಾಮರ್ ಜೋಸೆಫ್ ಸಂಭ್ರಮ –ಎಎಫ್‌ಪಿ ಚಿತ್ರ

ಬ್ರಿಸ್ಬೇನ್ (ರಾಯಿಟರ್ಸ್): ವೆಸ್ಟ್ ಇಂಡೀಸ್ ತಂಡದ ಯುವಪ್ರತಿಭೆ ಶಾಮರ್ ಜೋಸೆಫ್ ಅವರ ಸ್ವಿಂಗ್ ದಾಳಿಯ ಮುಂದೆ ಆತಿಥೇಯ ಆಸ್ಟ್ರೇಲಿಯಾ ತಂಡವು ತತ್ತರಿಸಿತು.

ಗಾಬಾ ಕ್ರೀಡಾಂಗಣದಲ್ಲಿ ನಡೆದ ಟೆಸ್ಟ್‌ನಲ್ಲಿ ಭಾನುವಾರ ಶಾಮರ್ (68ಕ್ಕೆ7) ದಾಳಿಯ ಬಲದಿಂದ ವೆಸ್ಟ್ ಇಂಡೀಸ್ ತಂಡವು 8 ರನ್‌ಗಳ ಜಯ ಸಾಧಿಸಿತು. 1997ರ ನಂತರ ವಿಂಡೀಸ್ ತಂಡವು ಆಸ್ಟ್ರೇಲಿಯಾದಲ್ಲಿ ಗೆದ್ದ ಮೊದಲ ಟೆಸ್ಟ್ ಇದು. ಗಾಯಗೊಂಡಿದ್ದರೂ ಅಮೋಘ ಬೌಲಿಂಗ್ ಪ್ರದರ್ಶಿಸಿದ 24 ವರ್ಷದ ಜೋಸೆಫ್ ಈ ಪಂದ್ಯದ ಎರಡೂ ಇನಿಂಗ್ಸ್ ಸೇರಿ ಎಂಟು ವಿಕೆಟ್ ಗಳಿಸಿದರು.

216 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಆತಿಥೇಯ ತಂಡವು 50.5 ಓವರ್‌ಗಳಲ್ಲಿ 207 ರನ್ ಗಳಿಸಲಷ್ಟೇ ಶಕ್ತವಾಯಿತು. ಮೂರು ಪಂದ್ಯಗಳ ಸರಣಿಯು ಸಮಬಲವಾಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವೆಸ್ಟ್ ಇಂಡೀಸ್: 311, ಆಸ್ಟ್ರೇಲಿಯಾ: 289. ಎರಡನೇ ಇನಿಂಗ್ಸ್: ವೆಸ್ಟ್ ಇಂಡೀಸ್: 72.3 ಓವರ್‌ಗಳಲ್ಲಿ 193. ಆಸ್ಟ್ರೇಲಿಯಾ: 50.5 ಓವರ್‌ಗಳಲ್ಲಿ 207(ಸ್ಟೀವ್ ಸ್ಮಿತ್ ಔಟಾಗದೆ 91, ಕ್ಯಾಮರಾನ್ ಗ್ರೀನ್ 42, ಮಿಚೆಲ್ ಸ್ಟಾರ್ಕ್ 21, ಅಲ್ಜರಿ ಜೋಸೆಫ್ 62ಕ್ಕೆ2, ಶಾಮರ್ ಜೋಸೆಫ್ 68ಕ್ಕೆ7) ಫಲಿತಾಂಶ: ವೆಸ್ಟ್ ಇಂಡೀಸ್‌ಗೆ 8 ರನ್ ಜಯ.

ರೋಚಕ ಘಟ್ಟದಲ್ಲಿ ಪಂದ್ಯ; ವೈಶಾಖ ಆಲ್‌ರೌಂಡ್ ಆಟ; ಶರತ್, ಕಿಶನ್ ಬ್ಯಾಟಿಂಗ್

ಕರ್ನಾಟಕ ಜಯಕ್ಕೆ ಬೇಕು ಏಳು ವಿಕೆಟ್



ವೈಶಾಖ ವಿಜಯಕುಮಾರ್

ಅಗರ್ತಲಾ: ಇಲ್ಲಿಯ ಎಂಬಿಬಿ ಕ್ರೀಡಾಂಗಣದಲ್ಲಿ ತ್ರಿಪುರ ಮತ್ತು ಕರ್ನಾಟಕ ನಡುವಿನ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯವು ರೋಚಕ ಘಟ್ಟ ತಲುಪಿದೆ.

ಪಂದ್ಯದ ಕೊನೆಯ ದಿನವಾದ ಸೋಮವಾರ ಆತಿಥೇಯ ತ್ರಿಪುರ ತಂಡವು ಜಯಿಸಬೇಕಾದರೆ 134 ರನ್‌ಗಳನ್ನು ಗಳಿಸಬೇಕು. ಅದಕ್ಕೂ ಮುನ್ನ ತ್ರಿಪುರ ತಂಡದ ಉಳಿದಿರುವ ಏಳು ಬ್ಯಾಟರ್‌ಗಳನ್ನು ಪೆವಿಲಿಯನ್‌ಗೆ ಕಳಿಸಿದರೆ ಮಯಂಕ್ ಅಗರವಾಲ್ ಬಳಗವು ಜಯದ ಸಂಭ್ರಮ ಆಚರಿಸಬಹುದು. ಆದ್ದರಿಂದ ತಂಡವು ತನ್ನ ಬೌಲರ್‌ಗಳ ಮೇಲೆ ಭರವಸೆಯ ನೋಟ ನೆಟ್ಟಿದೆ.

ಭಾನುವಾರ 193 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿರುವ ತ್ರಿಪುರ ತಂಡವು ಮೂರನೇ ದಿನದಾಟದ ಮುಕ್ತಾಯಕ್ಕೆ 24 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 59 ರನ್ ಗಳಿಸಿದೆ. ಸುದೀಪ್ ಚಟರ್ಜಿ (ಬ್ಯಾಟಿಂಗ್ 26) ಮತ್ತು ಗಣೇಶ್ ಸತೀಶ್ (ಬ್ಯಾಟಿಂಗ್ 3) ಕ್ರೀಸ್‌ನಲ್ಲಿದ್ದಾ-ರೆ. ಕರ್ನಾಟಕದ ವಿದ್ವತ್, ಕೌಶಿಕ್ ಮತ್ತು ವೈಶಾಖ ತಲಾ ಒಂದು ವಿಕೆಟ್ ಗಳಿಸಿದ್ದಾರೆ.

ದುರ್ಬಲ ಬ್ಯಾಟಿಂಗ್: ಮೊದಲ ಇನಿಂಗ್ಸ್‌ನಲ್ಲಿ 41 ರನ್ ಮುನ್ನಡೆ ಗಳಿಸಿದ ಕರ್ನಾಟಕ ತಂಡವು ಎರಡನೇ ಇನಿಂಗ್ಸ್‌ನಲ್ಲಿ ದೊಡ್ಡ ಗುರಿ ನೀಡುವಲ್ಲಿ ಯಶಸ್ವಿಯಾಗಲಿಲ್ಲ. ಕೇವಲ 151 ರನ್ ಗಳಿಸಿ ಆಲೌಟ್ ಆಯಿತು.

ಪದಾರ್ಪಣೆ ಪಂದ್ಯ ಆಡುತ್ತಿರುವ ಕಿಶನ್ ಬೆದರೆ (42; 59ಎ, 4X8) ಮತ್ತು ಶರತ್ ಶ್ರೀನಿವಾಸ್ (48; 99ಎ, 4X6) ಅವರು ಉತ್ತಮವಾಗಿ ಆಡಿದರು. ಮೊದಲ ಇನಿಂಗ್ಸ್‌ನಲ್ಲಿ ಅರ್ಧಶತಕ ಗಳಿಸಿದ್ದ ವೈಶಾಖ ಈ ಇನಿಂಗ್ಸ್‌ನಲ್ಲಿ 22 ರನ್‌ಗಳ ಕಾಣಿಕೆ ನೀಡಿದರು. ಆರಂಭಿಕ ಬ್ಯಾಟರ್ ಆರ್ ಸಮರ್ಥ್ ಖಾತೆ ತೆರೆಯಲಿಲ್ಲ. ನಿಕಿನ್ ಜೋಸ್, ಕೆ.ವಿ. ಅನೀಶ್ ಕೂಡ ಎರಡಂಕಿ ಮುಟ್ಟಲಿಲ್ಲ. ನಾಯಕ ಮಯಂಕ್ ಕೇವಲ 17 ರನ್ ಗಳಿಸಿದರು. ತ್ರಿಪುರ ತಂಡದ ಮಣಿಶಂಕರ್ ಮುರಾಸಿಂಗ್ ಮತ್ತು ರಾಣಾ ದತ್ತಾ ಅವರು ತಲಾ ಮೂರು ವಿಕೆಟ್ ಗಳಿಸಿದರು.

ಗುರಿ ಬೆನ್ನಟ್ಟಿದ ಆತಿಥೇಯ ತಂಡಕ್ಕೆ ಕರ್ನಾಟಕದ ಕೌಶಿಕ್ ಆರಂಭದಲ್ಲಿಯೇ ಪೆಟ್ಟು ಕೊಟ್ಟರು. ನಾಲ್ಕನೇ ಓವರ್‌ನಲ್ಲಿ ಅವರು ಬಿ.ಬಿ. ಘೋಷ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಎರಡು ಓವರ್‌ಗಳ ನಂತರ ಬಿಕ್ರಂ ಕುಮಾರ್ ಅವರನ್ನು ವಿದ್ವತ್ ಎಲ್‌ಬಿಡಬ್ಲ್ಯು ಜಾಲದಲ್ಲಿ ಬೀಳಿಸಿದರು. ಇದರಿಂದಾಗಿ ತಂಡವು 14 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿತು.

ಆದರೆ ಶ್ರೀಧಾಮ್ ಪಾಲ್ (21 ರನ್) ಮತ್ತು ಸುದೀಪ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 36 ರನ್ ಸೇರಿಸಿ ತುಸು ಚೇತರಿಕೆ ನೀಡಿದರು. ವೈಶಾಖ ಅವರು ಶ್ರೀಧಾಮ್ ವಿಕೆಟ್ ಗಳಿಸಿ ಈ ಜೊತೆಯಾಟವನ್ನು ಮುರಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 241, ತ್ರಿಪುರಾ: 200. ಎರಡನೇ ಇನಿಂಗ್ಸ್: ಕರ್ನಾಟಕ: 51.3 ಓವರ್‌ಗಳಲ್ಲಿ 151 (ಕಿಶನ್ ಬೆದರೆ 42, ಶರತ್ ಶ್ರೀನಿವಾಸ್ 48, ವೈಶಾಖ ವಿಜಯಕುಮಾರ್ 22, ಮುರಾಸಿಂಗ್ 29ಕ್ಕೆ3, ರಾಣಾ ದತ್ತಾ 39ಕ್ಕೆ3, ಪರ್ವೇಜ್ ಸುಲ್ತಾನ್ 13ಕ್ಕೆ2) ತ್ರಿಪುರ: 24 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 59 (ಶ್ರೀಧಾಮ್ ಪಾಲ್ 21, ಸುದೀಪ್ ಚಟರ್ಜಿ 26, ವಿದ್ವತ್ ಕಾವೇರಪ್ಪ 15ಕ್ಕೆ1, ವಿ. ಕೌಶಿಕ್ 21ಕ್ಕೆ1, ವೈಶಾಖ ವಿಜಯಕುಮಾರ್ 13ಕ್ಕೆ1)

ಹಾಕಿ ಫೈವ್ಸ್: ಭಾರತ ರನ್ನರ್ ಅಪ್

ಮಸ್ಕತ್ (ಪಿಟಿಐ): ಭಾರತ ತಂಡವು ಎಫ್‌ಐಎಚ್ ಮಹಿಳಾ ಹಾಕಿ ಫೈವ್ಸ್ ವಿಶ್ವಕಪ್ ಫೈನಲ್‌ನಲ್ಲಿ ನೆದರ್ಲೆಂಡ್ಸ್ ವಿರುದ್ಧ 2–7 ಗೋಲುಗಳಿಂದ ಸೋತು ರನ್ನರ್ ಅಪ್ ಸ್ಥಾನ ಪಡೆಯಿತು.

ಭಾರತ ಪರ ಜ್ಯೋತಿ ಛತ್ರಿ (20ನೇ ನಿಮಿಷ) ಮತ್ತು ರುತುಜಾ ದಾದಾಸೊ ಪಿಸಾಲ್ (23ನೇ ನಿಮಿಷ) ಗೋಲು ಗಳಿಸಿದರು.

ನೆದರ್ಲೆಂಡ್ಸ್ ಪರ ಜನ್ನೆಕೆ ವಾನ್ ಡಿ ವೆನ್ನ (2, 14ನೇ ನಿಮಿಷ), ಬೆಂಟೆ ವಾನ್ ಡೆರ್ ವೆಲ್ಟ್ (4,8ನೇ ನಿಮಿಷ) ಮತ್ತು ಲಾನಾ ಕಾಲ್ಸೆ (11 ಮತ್ತು 27ನೇ ನಿಮಿಷ) ಹಾಗೂ ಸೋಶಾ ಬೆನ್ನಿಂಗಾ (13 ನೇ ನಿಮಿಷ) ಗೋಲು ಗಳಿಸಿದರು.

ಈ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಪ್ರತಿ ಆಟಗಾರ್ತಿಗೆ ₹3 ಲಕ್ಷ, ನೆರವು ಸಿಬ್ಬಂದಿಗೆ ತಲಾ ₹1.5 ಲಕ್ಷ ನಗದು ಬಹುಮಾನವನ್ನು ಹಾಕಿ ಇಂಡಿಯಾ ಘೋಷಿಸಿದೆ.

ಆರಂಭದಲ್ಲಿ ಉಭಯ ತಂಡಗಳು ಗೋಲು ಗಳಿಸುವ ಅವಕಾಶಕ್ಕಾಗಿ ಹೋರಾಡಿದವು. ಆದರೆ,ನೆದರ್ಲೆಂಡ್ಸ್‌ಗೆ ಉತ್ತಮ ಆರಂಭ ಕಂಡುಕೊಳ್ಳಲು ಹೆಚ್ಚು ಸಮಯವಾಗಲಿಲ್ಲ.

ನೆದರ್ಲೆಂಡ್ಸ್‌ನ ಜನ್ನೆಕೆ ಅವರು ಭಾರತದ ಗೋಲ್ ಕೀಪರ್ ರಜನಿ ಅವರನ್ನು ತಪ್ಪಿಸಿ ಚೆಂಡನ್ನು ಗುರಿ ಸೇರಿಸಿದರು. ಇದಾದ ಕೆಲವೇ ಕ್ಷಣಗಳಲ್ಲಿ ಬೆಂಟೆ ವಾನ್ ಅವರು ಭಾರತದ ರಕ್ಷಣೆ ಕೋಟೆ ಭೇದಿಸಿ, ಎರಡು ಗೋಲು ಗಳಿಸುವ ಮೂಲಕ ತಂಡದ ಮುನ್ನಡೆಯನ್ನು ಮತ್ತಷ್ಟು ಹೆಚ್ಚಿಸಿದರು.

ಮೊದಲಾರ್ಧ ಮುಗಿಯಲು ನಾಲ್ಕು ನಿಮಿಷಗಳು ಬಾಕಿ ಇರುವಾಗ ಲಾನಾ ಕಾಲ್ಸೆ ಗೋಲು ಬಾರಿಸಿ ನೆದರ್ಲೆಂಡ್ಸ್ ಪರ 4-0 ಮುನ್ನಡೆ ಸಾಧಿಸಿದರು. ಇದಾದ ಕೆಲವೇ ನಿಮಿಷಗಳಲ್ಲಿ ಸೋಶಾ ಅವರು ಗೋಲು ಗಳಿಸಿ, ಮುನ್ನಡೆಯನ್ನು ಮತ್ತಷ್ಟು ವಿಸ್ತರಿಸಿದರು.

ದ್ವಿತೀಯಾರ್ಧದಲ್ಲೂ ಡಚ್ ಆಟಗಾರ್ತಿಯರ ಪ್ರಾಬಲ್ಯ ಮುಂದುವರಿಯಿತು.

ಶೂಟಿಂಗ್: ಭಾರತ ಆಟಗಾರನಿಂದ ಹೊಸ ದಾಖಲೆ

ದಿವ್ಯಾಂಶ್ ಪನ್ವಾರ್‌ಗೆ ಚಿನ್ನದ ಪದಕ



ದಿವ್ಯಾಂಶ್ ಸಿಂಗ್ ಪನ್ವರ್

ಕೈರೊ (ಪಿಟಿಐ): ಭಾರತದ ದಿವ್ಯಾಂಶ್ ಸಿಂಗ್ ಪನ್ವರ್ ಭಾನುವಾರ ನಡೆದ ಐಎಸ್‌ಎಸ್‌ಎಫ್ ವಿಶ್ವಕಪ್‌ನ ಪುರುಷರ 10 ಮೀಟರ್ ಏರ್ ರೈಫಲ್ ಫೈನಲ್‌ನಲ್ಲಿ ಹೊಸ ದಾಖಲೆ ನಿರ್ಮಿಸಿದರು. ಈ ಮೂಲಕ ದೇಶಕ್ಕೆ ಎರಡನೇ ಚಿನ್ನದ ಪದಕ ಗೆದ್ದುಕೊಟ್ಟರು.

ಈಜಿಪ್ಟ್ ಇಂಟರ್‌ನ್ಯಾಷನಲ್ ಒಲಿಂಪಿಕ್ ಸಿಟಿ ಶೂಟಿಂಗ್‌ನಲ್ಲಿ 21 ವರ್ಷದ ಪನ್ವರ್ 253.7 ಅಂಕಗಳನ್ನು ಗಳಿಸುವ ಮೂಲಕ ಕಳೆದ ವರ್ಷ ಹಾಂಗ್‌ಝೌನಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಚೀನಾದ ಶೆಂಗ್ ಲಿಹಾವೊ ಅವರ 253.3 ಅಂಕಗಳನ್ನು ಹಿಂದಿಕ್ಕಿದ್ದರು.

ವಿಶ್ವ ದರ್ಜೆಯ 632.4 ಅಂಕಗಳೊಂದಿಗೆ ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ ಪಡೆಯುವ ಮೂಲಕ ದಿವ್ಯಾಂಶ್ ಆರಂಭಿಕ ಫಾರ್ಮ್ ತೋರಿಸಿದ್ದರು. ನಂತರ 24 ಶಾಟ್‌ಗಳ ಫೈನಲ್‌ನಲ್ಲಿ ನಿಖರ ಶೂಟಿಂಗ್‌ನೊಂದಿಗೆ ಮೇಲುಗೈ ಸಾಧಿಸಿದರು. ಬೆಳ್ಳಿ ಪದಕ ವಿಜೇತ ಇಟಲಿಯ ಡ್ಯಾನಿ ಸೊಲ್ಲಾಜೊ ಅವರನ್ನು 1.9 ಅಂಕಗಳಿಂದ ಹಿಂದಿಕ್ಕಿದರು.

ಸರ್ಬಿಯಾದ ಲಾಜರ್ ಕೊವಾಸೆವಿಕ್ ಕಂಚಿನ ಪದಕ ಗೆದ್ದರೆ, ಫೈನಲ್‌ನಲ್ಲಿ ಭಾರತದ ಅರ್ಜುನ್ ಬಬುಟಾ ಆರನೇ ಸ್ಥಾನ ಪಡೆದರು.

'ಬಹಳ ಸಮಯದ ನಂತರ ಚಿನ್ನ ಗೆದ್ದಿರುವುದಕ್ಕೆ ಸಂತೋಷವಾಗಿದೆ. ಇತ್ತೀಚಿನ ದಿನಗಳಲ್ಲಿ ಚೆನ್ನಾಗಿ ಶೂಟಿಂಗ್ ಮಾಡುತ್ತಿದ್ದೆ. ಈ ಪದಕ ಮುಂಬರುವ ಟೂರ್ನಿಗಳಿಗೆ ಮತ್ತಷ್ಟು ವಿಶ್ವಾಸ ನೀಡುತ್ತದೆ' ಎಂದು ದಿವ್ಯಾಂಶ್ ಗೆಲುವಿನ ನಂತರ ಹೇಳಿದರು.

ಒಲಿಂಪಿಕ್ ವರ್ಷದ ಮೊದಲ ಐಎಸ್‌ಎಸ್‌ಎಫ್ ವಿಶ್ವಕಪ್ ಸ್ಪರ್ಧೆಯಲ್ಲಿ ಭಾರತ ಈಗ ಎರಡು ಚಿನ್ನ ಮತ್ತು ಎರಡು ಬೆಳ್ಳಿ ಪದಕಗಳನ್ನು ಗೆದ್ದಿದೆ.

ಹಾಕಿ: ಪುರುಷರ ತಂಡಕ್ಕೆ ಸೋಲು

ಕೇಪ್‌ಟೌನ್ (ಪಿಟಿಐ): ಭಾರತ ಪುರುಷರ ಹಾಕಿ ತಂಡ ಭಾನುವಾರ ನೆದರ್ಲೆಂಡ್ಸ್ ವಿರುದ್ಧ 1–5 ಗೋಲುಗಳ ಅಂತರದಿಂದ ಸೋಲುವುದರೊಂದಿಗೆ ದಕ್ಷಿಣ ಆಫ್ರಿಕಾ ಪ್ರವಾಸವನ್ನು ಕೊನೆಗೊಳಿಸಿತು.

ಭಾರತದ ಪರ ಅಭಿಷೇಕ್ (39ನೇ ನಿಮಿಷ) ಏಕೈಕ ಗೋಲು ಗಳಿಸಿದರೆ, ನೆದರ್ಲೆಂಡ್ಸ್ ಪರ ಜಿಪ್ ಜಾನ್ಸೆನ್ (10, 28ನೇ ನಿ.), ಡುಕೊ ಟೆಲ್ಗೆನ್‌ಕ್ಯಾಂಪ್ (16ನೇ ನಿ.), ಟ್ಜೆಪ್ ಹೋಡೆಮೇಕರ್ಸ್ (21ನೇ ನಿ.) ಮತ್ತು ಕೊಯೆನ್ ಬಿಜೆನ್ (35ನೇ ನಿ.) ತಲಾ ಒಂದು ಗೋಲು ಗಳಿಸಿದರು.

ಪಂದ್ಯದ 10ನೇ ನಿಮಿಷದಲ್ಲಿ ಜಾನ್ಸೆನ್ ಗೋಲು ಬಾರಿಸಿ ನೆದರ್ಲೆಂಡ್ಸ್ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಸತತ ದಾಳಿಗಳ ಹೊರತಾಗಿಯೂ, ಮೊದಲ ಕ್ವಾರ್ಟರ್ ಅಂತ್ಯದ ವೇಳೆಗೆ ಭಾರತಕ್ಕೆ ಹಿನ್ನಡೆ ಸರಿದೂಗಿಸಲು ಸಾಧ್ಯ-ವಾಗಲಿಲ್ಲ. ಎರಡನೇ ಕ್ವಾರ್ಟರ್‌ನ ಆರಂಭದಲ್ಲಿ ಟೆಲ್ಗೆನ್‌ಕ್ಯಾಂಪ್ ತಮ್ಮ ತಂಡದ ಮುನ್ನಡೆ ಹೆಚ್ಚಿಸಿದರು. ಇದಾದ ಕೆಲವೇ ನಿಮಿಷಗಳಲ್ಲಿ ನೆದರ್ಲೆಂಡ್ಸ್ ಪರ ಹೋಡೆಮೇಕರ್ಸ್ ಮೂರನೇ ಗೋಲ್ ಬಾರಿಸಿ ಮತ್ತಷ್ಟು ಒತ್ತಡ ಹೇರಿದರು.

ಪ್ರೊ ಕಬಡ್ಡಿ: ಬೆಂಗಳೂರು, ಪ್ಯಾಂಥರ್ಸ್ ಪಂದ್ಯ ಟೈ



ಪ್ರೊ ಕಬಡ್ಡಿ ಟೂರ್ನಿಯಲ್ಲಿ ಬೆಂಗಳೂರು ಬುಲ್ಸ್ ಮತ್ತು ಜೈಪುರ ಪಿಂಕ್ ಪ್ಯಾಂಥರ್ಸ್ ನಡುವೆ ಹಣಾಹಣಿ.

ಪಟ್ನಾ (ಪಿಟಿಐ): ರಣಸಿಂಗ್ ಮತ್ತು ಮೋನು ಅವರ ಅಮೋಘ ಆಟದಿಂದಾಗಿ ಬೆಂಗಳೂರು ಬುಲ್ಸ್ ತಂಡವು ಭಾನುವಾರ ಪ್ರೊ ಕಬಡ್ಡಿ ಟೂರ್ನಿಯಲ್ಲಿ ಸೋಲಿನ ದವಡೆಯಿಂದ ತಪ್ಪಿಸಿಕೊಂಡಿತು.

ಇದರೊಂದಿಗೆ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡದ ಎದುರಿನ ಪಂದ್ಯವು ರೋಚಕ ಟೈ ಆಯಿತು.

ಪಾಟಲೀಪುತ್ರ ಒಳಾಂಗಣ ಕ್ರೀಡಾಂ-ಗಣದಲ್ಲಿ ನಡೆದ ಪಂದ್ಯದಲ್ಲಿ ಉಭಯ ತಂಡಗಳು 28–28ರ ಸಮಬಲ ಸಾಧನೆ ಮಾಡಿದವು. ಪಂದ್ಯದ ಪ್ರಥಮಾರ್ಧದ-ಲ್ಲಿ ಬೆಂಗಳೂರು ತಂಡವು 15–11ರಿಂದ ಮುನ್ನಡೆಯಲ್ಲಿತ್ತು.

ವಿರಾಮದ ನಂತರ ವೇಗದ ಆಟಕ್ಕೆ ಒತ್ತು ನೀಡಿದ ಜೈಪುರ ತಂಡದವರು ಪಟಪಟನೇ ಪಾಯಿಂಟ್ ಕಲೆಹಾಕಿದರು. ಇದರಿಂದಾಗಿ ಒಂದು ಹಂತದಲ್ಲಿ ಬೆಂಗಳೂರು ತಂಡವು ತುಸು ಹಿನ್ನಡೆ-ಯಲ್ಲಿತ್ತು. ಈ ಹಂತದಲ್ಲಿ ಬುಲ್ಸ್ ರೇಡರ್ ಮೋನು (6) ಮತ್ತು ರಣಸಿಂಗ್ (5) ಚುರುಕಿನ ಆಟದ ಮೂಲಕ ತಂಡದ ಸೋಲಿನ ಅಪಾಯವನ್ನು ತಪ್ಪಿಸಿದರು.

ದಿನದ ಇನ್ನೊಂದು ಪಂದ್ಯದಲ್ಲಿ ತಮಿಳ್ ತಲೈವಾಸ್ ತಂಡವು 50–34 ರಿಂದ ಯು ಮುಂಬಾ ವಿರುದ್ಧ ಜಯಗಳಿಸಿತು.

ತಲೈವಾಸ್ ತಂಡದ ರೇಡರ್ ನರೇಂದರ್ 13 ಅಂಕ ಗಳಿಸಿದರು. ಅಜಿಂಕ್ಯ ಪವಾರ್ ಕೂಡ 10 ಅಂಕ ಕಲೆಹಾಕಿ ತಂಡದ ಜಯಕ್ಕೆ ಕಾಣಿಕೆ ನೀಡಿದರು.

ಇಂದಿನ ಪಂದ್ಯಗಳು: ಹರಿಯಾಣ ಸ್ಟೀಲರ್ಸ್–ಬೆಂಗಾಲ್ ವಾರಿಯರ್ಸ್

ಪಟ್ನಾ ಪೈರೇಟ್ಸ್–ಗುಜರಾತ್ ಜೈಂಟ್ಸ್